ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 6 ಬುಧವಾರ 2023

ಸಂಪುಟ: 44 | ಸಂಚಿಕೆ: 142 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಅರಮನೆ ಅಂಗಳದಲ್ಲಿ ಆನೆಗಳ ಆಹಾರ ವಿಹಾರ!

- ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ಗಜಪಡೆ ಎಂಟು ಆನೆಗಳು ಬಿಡಾರ
- ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಬರಮಾಡಿಕೊಂಡ ಅರಮನೆ ಮಂಡಳಿ
- ಹುಲಿ ಸೆರೆ ಕಾರ್ಯಾಚರಣೆ ಕರ್ತವ್ಯಕ್ಕೆ ತೆರಳಿದ ಅರ್ಜುನ

ಮೈಸೂರು, ಸೆ.5(ಎಂಟಿವೈ)–ದಸರಾ ಉತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಕ್ಯಾಂಪ್‌ಗಳಿಂದ ಆಗಮಿಸಿ ಮೈಸೂರು ಅಶೋಕಪುರಂನ ಅರಣ್ಯ ಭವನದಲ್ಲಿ ನಾಲ್ಕು ದಿನಗಳಿಂದ ಬೀಡು ಬಿಟ್ಟಿದ್ದ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಎಂಟು ಆನೆಗಳು ಇಂದು ಮೈಸೂರು ಅರಮನೆ ಆವರಣ ಪ್ರವೇಶಿಸಿದವು.

ಸೆ.1ರಂದು ಸಂಜೆ ಮೈಸೂರು ತಲುಪಿದ್ದ ದಸರಾ ಗಜಪಡೆಯ 9 ಆನೆಗಳಲ್ಲಿ ಅರ್ಜುನ, ಹುಲಿ ಕಾರ್ಯಾಚರಣೆಗೆ ತೆರಳಿದ್ದಾನೆ. ಹೆಚ್.ಡಿ.ಕೋಟೆಯಲ್ಲಿ ಬಾಲಕನ ಮೇಲೆ ದಾಳಿ ಮಾಡಿದ ಹುಲಿ ಸೆರೆ ಕಾರ್ಯಾಚರಣೆಗಾಗಿ ಅರ್ಜುನನ ಕರೆದೊಯ್ದ ಹಿನ್ನೆಲೆಯಲ್ಲಿ 8 ಆನೆಗಳು ಮಂಗಳವಾರ ಮಧ್ಯಾಹ್ನ 12.01ರಿಂದ 12.51ರವರೆಗೆ ಸಲ್ಲುವ ಶುಭ ಅಭಿಜಿನ್ ಲಗ್ನದಲ್ಲಿ ಗಜಪಡೆ ಎಂಟು ಸದಸ್ಯರು ಜಯಮಾರ್ತಾಂಡ ದ್ವಾರದ ಮೂಲಕ ಅರಮನೆ ಪ್ರವೇಶಿಸಿದವು.

ಅರಣ್ಯ ಭವನದಿಂದ ಮೆರವಣಿಗೆಯಲ್ಲಿ ಆಗಮಿಸಿದ ಗಜಪಡೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಾಂಪ್ರದಾಯಿಕ ಪೂಜೆ ಸಲ್ಲಿಸುವ ಮೂಲಕ ಸ್ವಾಗತಿಸಿದರು. ಮಧ್ಯಾಹ್ನ 12.20ಕ್ಕೆ ಜಯಮಾರ್ತಾಂಡ ದ್ವಾರ ಹಾದು ಬಂದ ಆನೆಗಳು ಮಂಗಳವಾದ್ಯ, ಪೊಲೀಸ್ ಬ್ಯಾಂಡ್, ಡೊಳ್ಳು ಕುಣಿತ, ಕಂಸಾಳೆ, ಮಹಿಳಾ ಡೊಳ್ಳು ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಅರಮನೆ ಆವರಣಕ್ಕೆ ಆಗಮಿಸಿದವು. ಅರಮನೆ ಆವರಣದಲ್ಲಿ ನಡೆದ ಗಜಪಡೆಯ ವಿಧ್ಯುಕ್ತ ಸ್ವಾಗತ


● 3ನೇ ಪುಟಕ್ಕೆ

ವಿಜಯನಗರ ವೈಭವ ಬಿಂಬಿಸುವಂತೆ ದಸರಾ ಆಚರಣೆ

ಮೈಸೂರು, ಸೆ.5 (ಎಂಟಿವೈ)–ಪ್ರಸ್ತುತ ಸಾಲಿನ ನಾಡಹಬ್ಬ ದಸರಾವನ್ನು ಮೈಸೂರು ಪರಂಪರೆ ಹಾಗೂ ವಿಜಯನಗರದ ವೈಭವವನ್ನು ಬಿಂಬಿಸುವಂತೆ ಅರ್ಥಪೂರ್ಣವಾಗಿ ಆಚರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರು ಅರಮನೆ ಆವರಣದಲ್ಲಿ ಗಜಪಡೆಗೆ ಪೂಜೆ ಸಲ್ಲಿಸಿ, ಸ್ವಾಗತಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದಸರಾಗೆ 30 ಕೋಟಿ ರೂ. ಅನುದಾನ ಕೇಳಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಲಿದ್ದಾರೆ. ಈ ಬಾರಿ ದಸರಾವನ್ನು ಯಶಸ್ವಿಯಾಗಿ ನಡೆಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರು, ಜಿಲ್ಲಾ ಎಸ್ಪಿಗೆ ಸೂಚನೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಅರಮನೆ ಮಂಡಳಿ ಹಾಗೂ ಜಿಲ್ಲೆಯ ಪೊಲೀಸರಿಗೆ ವಿಶೇಷ ಜವಾಬ್ದಾರಿ ನೀಡಲಾಗಿದೆ ಎಂದರು.

ಗಜಪಡೆ ತಾಲೀಮಿಗೆ ಬಂದೋಬಸ್ತ್: ಅರಮನೆ ಪ್ರವೇಶಿಸಿರುವ ದಸರಾ ಗಜಪಡೆಗೆ ಪ್ರತಿದಿನ ತಾಲೀಮು ನಡೆಸುವ ವೇಳೆ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲು ಸೂಚನೆ ನೀಡಲಾಗುವುದು. ದಸರಾ ಮಹೋತ್ಸವದಲ್ಲಿ ಭಾಗವಹಿಸುವ ಆನೆಗಳ ಮಾವುತರು ಹಾಗೂ ಕಾವಾಡಿಗಳು, ಅವರ ಕುಟುಂಬಕ್ಕೆ ಇಲ್ಲಿ ಮೂಲ ಸೌಕರ್ಯ ಕಲ್ಪಿಸಲಾಗಿದೆ. ಈಗಾಗಲೇ ಅರಮನೆ ಆವರಣದಲ್ಲಿ 30ಕ್ಕೂ ಹೆಚ್ಚು ಸುಸಜ್ಜಿತ ಶೆಡ್ ನಿರ್ಮಾಣ ಮಾಡಲಾಗಿದೆ. ಅವರಿಗೆ ವಿಶೇಷ ಭೋಜನದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ತಿಳಿಸಿದರು.



ಮಾವುತರ ಮಕ್ಕಳಿಗಾಗಿ ಟೆಂಟ್ ಶಾಲೆ: ದಸರಾ ಗಜಪಡೆಯೊಂದಿಗೆ ಅರಮನೆ ಆವರಣದಲ್ಲಿ ಬೀಡು ಬಿಡುವ ಮಾವುತರು ಮತ್ತು ಕಾವಾಡಿಗರ ಕುಟುಂಬದ ಹಿತ ಕಾಯಲು, ಅವರ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಲಾಗುತ್ತದೆ. ಇದಕ್ಕಾಗಿ ಅರಮನೆ ಆವರಣದಲ್ಲಿ ತಾತ್ಕಾಲಿಕ ಶಾಲೆ ಆರಂಭಿಸಲಾಗುವುದು. ಮಾವುತರ ಮಕ್ಕಳು ವಾಪಸ್ ಶಿಬಿರಕ್ಕೆ ಹೋಗುವವರೆಗೂ ಶಿಕ್ಷಕರು ಮಕ್ಕಳಿಗೆ ವಿದ್ಯಾಭ್ಯಾಸ ನೀಡಲಿದ್ದಾರೆ ಎಂದು ಹೇಳಿದರು.

ದಸರಾ ಕಾಮಗಾರಿ ಗುಣಾತ್ಮಕವಾಗಿರುತ್ತದೆ: ದಸರಾ ಮಹೋತ್ಸವ ಆಚರಣೆಗಾಗಿ ಮೈಸೂರಿನ ವಿವಿಧೆಡೆ ನಡೆಸುವ ಕಾಮಗಾರಿಗಳಲ್ಲಿ ಗುಣಾತ್ಮಕತೆ ಕಾಪಾಡಿಕೊಳ್ಳಲು ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ. ಇದಕ್ಕೆ ಅಗತ್ಯ ಅನುದಾನವನ್ನು ಬಿಡುಗಡೆಗೊಳಿಸುವಂತೆ ಆರ್ಥಿಕ ಇಲಾಖೆಗೆ ಈಗಾಗಲೇ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ. ಕಳೆದ ಬಾರಿ ನಾನು ಲೋಕೋಪಯೋಗಿ ಸಚಿವನಾಗಿದ್ದಾಗಲೇ ಮೈಸೂರಿನಲ್ಲಿ ಅನೇಕ ಗುಣಾತ್ಮಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಅದರಂತೆ ದಸರಾಗೆ ಅಗತ್ಯವಿರುವ ಕಾಮಗಾರಿ ನಡೆಸುತ್ತೇವೆ ಎಂದರು.

ಎರಡು ತಾಲೂಕಿನಲ್ಲಿ ಬರ: ಮೈಸೂರು ಜಿಲ್ಲೆಯಲ್ಲಿ ಬರಪೀಡಿತ ತಾಲೂಕುಗಳ ಗುರುತಿಸಲು ಕ್ರಮ ಕೈಗೊಳ್ಳಲಾಗಿದೆ. ಇದಕ್ಕೆ ನಿಗದಿ

● 3ನೇ ಪುಟಕ್ಕೆ

SSLC, ದ್ವಿತೀಯ PU ವಿದ್ಯಾರ್ಥಿಗಳಿಗೆ ವರ್ಷಕ್ಕೆ 3 ಪರೀಕ್ಷೆ

ಕೆಲ ವಿಷಯದಲ್ಲಿ ಫೇಲ್ ಆದರೂ ಪಾಸ್!

- ಇತರೆ ವಿಷಯಗಳಲ್ಲಿ ಪಡೆದ ಅಂಕಗಳ ಪರಿಗಣಿಸಿ ಮುಂದಿನ ತರಗತಿಗೆ ಅವಕಾಶ
- ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಣೆ
- ವೃತ್ತಿ ಶಿಕ್ಷಣಕ್ಕೆ ಪೂರಕವಾಗಿ ಈ ನಿರ್ಧಾರ



ಬೆಂಗಳೂರು, ಸೆ.5(ಕೆಎಂಶಿ)– ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಮೂರು ಬಾರಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಇಂದಿಲ್ಲಿ ತಿಳಿಸಿದ್ದಾರೆ.

ವೃತ್ತಿ ಶಿಕ್ಷಣ ಪ್ರವೇಶಿಸುವ ಘಟ್ಟದಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗಿ ಬದುಕಿನಲ್ಲಿ ವೈಫಲ್ಯ ಎದುರಿಸುವುದನ್ನು ತಪ್ಪಿಸಲು ಎರಡು ಪರೀಕ್ಷೆಗಳ ಬದಲು ಮೂರು ಪೂರಕ ಪರೀಕ್ಷೆ ಬರೆಯಲು ಅವಕಾಶ ಸಿಗಲಿದೆ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾದರೆ ಮುಂದಿನ ತರಗತಿಗಳಿಗೆ ಪ್ರವೇಶಿಸಲು ಅವಕಾಶವಾಗುವಂತೆ ಈ ಕ್ರಮಕ್ಕೆ ಮುಂದಾಗಿದೆ. ಅನುತ್ತೀರ್ಣರಾದವರಿಗೆ ಶಿಕ್ಷಣ ಇಲಾಖೆ ಇದುವರೆಗೆ ಎರಡು ಪರೀಕ್ಷೆ ನಡೆಸುತ್ತಿತ್ತು, ಶೈಕ್ಷಣಿಕ ಪ್ರಗತಿ, ಅರ್ಥಪೂರ್ಣ ಕಲಿಕೆ, ಜ್ಞಾನ ಹೆಚ್ಚಿಸುವ ದೃಷ್ಟಿಯಿಂದ ಈ ತೀರ್ಮಾನ ಕೈಗೊಂಡಿದ್ದೇವೆ.

● 9ನೇ ಪುಟಕ್ಕೆ

SSLC ಸಂಭವನೀಯ ಪರೀಕ್ಷಾ ವೇಳಾಪಟ್ಟಿ

ಪರೀಕ್ಷೆ–1: ಮಾರ್ಚ್ 1ರಿಂದ 25ರವರೆಗೆ ನಡೆಯಲಿದ್ದು, ಏಪ್ರಿಲ್ 22ಕ್ಕೆ ಫಲಿತಾಂಶ ಹೊರಬೀಳುವ ಸಾಧ್ಯತೆ ಇದೆ.
ಪರೀಕ್ಷೆ–2: ಮೇ 15ರಿಂದ ಜೂನ್ 5ರವರೆಗೆ ನಡೆಯಲಿದ್ದು, ಫಲಿತಾಂಶ ಜೂನ್ 21ರಂದು ಹೊರಬೀಳಲಿದೆ.
ಪರೀಕ್ಷೆ–3: ಜುಲೈ 12ರಿಂದ ಜುಲೈ 30ರವರೆಗೆ ನಡೆಯಲಿದ್ದು, ಆಗಸ್ಟ್16ರಂದು ಫಲಿತಾಂಶ ಹೊರಬರಲಿದೆ.

ಪಿಯುಸಿ ಸಂಭವನೀಯ ಪರೀಕ್ಷಾ ವೇಳಾಪಟ್ಟಿ

ಪರೀಕ್ಷೆ–1: ಮಾರ್ಚ್ 30ರಿಂದ ಏಪ್ರಿಲ್ 15ರವರೆಗೆ ನಡೆಯಲಿದ್ದು, ಮೇ 8ರಂದು ಫಲಿತಾಂಶ ಬರಲಿದೆ.
ಪರೀಕ್ಷೆ–2: ಜೂನ್ 12ರಿಂದ ಜೂನ್ 19ರವರೆಗೆ ನಡೆಯಲಿದ್ದು, ಜೂನ್ 29ರಂದು ಫಲಿತಾಂಶ ಬಿಡಲಾಗುತ್ತದೆ.
ಪರೀಕ್ಷೆ–3: ಜುಲೈ 29ರಿಂದ ಆಗಸ್ಟ್ 5ರವರೆಗ ನಡೆಯಲಿದ್ದು, ಆಗಸ್ಟ್ 19ರಂದು ಫಲಿತಾಂಶ ಹೊರಬೀಳೋ ಸಾಧ್ಯತೆ ಇದೆ.

ಜಿ20 ಆಹ್ವಾನ ಪತ್ರಿಕೆಯಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ್'

- ಒಕ್ಕೂಟದ ಮೇಲೆ ಆಕ್ರಮಣ; ಕಾಂಗ್ರೆಸ್
- ಭಾರತ ಬದಲಾವಣೆ ಹೆಮ್ಮೆ; ಬಿಜೆಪಿ
- ಭಾರತ್ ಮಾತಾ ಕಿ ಜೈ: ಬಿಗ್ 'ಬಿ'



ನವದೆಹಲಿ, ಸೆ.5– ರಾಷ್ಟ್ರಪತಿಗಳ ಕಚೇರಿಯಿಂದ ಜಿ–20 ಪ್ರತಿನಿಧಿಗಳಿಗೆ ಕಳುಹಿಸಲಾದ ಔತಣ ಕೂಟದ ಆಮಂತ್ರಣದಲ್ಲಿ ದ್ರೌಪದಿ ಮುರ್ಮು ಅವರನ್ನು 'ಪ್ರೆಸಿಡೆಂಟ್ ಆಫ್ ಇಂಡಿಯಾ' ಬದಲಿಗೆ 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ನಮೂದಾಗಿರುವುದಕ್ಕೆ ಕಾಂಗ್ರೆಸ್ ಆಕ್ಷೇಪಿಸಿದೆ. ಟ್ವಿಟರ್‌ನಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಸಂವಿಧಾನ ಒಂದನೇ ವಿಧಿಯಡಿ, ಭಾರತ, ಅದು ಇಂಡಿಯಾ, ರಾಜ್ಯಗಳ ಒಕ್ಕೂಟ ಎಂದು ಕರೆಯಲಾಗುತ್ತಿತ್ತು. ಆದರೆ ಈಗ ಈ ರಾಜ್ಯಗಳ ಒಕ್ಕೂಟ ಆಕ್ರಮಣಕ್ಕೆ ಒಳಗಾಗಿದೆ ಎಂದು ಆಕ್ರೋಶ ಹೊರ ಹಾಕಿದ್ದಾರೆ. ಇತ್ತ ಬಿಜೆಪಿ ನಾಯಕರು 'ಭಾರತ' ಬದಲಾವಣೆ ಹೆಮ್ಮೆ ವಿಚಾರ ಎಂದು ಪ್ರತಿಕ್ರಿಯಿಸಿದ್ದಾರೆ.

ಜಿ–20 ಆಮಂತ್ರಣ ಪತ್ರಿಕೆಯಲ್ಲಿ ಸೆ.9ರಂದು ಜಿ–20 ಪ್ರತಿನಿಧಿಗಳಿಗೆ ಭೋಜನ ಕೂಟವನ್ನು ಭಾರತದ ರಾಷ್ಟ್ರಪತಿಗಳು ಆಯೋಜಿಸುತ್ತಾರೆ ಎಂದು ಆಹ್ವಾನ ಪತ್ರಿಕೆಯಲ್ಲಿ ಮುದ್ರಿತವಾಗಿದೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಅವರು ಇಂಡಿಯಾ ಎಂದು ಹೇಳುವುದನ್ನು ಇನ್ನು ಬಿಡಿ, ಭಾರತ ಎಂದು ಹೇಳಿ ಎಂದು ಮನವಿ ಮಾಡಿಕೊಂಡ ನಂತರ ಈ ಬೆಳವಣಿಗೆ ಆಗಿದೆ.

ಬಿಗ್ 'ಬಿ' ಹೆಮ್ಮೆ: 'ಇಂಡಿಯಾ' ಹೆಸರಿನ ಬದಲಿಗೆ 'ಭಾರತ್' ಎಂದು ಬಳಸುವ ಬಗ್ಗೆ ಎದ್ದಿರುವ ವಿವಾದದ ನಡುವೆ ಲೆಜೆಂಡರಿ ನಟ ಅಮಿತಾಬ್ ಬಚ್ಚನ್ ಟ್ವೀಟ್ ಅಭಿಮಾನಿಗಳ ಗಮನ ಸೆಳೆದಿದೆ. ಮಂಗಳವಾರ ಎಕ್ಸ್‌ನಲ್ಲಿ ಅಮಿತಾಬ್ ಹಿಂದಿಯಲ್ಲಿ 'ಭಾರತ್ ಮಾತಾಕಿ ಜೈ' ಎಂದು ಬರೆದುಕೊಂಡಿದ್ದಾರೆ.

● 9ನೇ ಪುಟಕ್ಕೆ

ಹಿಂದೆ ಶಿಕ್ಷಣ ಸನಾತನವಾದಿಗಳ ಸ್ವತ್ತಾಗಿತ್ತು...!

- ಶೂದ್ರರು ಶಿಕ್ಷಣ ಕಲಿಯದಂತೆ ಲಕ್ಷ್ಮಣ ರೇಖೆ ಹಾಕಿದ್ದರು
- ಮರೆಮಾಚಿ ಅಕ್ಷರ ಕಲಿತವರ ಕಿವಿಗೆ ಕಾಯಿಸಿದ ಎಣ್ಣೆ ಬಿಡುತ್ತಿದ್ದರು
- ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಘೋರ ವಿವರಣೆ

ಮೈಸೂರು, ಸೆ.5(ಬಿಎಲ್‌ಯು)– ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣ ಸನಾತನವಾದಿಗಳ ಕಪಿಮುಷ್ಠಿಯಲ್ಲಿ ಇದ್ದ ಕಾರಣ ಬಹುತೇಕ ಭಾರತೀಯರು ಅಕ್ಷರದಿಂದ ವಂಚಿತರಾಗಿದ್ದರು. ಇದರಿಂದ ಭಾರತದಲ್ಲಿ ಸಾಕ್ಷರತೆ ಪ್ರಮಾಣ ಶೇ.10ರಷ್ಟು ಇತ್ತು ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಭಾರತದ ಪ್ರಾಚೀನ ಶಿಕ್ಷಣ ಪದ್ಧತಿ ಬಗ್ಗೆ ವಿಷಾದ ವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಇಂದು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಶೂದ್ರರು ಶಿಕ್ಷಣ ಕಲಿಯದಂತೆ ಸನಾತನವಾದಿಗಳು ಲಕ್ಷ್ಮಣ ರೇಖೆ ಹಾಕಿದ್ದರು. ಇದರಿಂದ ಅವರೆಲ್ಲರೂ ಶಿಕ್ಷಣದ ಬೆಳಕು ಕಾಣದೆ ಅಜ್ಞಾನದ ಕತ್ತಲಲ್ಲಿ ಬದುಕುತ್ತಿದ್ದರು ಎಂದು ಹೇಳಿದರು. ಒಂದು ವೇಳೆ ಶೂದ್ರರು ಶಿಕ್ಷಣ ಕಲಿಯಲು ಮುಂದಾದರೆ ಎಣ್ಣೆ ಕಾಯಿಸಿ ಕಿವಿಯೊಳಗೆ ಬಿಡುತ್ತಿದ್ದ ಘೋರ ಪರಿಸ್ಥಿತಿ ಇತ್ತು. ಇದರಿಂದ ಭಯಭೀತರಾದ ಶೂದ್ರರು ಅಕ್ಷರ ಕಲಿಯಲಿಲ್ಲ. ಈ ಕಾರಣದಿಂದ ಶಿಕ್ಷಣ ಸನಾತನವಾದಿಗಳ ಸ್ವತ್ತಾಗಿತ್ತು ಎಂದು ಡಾ.ಮಹದೇವಪ್ಪ ಸ್ವಾತಂತ್ರ್ಯಪೂರ್ವದ ಶಿಕ್ಷಣ ವ್ಯವಸ್ಥೆಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.



ಮೈಸೂರಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೇತೃತ್ವದಲ್ಲಿ ಪುಷ್ಪಾರ್ಚನೆ ಮಾಡಲಾಯಿತು.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಪುತ್ರ ಕ್ರೀಡಾ ಸಚಿವ ಉದಯನಿಧಿ ಸ್ಟಾಲಿನ್ ಸನಾತನ ಧರ್ಮದ ಬಗ್ಗೆ ನೀಡಿರುವ ವಿವಾದಿತ ಹೇಳಿಕೆ ಭಾರತದ ರಾಜಕಾರಣದಲ್ಲಿ ವಾದ–ಪ್ರತಿವಾದಕ್ಕೆ ಕಾರಣವಾಗಿರುವ ಈ ಸಂದರ್ಭದಲ್ಲಿ ಸನಾತನವಾದಿಗಳ ಕುರಿತು ಡಾ.ಮಹದೇವಪ್ಪ ಇಂದು ನೀಡಿರುವ ಈ ಹೇಳಿಕೆ ಕೂಡ ಮಹತ್ವ ಪಡೆದುಕೊಂಡಿದೆ.

ಸನಾತನವಾದಿಗಳ ಕೈಯ್ಯಲ್ಲಿ ಶಿಕ್ಷಣ ಇದ್ದ ಸಮಯದಲ್ಲಿ ಬ್ರಿಟಿಷ್ ಅಧಿಕಾರಿ ಲಾರ್ಡ್ ಮೆಕಾಲೆ ಶಿಕ್ಷಣವನ್ನು ಸರಳೀಕರಣಗೊಳಿಸಿದರು. ಜೊತೆಗೆ ಇಂಗ್ಲಿಷ್ ಭಾಷೆಯನ್ನು ಭಾರತದಲ್ಲಿ ಪರಿಚಯಿಸಿದರು. ಇದರ ಪರಿಣಾಮ ಭಾರತದಲ್ಲಿ ದಿನಕಳೆದಂತೆ ಸಾಕ್ಷರತೆ ಪ್ರಮಾಣ ಹೆಚ್ಚಾಯಿತು. ಡಾ.ಅಂಬೇಡ್ಕರ್ ವಿದ್ಯಾಭ್ಯಾಸ ಮಾಡಲು ಸಾಧ್ಯವಾಯಿತು. ಶಿಕ್ಷಣ ಕಲಿಯದಿದ್ದರೆ

● 7ನೇ ಪುಟಕ್ಕೆ

ಮೈಸೂರು ಮಿತ್ರ ಬುಧವಾರ 6 ಸೆಪ್ಟೆಂಬರ್ 2023

ಭಾರತದ ಜ್ಞಾನ ಸಂಪತ್ತಿಗೆ ಶಿಕ್ಷಕರ ಕೊಡುಗೆ ಸ್ಮರಣೀಯ

ಮೈಸೂರು ವಿವಿ ಪ್ರಾಧ್ಯಾಪಕ ಡಾ.ಮುಜಾಫರ್ ಅಸಾದಿ



ಮೈಸೂರು,ಸೆ.5(ಬಿಎಲ್‌ಯು)– ಭಾರತದ ಜ್ಞಾನ ಸಂಪತ್ತಿಗೆ ಶಿಕ್ಷಕರು ಮೌಲ್ಯಯುತ ಕೊಡುಗೆ ನೀಡಿದ್ದಾರೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ.ಮುಜಾಫರ್ ಎಚ್.ಅಸಾದಿ ಹೇಳಿದರು.

ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಯ ತಪ್ಪುಗಳನ್ನು ತಿದ್ದಿ, ತೀಡಿ ಪ್ರಜ್ಞಾವಂತ ಪ್ರಜೆಯಾಗಿ ಮಾಡುವಲ್ಲಿ ಶಿಕ್ಷಕರು ಶ್ರಮಿಸಿದ್ದಾರೆ. ಇದರಿಂದ ಶಿಕ್ಷಕರಿಗೆ ಅವರದೇ ಆದ ವ್ಯಕ್ತಿತ್ವ ಹಾಗೂ ಗೌರವವಿದೆ ಎಂದರು.

ವೃತ್ತಿಪರ ಶಿಕ್ಷಣ ವ್ಯವಸ್ಥೆ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ ಎಂದು ತಿಳಿಸಿದರು. ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು ಭಾರತೀಯರ ಸ್ವಾಭಿಮಾನ ಉಳಿಸುವ ನಿಟ್ಟಿನಲ್ಲಿ ಗಟ್ಟಿ ದನಿಯಲ್ಲಿ ಮಾತನಾಡುತ್ತಿದ್ದರು. ಅಂದಿನ ಸಭೆಗಳಲ್ಲಿ ಅವರು ಮಂಡಿಸಿದ ವಿಚಾರಧಾರೆಗಳನ್ನು ಓದುತ್ತಿದ್ದರೆ ಹೆಮ್ಮೆಪಡುವಂತಾಗುತ್ತದೆ ಎಂದು ಡಾ.ಮುಜಾಫರ್ ಅಸಾದಿ ಹೇಳಿದರು.

ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ.ಹೆಚ್.ಬಸವಣ್ಣ ಗೌಡಪ್ಪ, ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಸಿ.ಪಿ.ಮಧು, ನೆಫ್ರೊಲಜಿ ವಿಭಾಗದ ಪ್ರೊ.ಮಂಜುನಾಥ್ ಎಸ್.ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅನಧಿಕೃತ ರೈಲ್ವೇ ಇ–ಟಿಕೆಟ್ ತಯಾರಿಕಾ ಜಾಲ ಭೇದಿಸಿದ ಆರ್‌ಪಿಎಫ್

1.25 ಲಕ್ಷ ರೂ. ಮೌಲ್ಯದ ಕಂಪ್ಯೂಟರ್, ಪ್ರಿಂಟರ್, 2.5 ಲಕ್ಷ ರೂ. ಮೌಲ್ಯದ ಇ-ಟಿಕೆಟ್‌ಗಳ ವಶ



ಮೈಸೂರು,ಸೆ.5(ಆರ್‌ಕೆ)–ಅನಧಿಕೃತವಾಗಿ ರೈಲ್ವೇ ಇ–ಟಿಕೆಟ್ ಸೃಷ್ಟಿಸಿ, ಅತೀ ಬೇಡಿಕೆ ಇದ್ದಾಗ ಹಬ್ಬಗಳಂತಹ ವಿಶೇಷ ದಿನಗಳಲ್ಲಿ ಕಮಿಷನ್‌ಗಾಗಿ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದ ಟ್ರಾವೆಲ್ ಏಜೆಂಟ್ ಜಾಲವನ್ನು ಭೇದಿಸುವಲ್ಲಿ ಆರ್‌ಪಿಎಫ್ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಅನಧಿಕೃತ ಟೌಟ್‌ಗಳನ್ನು ಹತ್ತಿಕ್ಕಲು ಮೈಸೂರಿನ ರೈಲ್ವೇ ಪ್ರೊಟೆಕ್ಷನ್ ಫೋರ್ಸ್‌ನ ವಿಭಾಗೀಯ ಸಂರಕ್ಷಣಾ ಆಯುಕ್ತ ಜೆ.ಕೆ.ಶರ್ಮಾ ಮಾರ್ಗದರ್ಶನದಂತೆ ಸೆ.4ರಂದು ಇನ್ಸ್‌ಪೆಕ್ಟರ್ ಎಂ.ನಿಷಾದ್, ಸಬ್‌ಇನ್ಸ್‌ಪೆಕ್ಟರ್ ಬಿ.ಚಂದ್ರಶೇಖರ್, ಎಎಸ್‌ಐಗಳಾದ ವೆಂಕಟೇಶ್, ಈಶ್ವರರಾವ್ ನೇತೃತ್ವದ ತಂಡವು ಶಿವಮೊಗ್ಗ ಜಿಲ್ಲೆಯಲ್ಲಿ ದಾಳಿ ನಡೆಸಿ ಇ–ಟಿಕೆಟ್ ತಯಾರಿಸುವ ಜಾಲ ಬಯಲಿಗೆಳೆದಿದ್ದಾರೆ. ಕಾರ್ಯಾಚರಣೆ ವೇಳೆ 2.5 ಲಕ್ಷ ರೂ. ಮೌಲ್ಯದ ರೈಲ್ವೇ ಇ–ಟಿಕೆಟ್‌ಗಳು ಮತ್ತು 1.25 ಲಕ್ಷ ರೂ. ಬೆಲೆಬಾಳುವ ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು, ಮೊಬೈಲ್ ಫೋನ್‌ಗಳನ್ನು ಆರ್‌ಪಿಎಫ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ವಿವಿಧ ಫೋನ್ ಸಂಖ್ಯೆಗಳಿಗೆ ಲಿಂಕ್ ಮಾಡಲಾದ ಮಲ್ಟಿ ಪರ್ಸನಲ್ ಐಡಿಗಳನ್ನು ಬಳಸಿ ಹಬ್ಬಗಳಂತಹ ವಿಶೇಷ ದಿನಗಳಲ್ಲಿ ಭಾರಿ ಬೇಡಿಕೆ ಇದ್ದಾಗ ಅಗತ್ಯವಿರುವ ರೈಲ್ವೇ ಪ್ರಯಾಣಿಕರಿಗೆ ಹೆಚ್ಚಿನ ಕಮಿಷನ್ ಪಡೆದು ಇ–ಟಿಕೆಟ್‌ಗಳನ್ನು ಅನಧಿಕೃತವಾಗಿ ಮಾರಾಟ ಮಾಡಲಾಗುತ್ತಿತ್ತು ಎಂಬುದು ತಿಳಿದುಬಂದಿತು.

ಕಾರ್ಯಾಚರಣೆ ವೇಳೆ ಶ್ರೀ ರೇಣುಕಾ ಸೈಬರ್ ಸೆಂಟರ್‌ನ ಗಣೇಶ ರಾಮನಾಯ್ಕ (31), ಶ್ರೀ ಕಮ್ಯುನಿಕೇಷನ್ ಮೊಬೈಲ್ ಸೇಲ್ಸ್‌ನ ರೇವಣ್ಣಪ್ಪ(36) ಹಾಗೂ ಆರ್ಯ ಸೈಬರ್ ವಲಯದ ಪ್ರಶಾಂತ ಹೆಗ್ಡೆ(46) ಬಂಧಿಸಿ ಅವರಿಂದ ಅನಧಿಕೃತ ರೈಲ್ವೇ ಇ–ಟಿಕೆಟ್ ತಯಾರಿಸಲು ಬಳಸುತ್ತಿದ್ದ ಉಪಕರಣ ಹಾಗೂ ಟಿಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪತ್ತೆಕಾರ್ಯದಲ್ಲಿ ಆರ್‌ಪಿಎಫ್‌ನ ಹೆಡ್ ಕಾನ್‌ಸ್ಟೇಬಲ್ ಡಿ.ಚೇತನ್, ಕಾನ್‌ಸ್ಟೇಬಲ್‌ಗಳಾದ ಎ.ಪ್ರವೀಣ್, ಇಳಂಗೋವನ್, ಲಕ್ಷ್ಮಿ, ಸೋಮನ್, ಎಂ.ಎಸ್.ತನುಜಾ ಪಾಲ್ಗೊಂಡಿದ್ದರು.

ಈ ಪತ್ತೆ ಕಾರ್ಯವನ್ನು ಪ್ರಶಂಸಿಸಿರುವ ಮೈಸೂರು ವಿಭಾಗೀಯ ರೈಲ್ವೇ ವ್ಯವಸ್ಥಾಪಕಿ ಶಿಲ್ಪಿ ಅಗರ್‌ವಾಲ್, ರೈಲ್ವೇ ಪ್ರಯಾಣಿಕರ ಹಿತದೃಷ್ಟಿಯಿಂದ ಅನಧಿಕೃತ ಟೌಟ್‌ಗಳು ಮತ್ತು ಟ್ರಾವೆಲ್ ಏಜೆಂಟ್‌ಗಳ ವಿರುದ್ಧ ಆರ್‌ಪಿಎಫ್ ದಾಳಿ ಮುಂದುವರೆಯಲಿದೆ ಎಂದು ತಿಳಿಸಿದ್ದಾರೆ.

ಇಂತಹ ಅನಧಿಕೃತ ರೈಲ್ವೇ ಟಿಕೆಟ್ ಏಜೆಂಟರ್‌ಗಳ ಬಗ್ಗೆ ಪ್ರಯಾಣಿಕರು ಎಚ್ಚರದಿಂದಿರಬೇಕು. ಸಂಶಯ ಬಂದಲ್ಲಿ ರೈಲ್ವೇ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿ ಟಿಕೆಟ್‌ನ ನೈಜತೆ ದೃಢಪಡಿಸಿಕೊಳ್ಳಬೇಕೆಂದು ಅವರು ಸಲಹೆ ನೀಡಿದ್ದಾರೆ.

ಶೇಷಾದ್ರಿಪುರಂ ಪದವಿ ಕಾಲೇಜಲ್ಲಿ ಶಿಕ್ಷಕರ ದಿನಾಚರಣೆ



ಮೈಸೂರು,ಸೆ.5–ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು. ಈ ವೇಳೆ ಶೇಷಾದ್ರಿಪುರಂ ಎಜುಕೇಶನಲ್ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವುಡೆ ಪಿ.ಕೃಷ್ಣ ಮಾತನಾಡಿ, ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಶಿಕ್ಷಕರು ವಹಿಸುವ ನಿರ್ಣಾಯಕ ಪಾತ್ರದ ಬಗ್ಗೆ ತಿಳಿಸಿದರು. ಶಿಕ್ಷಕರು ಕೇವಲ ಶಿಕ್ಷಣಗಾರರಲ್ಲ; ಮಾರ್ಗದರ್ಶಕರು ಮತ್ತು ಆದರ್ಶಪ್ರಾಯರು. ಕನಸುಗಳನ್ನು ಕಲಿಯಲು ಮತ್ತು ಅವರ ಗುರಿಗಳನ್ನು ಸಾಧಿಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತಾರೆ. ಇಂದು ನಾವು ನಮ್ಮ ಜೀವನವನ್ನು ರೂಪಿಸುವ ಅದ್ಭುತ ವ್ಯಕ್ತಿಗಳು ಎಂದು ತಿಳಿಸಿದರು.

ಮೇಯರ್ ಶಿವಕುಮಾರ್ ಅಧಿಕಾರಾವಧಿ ಅಂತ್ಯ

- ಹಂಗಾಮಿ ಮೇಯರ್ ಆಗಿ ಮುಂದುವರೆಯುವ ಸಾಧ್ಯತೆ
- ಮೇಯರ್ ಗಾದಿ ಲಭಿಸುವುದೇ ಆದರೆ 'ಕೈ'ಕಸರತ್ತು!



ಮೈಸೂರು,ಸೆ.5(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್ ಅಧಿಕಾರಾವಧಿ ಮಂಗಳವಾರ ಅಂತ್ಯಗೊಂಡಿದೆ.

ಮುಂದಿನ ಕ್ರಮದ ಬಗ್ಗೆ ಪೌರಾಡಳಿತ ನಿರ್ದೇಶನಾಲಯದಿಂದ ನಗರಪಾಲಿಕೆಗೆ ಈವರೆಗೆ ಯಾವುದೇ ಸೂಚನೆ ಬಂದಿಲ್ಲ ಎನ್ನಲಾಗಿದೆ. ಆದರೆ ನವೆಂಬರ್ 16ರವರೆಗೂ ಪ್ರಸಕ್ತ ಕೌನ್ಸಿಲ್ ಅವಧಿ ಇರುವುದರಿಂದ ಶಿವಕುಮಾರ್ ಹಂಗಾಮಿ ಮೇಯರ್ ಹಾಗೂ ಡಾ.ಜಿ.ರೂಪಾ ಹಂಗಾಮಿ ಉಪ ಮೇಯರ್ ಆಗಿ ಮುಂದುವರೆಯುವ ಸಾಧ್ಯತೆಗಳು ಹೆಚ್ಚಾಗಿದೆ.

ಚುನಾವಣೆ ನಡೆಯಲಿದೆಯೇ?: ಇನ್ನು ಕೇವಲ ಎರಡು ತಿಂಗಳ ಅವಧಿಗೆ ಮೇಯರ್ ಆಯ್ಕೆಗೆ ಸರ್ಕಾರ ಚುನಾವಣೆ ನಡೆಸಲಿದೆಯೇ? ಎಂಬ ಪ್ರಶ್ನೆ ಸದಸ್ಯರಲ್ಲಿದೆ. ಕೂಡಲೇ ಮೀಸಲಾತಿ ಪ್ರಕಟಿಸಿ, ಪ್ರಕ್ರಿಯೆ ಆರಂಭಿಸಿದರೂ ಚುನಾವಣೆ ನಡೆಸಲು 15 ದಿನಗಳ ಕಾಲಾವಕಾಶ ಬೇಕು. ನಂತರ ಉಳಿಯುವುದು ಒಂದೂವರೆ ತಿಂಗಳು ಮಾತ್ರ. ಆದಾಗ್ಯೂ ಕಾಂಗ್ರೆಸ್‌ಗೆ ಮೇಯರ್ ಸ್ಥಾನ ದೊರಕುವ ಸಾಧ್ಯತೆ ನಿರ್ಮಾಣವಾದರೆ ಚುನಾವಣೆ ನಡೆಸಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕರ ದಿನಾಚರಣೆ



ಮೈಸೂರು,ಸೆ.5–ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು. ಸಂಸ್ಥೆಯ ವ್ಯವಸ್ಥಾಪಕ ವಿಶ್ವಸ್ಥ ಡಾ.ಭವಾನಿ ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಡಾ.ರಾಧಾಕೃಷ್ಣನ್ ಭಾವಚಿತ್ರಕ್ಕೆ ಶಾಲಾ ಮಕ್ಕಳು ಪುಷ್ಪಾರ್ಚನೆ ಮಾಡಿದರು.

ಬಳಿಕ ಮಾತನಾಡಿದ ಭವಾನಿ ಶಂಕರ್, ನಮಗೆ ವಿದ್ಯೆಯನ್ನು ಕಲಿಸಿ, ಜೀವನವನ್ನು ರೂಪಿಸಿದ ಗುರುಗಳನ್ನು ನಾವು ಎಂದಿಗೂ ಮರೆಯಬಾರದು. ಅವರ ತ್ಯಾಗ ಅಮರವಾದದ್ದು. ಗುರುಹಿರಿಯರನ್ನು ಗೌರವಿಸುವುದನ್ನು ಕಲಿತಾಗ ಮಾತ್ರ ಅದುವೇ ನಿಜವಾದ ಸಂಸ್ಕಾರ. ಎಲ್ಲರೂ ಕರ್ತವ್ಯ ಮತ್ತು ಗೌರವವನ್ನು ಎಂದಿಗೂ ಮರೆಯಬಾರದು ಎಂದರು. ಮಕ್ಕಳಿಂದ ಗುರುಗಳಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಗೀತ ಕಾರ್ಯಕ್ರಮಗಳು ಜರುಗಿದವು. ಸಂಸ್ಥೆಯಲ್ಲಿ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶಿಕ್ಷಕಿಯರಾದ, ಜಿ.ರಾಜಲಕ್ಷ್ಮಿ, ಪದ್ಮಾವತಿ, ಕಿರಣ್ ಮತ್ತು ರಾಘವೇಂದ್ರ, ಪಾಂಡುರಂಗ ಅವರನ್ನು ಸನ್ಮಾನಿಸಲಾಯಿತು. ಸಂಯೋಜಕ ತೇಜಸ್ ಬಿ.ಶಂಕರ್, ಪಬ್ಲಿಕ್ ಶಾಲೆಯ ಹಿರಿಯ ಪ್ರಾಚಾರ್ಯ ಗೋಪಾಲಸ್ವಾಮಿ, ಕಾಲೇಜು ವಿಭಾಗದ ಪ್ರಾಂಶುಪಾಲ ಮಹದೇವಸ್ವಾಮಿ, ಪ್ರಾಚಾರ್ಯ ಎ.ಕುಮಾರ್, ಅನಿತಾ, ಸಂಧ್ಯಾರಾಜ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಮೈಸೂರಿನ ಬ್ಯಾಂಕ್ ಆಫ್ ಬರೋಡಾ ಕೇಂದ್ರ ಕಚೇರಿಯಲ್ಲಿ ಗುಮಾಸ್ತರಾಗಿ ಕಳೆದ 35 ವರ್ಷಗಳಿಗೂ ಮಿಗಿಲಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ದಕ್ಷ ಹಾಗೂ ಪ್ರಾಮಾಣಿಕ ಗುಮಾಸ್ತರಾದ ಅಶೋಕಪುರಂನ ಜೆ.ಜಯಕುಮಾರ್ ಅವರನ್ನು ಆದಿ ಕರ್ನಾಟಕ ಮಹಾಸಭಾದ ಅಧ್ಯಕ್ಷ ಸಿದ್ದರಾಜು (ಸುನಿಲ್) ಸನ್ಮಾನಿಸಿ, ಗೌರವಿಸಿದರು. ಚಿತ್ರದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಶಿವಸ್ವಾಮಿ, ರಾಜಮೊಗ, ಕೃಷ್ಣಮೂರ್ತಿ, ಮಹೇಶ್, ಮಹಾಲಿಂಗು, ಗೋವಿಂದರಾಜು, ದೊರೆಸ್ವಾಮಿ, ರಮೇಶ್, ಸಿದ್ದರಾಜು ಮತ್ತಿತರರು ಉಪಸ್ಥಿತರಿದ್ದರು.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಸೆ.5–2023–24ನೇ ಸಾಲಿಗೆ ಅರ್ಹ ವಿಕಲಚೇತನ ವ್ಯಕ್ತಿಗಳಿಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ವತಿಯಿಂದ ವಿವಿಧ ಸೌಲಭ್ಯಗಳನ್ನು ಒದಗಿಸಲು 8 ಯೋಜನೆಗಳಾದ ಮೆರಿಟ್ ವಿದ್ಯಾರ್ಥಿವೇತನಕ್ಕಾಗಿ ಬಹುಮಾನ ಹಣ, ಶಿಶು ಪಾಲನಾ ಭತ್ಯೆ, ನಿರುದ್ಯೋಗ ಭತ್ಯೆ, ಆಧಾರ ಯೋಜನೆ, ಮರಣ ಪರಿಹಾರ ನಿಧಿ, ಸಾಧನೆ ಯೋಜನೆ, ಪ್ರತಿಭೆ ಯೋಜನೆ, ವೈದ್ಯಕೀಯ ಪರಿಹಾರ ನಿಧಿ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ಅರ್ಜಿ ಸಲ್ಲಿಸಲು ಸೆ30 ಕೊನೆಯ ದಿನ. https://sevasindhuservices.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ:0821–2490333 ಅನ್ನು ಸಂಪರ್ಕಿಸಬಹುದು.

ಅವಧಿ ವಿಸ್ತರಣೆ

ಮೈಸೂರು,ಸೆ.5–2023–24ನೇ ಸಾಲಿನ ವಿವಿಧ ಯೋಜನೆಯಡಿ ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ, ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಅಭ್ಯರ್ಥಿಗಳು ತಮ್ಮ ಕಸುಬನ್ನು ಮುಂದುವರೆಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ದಿನಾಂಕವನ್ನು ಸೆ.30ರವರೆಗೆ ವಿಸ್ತರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ತಾಲೂಕುವಾರು ಲೋಕಾಯುಕ್ತ ಅಧಿಕಾರಿಗಳ ಭೇಟಿ

ಮೈಸೂರು,ಸೆ.5–ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಅಧಿಕಾರಿಗಳು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಂಬಂಧಪಟ್ಟ ಸಾರ್ವಜನಿಕ ಸರ್ಕಾರಿ ಅಧಿಕಾರಿ ಅಥವಾ ನೌಕರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಅಡಿಯಲ್ಲಿ ಕ್ರಮಬದ್ಧವಾಗಿ ಭರ್ತಿ ಮಾಡಿದ ದೂರುಗಳನ್ನು ನಮೂನೆ–1ರಲ್ಲಿ ಮತ್ತು ನಮೂನೆ–2ರಲ್ಲಿ ಪ್ರಮಾಣ ಪತ್ರಗಳನ್ನು ಅಗತ್ಯ ದಾಖಲಾತಿಗಳನ್ನು ಸ್ವೀಕರಿಸುವ ಕಾರ್ಯಕ್ರಮವನ್ನು ತಾಲೂಕು ಮಟ್ಟದಲ್ಲಿ ಸೆ.13ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1ರವರೆಗೆ ಕೆಆರ್ ನಗರ ತಾಲೂಕಿನ ತಾಲೂಕು ಕಚೇರಿ ಸಭಾಂಗಣ, ಕೊಳ್ಳೇಗಾಲ ತಾಲೂಕಿನ ಪ್ರವಾಸಿ ಮಂದಿರ ಹಾಗೂ ಕುಶಾಲನಗರ ತಾಲೂಕಿನ ತಾಲೂಕು ಕಚೇರಿಗಳಲ್ಲಿ ಹಮ್ಮಿಕೊಳ್ಳಲಾಗಿದೆ.



ಮೈಸೂರಿನ ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು. ತಾಯಿ ಮತ್ತು ಮಕ್ಕಳಿಗೆ ಶಿಕ್ಷಕರು, ಶಿಕ್ಷಣದ ಪ್ರಾಮುಖ್ಯತೆಯನ್ನು ವಿವರಿಸಿರು. ಚಿತ್ರದಲ್ಲಿ ಸಂಸ್ಥೆಯ ಶ್ರೀಮತಿ ಜಲಜಾ ಗೋವಿಂದಪ್ಪ, ಶ್ರೀಮತಿ ಪರಿಮಳ ಮೂರ್ತಿ, ಶ್ರೀಮತಿ ಉಮಾ ರಾಯಣ್ಣಗೌಡರ್, ಶ್ರೀಮತಿ ಅಶ್ವಿನಿ, ಶ್ರೀಮತಿ ದೇವಮ್ಮ, ಶ್ರೀಮತಿ ಸ್ವಾತಿ, ಶ್ರೀಮತಿ ಮೀನಾಕ್ಷಿ, ರಘುವೀರ್ ಹಾಗೂ ಮಧು ಮತ್ತಿತರರು ಉಪಸ್ಥಿತರಿದ್ದರು.

ಗುರುವೆಂದರೆ ವ್ಯಕ್ತಿಯಲ್ಲ, ಶಕ್ತಿ: ಡಾ.ರಘು



ಮೈಸೂರು, ಸೆ. 5–ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನವನ್ನು ಶಿಕ್ಷಕರ ದಿನವಾಗಿ ಮಂಗಳವಾರ ಆಚರಿಸಲಾಯಿತು.

ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಸಲ್ಲಿಸಿ "ಗುರು ಎಂದರೆ ವ್ಯಕ್ತಿಯಲ್ಲ ಅದೊಂದು ಶಕ್ತಿ, ಅಜ್ಞಾನದಿಂದ ಜ್ಞಾನದೆಡೆಗೆ ಕರೆದೊಯ್ಯುವ ಶಕ್ತಿಯೆ ಗುರು. "ವರ್ಣಮಾತ್ರಂ ಕಲಿಸದಾತಂ ಗುರು" ಅರಿವೇ ಗುರುವಾಗಿದ್ದು, ವಿದ್ಯಾರ್ಥಿಗಳ ಬೌದ್ಧಿಕ ಶಕ್ತಿಯನ್ನು ವೃದ್ಧಿಸುವಲ್ಲಿ ಗುರುವಿನ ಪಾತ್ರ ಎಷ್ಟು ಮುಖ್ಯವಾದುದೆಂದು ಪ್ರಸಕ್ತ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಪುನಶ್ಚೇತನ ಕಾರ್ಯಕ್ರಮ ಸಂಯೋಜಕ ಡಾ.ಬಿ.ಟಿ.ರಘು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡಿ, ವಿದ್ಯಾರ್ಥಿಗಳಿಗೆ ಗುರುವಿನ ಮಹತ್ವವನ್ನು ತಿಳಿಸುವುದರ ಜೊತೆಗೆ ತಮ್ಮ ಗುರು ಪರಂಪರೆಯನ್ನು ಸ್ಮರಿಸಿದರು. ಪ್ರಾಂಗಣದಲ್ಲಿ ನೆರೆದಿದ್ದ ವಿದ್ಯಾರ್ಥಿ ಸಮುದಾಯಕ್ಕೆ ಕಾಲೇಜಿನ ಬೋಧನಾಂಗ ಹಾಗೂ ಕಾರ್ಯಾಂಗವನ್ನು ಪರಿಚಯಿಸಿದರು. ಕಾಲೇಜಿಗೆ ಸಂಬಂಧಪಟ್ಟ ಕಾರ್ಯಕ್ರಮಗಳ ರೂಪುರೇಷೆಗಳ ಬಗ್ಗೆ ಮುನ್ನೋಟ ನೀಡಿದರು. ಕಚೇರಿ ಅಧೀಕ್ಷಕಿ ಡಿ.ಸುನಿತಾ, ಅಧ್ಯಾಪಕ ಸಲಹೆಗಾರರಾದ ಪ್ರೊ.ಡಿ.ಪಲ್ಲವಿ ಮತ್ತಿತರರು ಉಪಸ್ಥಿತರಿದ್ದರು.

ಉಪನಿರ್ದೇಶಕರ ಹುದ್ದೆಗಾಗಿ ಅರ್ಜಿ ಆಹ್ವಾನ

ಮೈಸೂರು,ಸೆ.5–ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿ ಖಾಲಿ ಇರುವ 6 (ಆರು) ಉಪ ನಿರ್ದೇಶಕರ ಹುದ್ದೆಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಅರ್ಹ ಮೇಜರ್/ಲೆಫ್ಟಿನೆಂಟ್ ಕರ್ನಲ್ ಅಥವಾ ನೌಕಾಸೇನಾ ಮತ್ತು ವಾಯುಸೇನೆಯಲ್ಲಿ ತತ್ಸಮಾನ ರ್‍ಯಾಂಕ್‌ನಿಂದ ನಿವೃತ್ತಿ ಹೊಂದಿರುವ, ಎಸ್‌ಎಸ್‌ಎಲ್‌ಸಿ/ತತ್ಸಮಾನ ತರಗತಿಯಲ್ಲಿ ಒಂದು ಕನ್ನಡ ಭಾಷೆಯನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿ ತೇರ್ಗಡೆಯಾದ ಸೈನ್ಯಾಧಿಕಾರಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಸೆ.16 ಕೊನೆಯ ದಿನಾಂಕವಾಗಿದ್ದು, ಅರ್ಜಿ ನಮೂನೆಯನ್ನು ಸಂಬಂಧಿಸಿದ ಎಲ್ಲಾ ದಾಖಲೆಗಳೊಂದಿಗೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮೈಸೂರು ಕಚೇರಿಗೆ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆಯನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮೈಸೂರು ಕಚೇರಿಯಲ್ಲಿ ಖುದ್ದಾಗಿ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ದೂ.ಸಂ: 080–25589459 ಯನ್ನು ಸಂಪರ್ಕಿಸಬಹುದಾಗಿದೆ



ಮೈಸೂರು ಕಲಾಮಂದಿರದಲ್ಲಿ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ಸ್ವೀಕರಿಸಿದ ಹುಯಿಲಾಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ರತ್ನಮ್ಮ ಅವರನ್ನು ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ನಿವೃತ್ತ ಮುಖ್ಯೋಪಾಧ್ಯಾಯ ಸುಂದರ್‌ಕುಮಾರ್, ಸಹ ಶಿಕ್ಷಕಿಯರಾದ ಕಮಲಮ್ಮ, ತುಳಸಿ, ವಾಣಿಶ್ರೀ, ರಶ್ಮಿ, ಮುಖಂಡರಾದ ಹುಯಿಲಾಳು ಜಯರಾಮು, ಸಣ್ಣ ತಮ್ಮೇಗೌಡ, ಮಹದೇವಪ್ರಸಾದ್ ಇತರರಿದ್ದರು.



ಮೈಸೂರಿನ ಜೆಎಸ್‌ಎಸ್ ಪಬ್ಲಿಕ್ ಶಾಲೆ ಆವರಣದಲ್ಲಿ ನಡೆದ ಬಾಲಕಿಯರ ಜಿಲ್ಲಾ ಮಟ್ಟದ ಥ್ರೋಬಾಲ್ ಪಂದ್ಯಾವಳಿಯಲ್ಲಿ ಶಾಲಾ ತಂಡ ಪ್ರಥಮ ಸ್ಥಾನ ಪಡೆದುಕೊಂಡಿದೆ. ವಿಜೇತ ತಂಡದ ಸದಸ್ಯರೊಂದಿಗೆ ನಾಯಕಿ ಮನೋಜ, ಪ್ರಾಂಶುಪಾಲರಾದ ಕೆ.ಬಿ. ಸುಮಾ, ದೈಹಿಕ ಶಿಕ್ಷಕ ಎಂ.ದಿನೇಶ್, ವಿ.ಶ್ವೇತಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.9.2023 ಬುಧವಾರ, ಮಳೆ ನಕ್ಷತ್ರ: ಪುಬ್ಬ 31.08.2023ರಿಂದ 13.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ
- **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :** ಯುವ ಜನೋತ್ಸವ –2023ರ ಅಂಗವಾಗಿ ಮ್ಯಾರಥಾನ್, ಉಪಸ್ಥಿತರು :ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ. ದಿನೇಶ್, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಕೆ.ಎಂ. ಗಾಯತ್ರಿ, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ವಿಭಾಗೀಯ ಸಹ ನಿರ್ದೇಶಕರಾದ ಡಾ. ರಾಜೇಶ್ವರಿ, ಡಾ. ಪಿ.ಎಂ. ಕುಮಾರಸ್ವಾಮಿ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 7.30ಕ್ಕೆ.
- **ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆ :** ಕುರುಡುತನದ ಬಗ್ಗೆ ಜಾಗೃತಿ ಕಾರ್ಯಕ್ರಮ, ಉದ್ಘಾಟನೆ : ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಮುರಳಿಗೌಡ, ಸಬ್ ಇನ್ಸ್‌ಪೆಕ್ಟರ್ ಅರುಣ್ ಕುಮಾರ್, ಸ್ಥಳ: ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆ, ಕುವೆಂಪುನಗರ, ಬೆಳಗ್ಗೆ 9.30ಕ್ಕೆ.
- **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್:** ಶ್ರೀ ಕೃಷ್ಣ ಜನ್ಮಾಷ್ಟಮಿ, ಸಂಜೆ 5ರಿಂದ ಸ್ವಾಮಿಗೆ ಅಭಿಷೇಕ, ಅಲಂಕಾರ, ಸಂಜೆ 6.30ರಿಂದ ಶ್ರೀ ವಿದ್ಯಾ ವಿಷ್ಣುಸಭಾ ಟ್ರಸ್ಟ್ ಅವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 7.30ರಿಂದ ಗೋಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಗೀತಾ ಮಂದಿರ.
- **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್ :** ಎಂ.ಎಲ್. ಪವನ್‌ಕುಮಾರ್ ಅವರಿಂದ ಸ್ಥಿರ ಚಿತ್ರಣ ಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.
- **ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು:** ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಸ್ವಾಗತಿಸುವ ಸೇರ್ಪಡೆ ಕಾರ್ಯಕ್ರಮ, ಉದ್ಘಾಟನೆ: ನಿವೃತ್ತ ಪ್ರಾಧ್ಯಾಪಕ ಪ್ರೊ.ಆರ್.ಎನ್.ಪದ್ಮನಾಭ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು: ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಪ್ರಿನ್ಸಿಪಾಲ್ ಡಾ.ಶಿವಲಿಂಗೇಗೌಡ, ಸ್ಥಳ: ಶ್ರೀ ಸಾಹುಕಾರ್ ಚೆನ್ನಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯುಪ್ರೆಷರ್, ಸುಜೋಕ್, ಡಿಜಿಟಲ್ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಪ್ರಸನ್ನ ಗಣಪತಿ ದೇವಸ್ಥಾನ, ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ, ವಿಜಯನಗರ 2ನೇ ಹಂತ, ಬೆಳಗ್ಗೆ 10.30ರಿಂದ.
- **ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್, ಕುವೆಂಪುನಗರ:** ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ತುಂಟ ಕೃಷ್ಣ, ಮುದ್ದು ರಾಧೆ ಸ್ಪರ್ಧೆ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಮಹರ್ಷಿ ವಿದ್ಯಾಸಂಸ್ಥೆ ಮುಖ್ಯಸ್ಥ ಭವಾನಿ ಶಂಕರ್, ರೋಟರಿ ಕ್ಲಬ್ ಆಫ್ ಮೈಸೂರ್ ಸೌತ್ ಅಧ್ಯಕ್ಷ ಕೆ.ಎನ್.ಮುರಳೀಧರ್, ಕಾರ್ಯದರ್ಶಿ ಎನ್.ಟಿ.ಗಿರೀಶ್, ಜೀವಧಾರ ರಕ್ತ ನಿಧಿ ಕೇಂದ್ರದ ಗಿರೀಶ್, ಮುಡಾ ಮಾಜಿ ಸದಸ್ಯೆ ಲಕ್ಷ್ಮೀದೇವಿ, ಸವಿತಾ ಘಾಟ್ಕೆ, ಸ್ಥಳ: ಮಹರ್ಷಿ ಪಬ್ಲಿಕ್ ಸ್ಕೂಲ್, ವಿಶ್ವೇಶ್ವರನಗರ, ಮಧ್ಯಾಹ್ನ 2.30ಕ್ಕೆ.
- **ಸಂಸ್ಕೃತ ಭಾರತೀ, ವಿದ್ವಾನ್ ಟಿ.ನಾರಾಯಣಶಾಸ್ತ್ರಿ ಪ್ರತಿಷ್ಠಾನ:** ಸಂಸ್ಕೃತ ಸಪ್ತಾಹ, ಸಂಜೆ 5.30ರಿಂದ ಗಮಕ ವಾಚನ, ಸಂಜೆ 6ರಿಂದ ಯೋಗಾಚಾರ್ಯ ರಾಕೇಶ್ ಅವರಿಂದ ಡಾ.ಎಚ್.ವಿ.ನಾಗರಾಜರಾವ್ ಅವರ 'ಶತಾಲಂಕಾರಕೃಷ್ಣಶತಕಂ' ಕಾವ್ಯದ ಪಕ್ಷಿನೋಟ ಕುರಿತು ಪ್ರವಚನ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಶಾಲೆ.
- **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಪ್ರವಚನ, ಕಾರ್ಯಪಾಲಕ ಅಭಿಯಂತರ ವಿದ್ವಾನ್ ಕ್ಯ ರಾಮಚಂದ್ರ ಅವರಿಂದ ವಾಚನ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ
- **ಶ್ರೀ ರಾಧಾಕೃಷ್ಣ ಮಂದಿರ:** ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ, ಸ್ಥಳ: ಮಂದಿರದ ಆವರಣ, ಲಲಿತ ಮಹಲ್ ರಸ್ತೆ, ಬೆಳಗ್ಗೆ 7ರಿಂದ.
- **ಶ್ರೀ ಪೂರಿ ಜಗನ್ನಾಥ ಸಾಂಸ್ಕೃತಿಕ ಮತ್ತು ಅಭಿವೃದ್ಧಿ ಟ್ರಸ್ಟ್ :** ಜಗನ್ನಾಥ ಮಂದಿರದ 2ನೇ ವಾರ್ಷಿಕೋತ್ಸವ, ಬೆಳಗ್ಗೆ 9ಕ್ಕೆ ಕಳಶ ಯಾತ್ರ, ಮ.1ಕ್ಕೆ ನಾರಾಯಣ ಉಪಾಚಾರ ಪೂಜೆ, 1.30ಕ್ಕೆ ಪ್ರಸಾದ ಸೇವೆ, 2.30ಕ್ಕೆ ಗೀತಯಜ್ಞ, ಸಂಜೆ 9ಕ್ಕೆ ಕೃಷ್ಣ ಅಭಿಷೇಕಂ, 9.30ಕ್ಕೆ ಪ್ರಸಾದ ಸೇವೆ. ಮುಖ್ಯ ಅತಿಥಿಗಳು: ರಾಜಮಾತೆ ಪ್ರಮೋದಾದೇವಿ ಒಡೆಯರ್, ಗೌರವ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಸದಸ್ಯೆ ಭುವನೇಶ್ವರಿ, ಬಿಜೆಪಿ ಕೆ.ಆರ್.ಕ್ಷೇತ್ರದ ಅಧ್ಯಕ್ಷ ಎಂ.ವಡಿವೇಲು, ಸ್ಥಳ: ಜಗನ್ನಾಥ ಮಂದಿರ, ವಿದ್ಯಾರಣ್ಯಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ –ಡಾ.ಕಬ್ಬಿನಾಲೆ ವಸಂಥ ಭಾರದ್ವಾಜ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಡಿ.ಶ್ರೀಹರಿ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಕೆ.ಎಲ್.ಪ್ರಸನ್ನಾಕ್ಷಿ, 7.15 ಭಾವಗೀತೆಗಳು–ವಿಕಾಸ್ ಕೆ. ವಸಿಷ್ಠ, ಬಿ.ಜೆ.ಭರತ್, ನಾಗಚಂದ್ರಿಕಾ ಭಟ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಂದನ–ಮನೋ ನಂದನ, ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ–ಪ್ರಾಯೋಜಿತ ಕಾರ್ಯಕ್ರಮ, 9.30 ಚಿತ್ರಗೀತೆ, 10.00 ಹಿಂದೂಸ್ಥಾನಿ ಸಂಗೀತ–ಜಿ.ಆರ್.ಭಟ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಬಾಂಬೆ ಎಸ್. ಜಯಶ್ರೀ, ಕಿರಣ್ ಹಾನಗಲ್, 1.20 ಭಾವಗೀತೆಗಳು –ಸೀಮಾ ಅಂಗಡಿ, ಸಂಗೀತಾ ಕಟ್ಟಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ, ಮೃದಂಗ ಹಾಗೂ ಮದ್ದಳೆಯ ವ್ಯತ್ಯಾಸ, ಮದ್ದಳೆಯ ಇತಿಹಾಸ ಹಾಗೂ ತಯಾರಿಕೆಯ ಬಗ್ಗೆ ತಿಳಿಸಿಕೊಡಲಿದ್ದಾರೆ ಅನಂತ ಪದ್ಮನಾಭ ಪಾಠಕ್, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಪ್ರಿಯದರ್ಶಿನಿ ಯುವತಿ ಮಂಡಳಿ ಸದಸ್ಯೆಯರಿಂದ 'ಕೃಷ್ಣ ಜನ್ಮಾಷ್ಟಮಿ' ಕುರಿತ ಕಾರ್ಯಕ್ರಮ, 4.45 ಹಿಂದಿ ಪಾಠ–ಕಿಶೋರ್ ಎಂ. ಕಾಕಡೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಸಾವಯವ ಸಂಪದ–ಸಾವಯವ ಕೃಷಿಯಲ್ಲಿ ಸಿರಿ ಧಾನ್ಯಗಳ ಮಹತ್ವ ಕುರಿತು ಡಾ. ಸಿ.ಎಂ. ಸುನೀಲ್ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎನ್. ಕೇಶವ ಮೂರ್ತಿ, 9.00 ನಾಟಕ 'ಹಾನೂಷ್' ಮೂಲ ಹಿಂದಿ– ಭೀಷ್ಮ ಸಾಹ್ನಿ, ಬಾನುಲಿ ರೂಪ– ಚಿರಂತಜೀತ್, ಕನ್ನಡಾನುವಾದ– ಡಾ.ವಿ. ಸೌಭಾಗ್ಯಲಕ್ಷ್ಮಿ, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು

ಮೈಸೂರು ಮಿತ್ರ

ಅರಣ್ಯ ಭವನದಿಂದ ಅರಮನೆವರೆಗೂ ಮಿನಿ ಜಂಬೂಸವಾರಿಯಂತಿತ್ತು ಗಜಪಡೆ ಮೆರವಣಿಗೆ

- ವಿಶ್ವಾಸ ಮೂಡಿಸಿದ ಹೊಸ ಆನೆ ಕಂಜನ್ ನಡೆ
- ಮಾರ್ಗದುದ್ದಕ್ಕೂ ರಸ್ತೆ ಇಕ್ಕೆಲಗಳಲ್ಲಿ ಜನರ ಸಂಭ್ರಮ





ಮೈಸೂರು ಅಶೋಕಪುರಂನ ಅರಣ್ಯ ಭವನದಿಂದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ಮೆರವಣಿಗೆ ಮೂಲಕ ಅರಮನೆ ಪ್ರಾಂಗಣಕ್ಕೆ ಆಗಮಿಸಿದ ಗಜಪಡೆಯನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್‌ಗೌಡ, ನಗರ ಪೊಲೀಸ್ ಆಯುಕ್ತ ರಮೇಶ್ ಹಾಗೂ ಜನಪ್ರತಿನಿಧಿಗಳು ಅದ್ದೂರಿಯಾಗಿ ಸ್ವಾಗತಿಸಿದರು.





ಮೈಸೂರು, ಸೆ.5(ಎಂಟಿವೈ)– ಮೈಸೂರು ಅಶೋಕಪುರಂನ ಅರಣ್ಯ ಭವನದಿಂದ ಅರಮನೆವರೆಗೆ ಮೆರವಣಿಗೆಯಲ್ಲಿ ಸಾಗಿದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ದಸರಾ ಗಜಪಡೆಯ ಮೆರವಣಿಗೆಯನ್ನು ರಸ್ತೆಯ ಇಕ್ಕೆಲಗಳಲ್ಲಿ ನಿಂತು ಅಪಾರ ಸಂಖ್ಯೆಯ ಜನರು ವೀಕ್ಷಿಸಿ, ಸಂಭ್ರಮಪಟ್ಟರು. ಅರಣ್ಯ ಭವನದ ಆವರಣದಲ್ಲಿ ಕಳೆದ 4 ದಿನಗಳಿಂದ ಬೀಡುಬಿಟ್ಟಿದ್ದ ದಸರಾ ಗಜಪಡೆ ಅರಮನೆಯತ್ತ ಹೆಜ್ಜೆ ಹಾಕುವ ಮೊದಲು ಅರಣ್ಯ ಇಲಾಖೆ ವತಿಯಿಂದ ಮೊದಲ ತಂಡದ ಎಲ್ಲಾ ಆನೆಗಳಿಗೆ ಪೂಜೆ ಸಲ್ಲಿಸಲಾಯಿತು.

ಅರ್ಚಕ ಎಸ್.ವಿ.ಪ್ರಹ್ಲಾದ್ ರಾವ್ ನೆರವೇರಿಸಿದ ಪೂಜಾ ಕೈಂಕರ್ಯದಲ್ಲಿ ಅರಣ್ಯ ಇಲಾಖೆಯ ಸಿಎಫ್ ಡಾ.ಮಾಲತಿಪ್ರಿಯಾ, ಡಿಸಿಎಫ್‌ಗಳಾದ ಸೌರಭ್‌ಕುಮಾರ್, ಬಸವರಾಜ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ಹಾಗೂ ಇನ್ನಿತರರು ಪಾಲ್ಗೊಂಡು ದಸರಾ ಗಜಪಡೆಗೆ ಪುಷ್ಪಾರ್ಚನೆ ಮಾಡಿದರು. ಬಳಿಕ ಅರಣ್ಯ ಭವನದ ಎಲ್ಲಾ ಸಿಬ್ಬಂದಿ ದಸರಾ ಗಜಪಡೆಗೆ ಪೂಜೆ ಸಲ್ಲಿಸಿ, ಬೀಳ್ಕೊಟ್ಟರು.

ಮಿನಿ ಜಂಬೂಸವಾರಿಯಂತಿತ್ತು ಮೆರವಣಿಗೆ: ಅರಣ್ಯ ಭವನದಿಂದ ಅಶೋಕಪುರಂ, ಬಲ್ಲಾಳ್ ವೃತ್ತ, ಆರ್‌ಟಿಓ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ಮೂಲಕ ಜಯಮಾರ್ತಾಂಡ ದ್ವಾರ ತಲುಪಿದವು. ಮಂಗಳವಾದ್ಯದ ಹಿಮ್ಮೇಳದಲ್ಲಿ ಸಾಗಿದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಭೀಮಾ, ಗೋಪಿ, ವಿಜಯ, ವರಲಕ್ಷ್ಮೀ, ಮಹೇಂದ್ರ, ಧನಂಜಯ, ಕಂಜನ್, ಮಾರ್ಗದುದ್ದಕ್ಕೂ ಗಾಂಭೀರ್ಯದಿಂದ ಹೆಜ್ಜೆ ಹಾಕಿದ್ದು, ಗಮನ ಸೆಳೆಯಿತು.

ಒಂದನೇ ಪುಟದಿಂದ

ಅರಮನೆ ಅಂಗಳದಲ್ಲಿ ಆನೆಗಳ ಆಹಾರ ವಿಹಾರ

ಕಾರ್ಯಕ್ರಮ, ದಸರಾ ಮಹೋತ್ಸವದ ಮೊದಲ ಕಾರ್ಯಕ್ರಮವಾಗಿದ್ದರಿಂದ ಜಯಮಾರ್ತಾಂಡ ದ್ವಾರದಿಂದ ಅರಮನೆಯ ಮುಂಭಾಗದ ಅಂಗಳದವರೆಗೂ ತಳಿರು ತೋರಣ ಕಟ್ಟಿ ಸಿಂಗರಿಸಲಾಗಿತ್ತು. ದ್ವಾರದ ಬಳಿ 'ಗಜಪಡೆಗೆ ಸ್ವಾಗತ' ಎಂದು ಹೂವಿನ ಹಾರ ಜೋಡಣೆ ಮಾಡುವ ಮೂಲಕ ವರ್ಣರಂಜಿತ ಸ್ವಾಗತ ಕೋರಲಾಯಿತು. ಅರಮನೆ ಆವರಣದಲ್ಲಿ ಹಬ್ಬದ ವಾತಾವರಣ ಕಳೆಕಟ್ಟಿತ್ತು. ಕಳಸ ಹೊತ್ತ ಮಹಿಳೆಯರು ಮಂಗಳವಾದ್ಯದೊಂದಿಗೆ ಆನೆಗಳ ಮುಂದೆ ಹೆಜ್ಜೆ ಹಾಕಿದರು.

ಗಜಪಡೆ ಸ್ವಾಗತ ವೀಕ್ಷಿಸಿದ ಪ್ರವಾಸಿಗರು: ಅರಮನೆ ಸೌಂದರ್ಯ ವೀಕ್ಷಣೆಗೆಂದು ವಿವಿಧೆಡೆಯಿಂದ ಆಗಮಿಸಿದ್ದ ಅಪಾರ ಸಂಖ್ಯೆಯ ಪ್ರವಾಸಿಗರು ಗಜಪಡೆ ಸ್ವಾಗತ ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಅಲಂಕೃತಗೊಂಡು ಸಾಲಾಗಿ ನಿಂತಿದ್ದ ಆನೆಗಳನ್ನು ಸಾಕಷ್ಟು ಮಂದಿ ವೀಕ್ಷಿಸಿ ಸಂಭ್ರಮಿಸಿದರೆ, ಮತ್ತಷ್ಟು ಮಂದಿ ಅರಮನೆ ಪ್ರಾಂಗಣದವರೆಗೂ ಆನೆಗಳ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಕೆಲವು ಪ್ರವಾಸಿಗರು ಅರಮನೆ ಒಳಾಂಗಣದಿಂದಲೇ ಆನೆಗಳ ಪೂಜಾ ಕಾರ್ಯ ವೀಕ್ಷಿಸಿದರು.

ಅಧಿಕಾರಿಗಳಿಗೆ ಫಲತಾಂಬೂಲ: ಅರಮನೆಯ ಆನೆ ಬಾಗಿಲು ಬಳಿ ಸಂಪ್ರದಾಯದಂತೆ ಅರಮನೆ ಮಂಡಳಿ ವತಿಯಿಂದ ಅಧಿಕಾರಿಗಳಿಗೆ ದಸರಾ ಮಹೋತ್ಸವವನ್ನು ಯಶಸ್ವಿಯಾಗಿ ನೆರವೇರಿಸಿಕೊಡುವಂತೆ ಫಲತಾಂಬೂಲ ನೀಡಲಾಯಿತು. ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ಫಲತಾಂಬೂಲ ನೀಡಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಅರಣ್ಯ ಇಲಾಖೆಯ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್ ಸೌರಭ್‌ಕುಮಾರ್, ಬಸವರಾಜು ಸೇರಿದಂತೆ ಇನ್ನಿತರ ಅಧಿಕಾರಿಗಳಿಗೆ ಫಲತಾಂಬೂಲ ನೀಡಲಾಯಿತು.

ಮಾವುತರಿಗೆ ಅಗತ್ಯ ವಸ್ತುಗಳ ಕಿಟ್ ವಿತರಣೆ: ಅರಮನೆಗೆ ಬಂದ ಗಜಪಡೆಯ ಮಾವುತ ಹಾಗೂ ಕಾವಾಡಿಗಳಿಗೆ ಅರಮನೆ ಮಂಡಳಿ ವತಿಯಿಂದ ಅಗತ್ಯ ವಸ್ತುಗಳ ಕಿಟ್ ವಿತರಿಸಲಾಯಿತು. 8 ಆನೆಗಳ ಮಾವುತ, ಕಾವಾಡಿಗಳಿಗೆ ಸೋಪು, ಪೇಸ್ಟ್, ಬಕೆಟ್, ಚಾಪೆ, ಬೆಡ್‌ಶೀಟ್, ಟವೆಲ್ ಸೇರಿದಂತೆ ಇನ್ನಿತರ ದಿನ ಬಳಕೆ ವಸ್ತುಗಳುಳ್ಳ ಕಿಟ್ ವಿತರಿಸಲಾಯಿತು.

ವಿಹರಿಸಿದ ಗಜಪಡೆ: ಅರಣ್ಯ ಭವನದಲ್ಲಿದ್ದ ಗಜಪಡೆ ಅರಮನೆ ಅಂಗಳಕ್ಕೆ ಪ್ರವೇಶಿಸಿ ಬಳಿಕ ನೀರಿನಲ್ಲಿ ಮಿಂದೆದ್ದು, ವಿಹರಿಸಿದವು. ಅರಮನೆ ಆವರಣದಲ್ಲಿ ಹಾಕಿರುವ ಶೆಡ್‌ನಲ್ಲಿ ರಿಲ್ಯಾಕ್ಸ್ ಮೂಡ್‌ಗೆ ಜಾರಿದವು. ಎಲ್ಲಾ ಆನೆಗಳಿಗೂ ಆಲದ ಸೊಪ್ಪು, ಹಸಿ ಹುಲ್ಲು ನೀಡಿ ಉಪಚರಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಟಿ.ಎಸ್.ಶ್ರೀವತ್ಸ ಕೆ.ಹರೀಶ್‌ಗೌಡ, ಸಂಸದ ಪ್ರತಾಪ ಸಿಂಹ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಪೊಲೀಸ್ ಆಯುಕ್ತ ರಮೇಶ್ ಬಾನೂತ್, ಎಸ್ಪಿ ಸೀಮಾ ಲಾಟ್ಕರ್, ಅರಣ್ಯ ಇಲಾಖೆಯ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಸೌರಭ್‌ಕುಮಾರ್, ಬಸವರಾಜು, ಡಿಸಿಪಿಗಳಾದ ಮುತ್ತುರಾಜ್, ಜಾನ್ಹವಿ, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಎಸಿಎಫ್ ಲಕ್ಷ್ಮಿಕಾಂತ್ ಇನ್ನಿತರರು ಉಪಸ್ಥಿತರಿದ್ದರು.

ವಿಜಯನಗರ ವೈಭವ ಬಿಂಬಿಸುವಂತೆ ದಸರಾ ಆಚರಣೆ

ಮಾಡಿರುವ ಮಾನದಂಡಗಳನ್ನು ಪರಿಗಣಿಸಬೇಕಾಗುತ್ತದೆ. ಜಿಲ್ಲೆಯಲ್ಲಿ ಹೆಚ್.ಡಿ.ಕೋಟೆ ಮತ್ತು ತಿ.ನರಸೀಪುರ ಬರಪೀಡಿತ ತಾಲೂಕು ಎಂಬ ವರದಿ ಇದೆ. ಮಳೆ ಪ್ರಮಾಣದ ಆಧಾರವನ್ನು ಗಮನದಲ್ಲಿಟ್ಟುಕೊಂಡು ಸಚಿವ ಸಂಪುಟ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ, ಘೋಷಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಸಂಘರ್ಷ ತಡೆಯಲು ಸೂಚನೆ: ಮೈಸೂರು ಜಿಲ್ಲೆಯ ವಿವಿಧೆಡೆ ಮಾನವ ಮತ್ತು ಪ್ರಾಣಿ ಸಂಘರ್ಷ ನಮ್ಮ ಗಮನಕ್ಕೆ ಬಂದಿದೆ. ಈ ಸಂಬಂಧ ಈಗಾಗಲೇ ಅರಣ್ಯ ಸಚಿವರೊಂದಿಗೆ ಚರ್ಚಿಸಲಾಗಿದೆ. ಇದನ್ನು ತಡೆಯಲು ಈಗಾಗಲೇ ಟಾಸ್ಕ್‌ಫೋರ್ಸ್ ರಚಿಸಲಾಗಿದೆ. ಹೆಚ್.ಡಿ.ಕೋಟೆ ತಾಲೂಕಲ್ಲಿ ಬಾಲಕನ ಮೇಲೆ ದಾಳಿ ಮಾಡಿರುವ ಹುಲಿಯನ್ನು ಸೆರೆ ಹಿಡಿಯಲು ಸರ್ಕಾರ ಸೂಚಿಸಿದೆ. ಕಾಡಂಚಿನ ಜನರ ರಕ್ಷಣೆ ಹಾಗೂ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಸ್ಪಷ್ಟಪಡಿಸಿದರು.

ಕಾನೂನಿನ ಚೌಕಟ್ಟಿನ ಕಾರ್ಯಕ್ರಮಕ್ಕೆ ಅವಕಾಶ: ದಸರಾ ವೇಳೆ ವಿವಿಧ ದಲಿತಪರ ಸಂಘಟನೆಗಳು ಚಾಮುಂಡಿಬೆಟ್ಟದಲ್ಲಿ ಆಚರಿಸುವ ಮಹಿಷಾ ದಸರಾ ಆಚರಣೆಗೆ ಈ ಬಾರಿ ಅವಕಾಶ ನೀಡಬೇಕೋ ಅಥವಾ ನೀಡಬಾರದೋ ಎಂದು ಈಗಲೇ ಏನನ್ನೂ ಹೇಳಲು ಆಗುವುದಿಲ್ಲ. ಕಾನೂನು ಚೌಕಟ್ಟಿನಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಿಗೆ ಅವಕಾಶವಿದೆ ಎಂದು ಸ್ಪಷ್ಟಪಡಿಸಿದರು.







ಸಮನ್ವಯದಿಂದ ಕಾರ್ಯನಿರ್ವಹಿಸಿ ದಸರಾ ಉತ್ಸವ ಅಚ್ಚುಕಟ್ಟಾಗಿ ಮಾಡಿ

- ಅಧಿಕಾರಿಗಳಿಗೆ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಕಿವಿಮಾತು
- ದೀಪಾಲಂಕಾರ ಆಕರ್ಷಕವಾಗಿರಲಿ, ಸ್ಥಳೀಯ ಕಲಾವಿದರಿಗೆ ಆದ್ಯತೆ ಕೊಡಿ; ಮೈಸೂರು ಸ್ವಚ್ಛವಾಗಿರಲಿ, ಫಲಪುಷ್ಪ ಪ್ರದರ್ಶನ ಕಂಗೊಳಿಸಲಿ...

ಮೈಸೂರು,ಸೆ.5(ಎಸ್‌ಬಿಡಿ)–ನಾಡಹಬ್ಬ ಮೈಸೂರು ದಸರಾ ಮಹೋತ್ಸವವನ್ನು ಅಚ್ಚುಕಟ್ಟಾಗಿ ನೆರವೇರಿಸುವ ನಿಟ್ಟಿನಲ್ಲಿ ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ದಸರಾ ಗಜಪಡೆ ಅರಮನೆ ಅಂಗಳ ತಲುಪಿದ ಬೆನ್ನಲ್ಲೇ ಅರಮನೆ ಮಂಡಳಿ ಸಭಾಂಗಣದಲ್ಲಿ ದಸರಾ ಸಂಬಂಧ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಉಪಸಮಿತಿಗಳ ರಚನೆ ಸೇರಿದಂತೆ ವಿವಿಧ ಕಾರ್ಯಕ್ರಮಗಳ ರೂಪುರೇಷೆ ಕುರಿತು ಚರ್ಚಿಸಿದರು.

ದಸರಾ ಮಹೋತ್ಸವ ನಮ್ಮ ನಾಡಿನ ಕಲೆ, ಸಂಸ್ಕೃತಿ, ಪರಂಪರೆ ಸಾರುವ ಜನರ ಉತ್ಸವವಾಗಿ ಅಚ್ಚುಕಟ್ಟಾಗಿ ನೆರವೇರಿಸಬೇಕು. ನಿಟ್ಟಿನಲ್ಲಿ ಎಲ್ಲಾ ಉಪಸಮಿತಿಗಳು ಸಮನ್ವಯ ಸಾಧಿಸಿ, ಅತ್ಯುತ್ತಮವಾಗಿ ಕಾರ್ಯನಿರ್ವಹಿಸಬೇಕು. ಯಾವುದೇ ರೀತಿಯಲ್ಲಿ ಗೊಂದಲಕ್ಕೆ ಎಡೆಮಾಡಿಕೊಡದಂತೆ ಚರ್ಚೆ ನಡೆಸಿ, ಸೂಕ್ತ ರೀತಿಯ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯದ ವಿವಿಧೆಡೆಯಿಂದ ಮಾತ್ರವಲ್ಲದೆ ದೇಶ–ವಿದೇಶಗಳಿಂದಲೂ ಸಹಸ್ರಾರು ಪ್ರವಾಸಿಗರು ಐತಿಹಾಸಿಕ ಮೈಸೂರು ದಸರಾ ಮಹೋತ್ಸವವನ್ನು ಕಣ್ತುಂಬಿಕೊಳ್ಳಲು ಆಗಮಿಸುತ್ತಾರೆ. ನಿರೀಕ್ಷೆಯೊಂದಿಗೆ ಬರುವ ಪ್ರವಾಸಿಗರಿಗೆ ನಿರಾಸೆಯಾಗದಂತೆ ನಿಗಾ ವಹಿಸಬೇಕು. ನಾಡಿನ ಪರಂಪರೆ, ಕಲಾ ವೈಭವ, ಸಂವಿಧಾನದ ಆಶಯ, ರಾಜ್ಯ ಸರ್ಕಾರದ ಐತಿಹಾಸಿಕ ಯೋಜನೆಗಳ ಬಗ್ಗೆ ತಿಳಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಉಪಸಮಿತಿಗಳ ರಚನೆಯಾದ ಕ್ಷಣದಿಂದಲೇ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕು ಎಂದು ಡಾ.ಮಹದೇವಪ್ಪ ತಿಳಿಸಿದರು.



ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳೊಂದಿಗೆ ಅರಮನೆ ಮಂಡಳಿ ಸಭಾಂಗಣದಲ್ಲಿ ಮಂಗಳವಾರ ದಸರಾ ಸಂಬಂಧ ಸಭೆ ನಡೆಸಿದರು.

ದೀಪಾಲಂಕಾರ ಆಕರ್ಷಕವಾಗಿರಲಿ: ದಸರಾ ಮಹೋತ್ಸವದ ಆಕರ್ಷಣೆಗಳಲ್ಲಿ ವಿದ್ಯುತ್ ದೀಪಾಲಂಕಾರವೂ ಮುಖ್ಯವಾದುದು. ದಸರಾ ವೈಭವ ಹೆಚ್ಚಿಸುವ ದೀಪಾಲಂಕಾರ ಉತ್ತಮ ಸಂದೇಶವನ್ನೂ ಸಾರುವಂತಿರಬೇಕು. ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ವಿದ್ಯುತ್ ದೀಪಗಳಲ್ಲಿ ಮಹಾನ್ ವ್ಯಕ್ತಿಗಳ ಪ್ರತಿಕೃತಿಗಳನ್ನು ರಚಿಸಬೇಕು. ಜನಸಾಮಾನ್ಯರಿಗೆ ನೆರವಾಗಿರುವ ರಾಜ್ಯ ಸರ್ಕಾರದ ಮಹತ್ವದ ಐದು ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವಂತೆ ವಿದ್ಯುತ್ ದೀಪಗಳಿಂದ ಮಾದರಿ ನಿರ್ಮಿಸಬೇಕು. ಒಟ್ಟಾರೆ ದೀಪಾಲಂಕಾರ ದಸರಾ ಸಂಭ್ರಮ ಹೆಚ್ಚಿಸಬೇಕು ಎಂದು ಹೇಳಿದರು.

ಸ್ಥಳೀಯ ಕಲಾವಿದರಿಗೆ ಆದ್ಯತೆ: ಸಾಂಸ್ಕೃತಿಕ ಕಾರ್ಯಕ್ರಮಗಳು ದಸರಾ ಮಹೋತ್ಸವದ ವೈಭವಕ್ಕೆ ಪೂರಕವಾಗಿರಬೇಕು. ಎಲ್ಲಾ ಸಾಂಸ್ಕೃತಿಕ ವೇದಿಕೆಗಳಲ್ಲೂ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಿ. ಮಾಹಿತಿ ಕಳುಹಿಸಿಕೊಟ್ಟವರನ್ನು ಮಾತ್ರವಲ್ಲದೆ ತೆರೆಮರೆಯಲ್ಲಿರುವ ಪ್ರತಿಭಾವಂತ ಕಲಾವಿದರನ್ನು ಗುರುತಿಸಿ, ಅವಕಾಶ ನೀಡುವ ನಿಟ್ಟಿನಲ್ಲಿ ಈಗಿನಿಂದಲೇ ಕ್ರಮವಹಿಸಿ. ಕಾರ್ಯಕ್ರಮಗಳಲ್ಲಿ ವೈವಿಧ್ಯತೆ ಇರಬೇಕು. ಸಂಗೀತ, ನಾಟಕ, ನೃತ್ಯ ಸೇರಿದಂತೆ ನಾಡಿನ ಎಲ್ಲಾ ಕಲಾ ಪ್ರಕಾರಗಳ ಪ್ರದರ್ಶನಕ್ಕೂ ಅನುವಾಗುವಂತೆ ಕಾರ್ಯಕ್ರಮ ರೂಪಿಸಿಕೊಳ್ಳಬೇಕು ಎಂದರು.

ಎಲ್ಲವೂ ವ್ಯವಸ್ಥಿತವಾಗಿರಲಿ: ಯುವ ಸಮುದಾಯವನ್ನು ಆಕರ್ಷಿಸುವ ಯುವ ಸಂಭ್ರಮ ಹಾಗೂ ಯುವ ದಸರಾ ಕಾರ್ಯಕ್ರಮಗಳು ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸುವುದು ಮುಖ್ಯ. ಏಕತಾನತೆಯಿಂದ ಪ್ರೇಕ್ಷಕರು ಬೇಸರಗೊಳ್ಳದಂತೆ ಕಲಾ ವೈವಿಧ್ಯತೆಗೆ ಆದ್ಯತೆ ನೀಡಿ. ಯುವ ಸಂಭ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಿಕೊಡಿ. ಆಹಾರ ಮೇಳವೂ ತುಂಬಾ ಅಚ್ಚುಕಟ್ಟಾಗಿರಬೇಕು. ಶುಚಿ–ರುಚಿ ಬಗ್ಗೆ ನಿಗಾ ವಹಿಸುವುದರ ಜೊತೆಗೆ ಆಹಾರ ಮೇಳದ ಸ್ಥಳದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಶುಚಿಯಾಗಿ ರುಚಿಯಾದ ಆಹಾರ ಸಿದ್ಧಪಡಿಸಿ, ಮಾರಾಟ ಮಾಡುವವರಿಗೆ ಪ್ರಾಮುಖ್ಯತೆ ನೀಡಿ. ಮಳಿಗೆ, ನೀರು, ವಿದ್ಯುತ್ ವ್ಯವಸ್ಥೆ ಸಮರ್ಪಕವಾಗಿರುವಂತೆ ನೋಡಿಕೊಳ್ಳಿ ಎಂದು ಸೂಚನೆ ನೀಡಿದರು.

ಫಲಪುಷ್ಪ ಕಂಗೊಳಿಸಲಿ: ದಸರಾ ಫಲಪುಷ್ಪ ಪ್ರದರ್ಶನ ಅತ್ಯಾಕರ್ಷಕವಾಗಿರಬೇಕು. ನಿತ್ಯ ಸಹಸ್ರಾರು ಮಂದಿ ಭೇಟಿ ನೀಡುವುದರಿಂದ ನೂಕುನುಗ್ಗಲು ಆಗದಂತೆ ವ್ಯವಸ್ಥೆ ಮಾಡಿಕೊಳ್ಳಬೇಕು. ಫಲಪುಷ್ಪ ಪ್ರದರ್ಶನದಲ್ಲಿ ಸಹಜ ರೀತಿಯಲ್ಲಿ ಹೂಕುಂಡಗಳನ್ನು ಜೋಡಿಸಿದರೆ ಸಾಲದು. ಪ್ರವಾಸಿಗರನ್ನು ಆಕರ್ಷಿಸುವಂತೆ ಕಲಾತ್ಮಕತೆ ಹಾಗೂ ಸೃಜನಶೀಲತೆಯಿಂದ ಕೂಡಿರಬೇಕು. ಹೂಗಳಿಂದ ನಿರ್ಮಿಸುವ ಕಲಾಕೃತಿಗಳೂ ವಿಶೇಷವಾಗಿರಬೇಕು. ಪ್ರವಾಸಿಗರು ಮೆಚ್ಚುಗೆ ವ್ಯಕ್ತಪಡಿಸುವಂತೆ ಆಯೋಜಿಸಬೇಕು ಎಂದು ತಿಳಿಸಿದರು.

ನಗರ ಸ್ವಚ್ಛವಾಗಿರಬೇಕು: ದಸರಾ ಸಂದರ್ಭದಲ್ಲಿ ನಗರದ ಸ್ವಚ್ಛತೆಗೆ ವಿಶೇಷ ಕಾಳಜಿ ವಹಿಸಬೇಕು. ಈ ನಿಟ್ಟಿನಲ್ಲಿ ಮೈಸೂರು ನಗರ ಪಾಲಿಕೆ ಈಗಿನಿಂದಲೇ ತಯಾರಿ ಮಾಡಿಕೊಳ್ಳಬೇಕು. ಪಾಳಿಯದಲ್ಲಿ ಸ್ವಚ್ಛತಾ ಕಾರ್ಮಿಕರನ್ನು ನಿಯೋಜಿಸಿ, ಆಗಾಗ್ಗೆ ಸ್ವಚ್ಛತಾ ಕಾರ್ಯ ನಡೆಸಬೇಕು. ಕಾರ್ಯಕ್ರಮ ಸ್ಥಳದಲ್ಲಿ ತ್ಯಾಜ್ಯ ವಿಲೇವಾರಿ ಸಮರ್ಪಕವಾಗಿರಬೇಕು. ಅಧಿಕಾರಿಗಳಿಗೆ ಮೇಲ್ವಿಚಾರಣೆ ಜವಾಬ್ದಾರಿ ನೀಡಬೇಕು ಎಂದು ಸೂಚಿಸಿದರು.

ದಸರಾ ಉಪಸಮಿತಿಗಳು ರೂಪಿಸುವ ಕಾರ್ಯಕ್ರಮಗಳ ಬಗ್ಗೆ ಮತ್ತೊಂದು ಸಭೆ ನಡೆಸಿ, ಸವಿಸ್ತಾರವಾಗಿ ಚರ್ಚಿಸೋಣ. ಸದ್ಯ ಅಧಿಕಾರಿಗಳೆಲ್ಲಾ ದಸರಾಗೆ ಸಜ್ಜಾಗಿ ತಮ್ಮ ವ್ಯಾಪ್ತಿಯ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯಿತಿ ಸಿಇಓ ಕೆ.ಎಂ.ಗಾಯಿತ್ರಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಮುಡಾ ಆಯುಕ್ತ ದಿನೇಶ್‌ಕುಮಾರ್, ಜಿಲ್ಲಾ ಪಂಚಾಯ್ತಿ ಉಪಕಾರ್ಯದರ್ಶಿ ಡಾ.ಎಂ. ಕೃಷ್ಣರಾಜು, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕಿ ಸವಿತಾ ಸೇರಿದಂತೆ ಅನೇಕ ಅಧಿಕಾರಿಗಳು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ವ್ಯಾಪಾರಿ : (ಪುಸ್ತಕದ ಅಂಗಡಿಯಲ್ಲಿ) ಈ ಪುಸ್ತಕದಲ್ಲಿ ನಿಮ್ಮ ಸಂಶಯಗಳಿಗೆ ಅರ್ಧದಷ್ಟು ಪರಿಹಾರ ಸಿಗುತ್ತದೆ.
ಅವರು : ಹಾಗಿದ್ದರೆ ಎರಡು ಪುಸ್ತಕ ಕೊಡಿ!

ಮೈಸೂರು ಮಿತ್ರ
ಬುಧವಾರ, 6 ಸೆಪ್ಟೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಪ್ರತಿಯೊಂದು ಕಷ್ಟದಲ್ಲೂ ಸುಖದ ಬೀಜ ಹುದುಗಿರುತ್ತದೆ.
– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎಮ್ಮೆಗೆ ಎರಡು ಕೋಡು, ಹೆಮ್ಮೆಗೆ ಎಂಟು ಕೋಡು

ನಿಮ್ಮ ಪತ್ರಗಳು

ಡೈರಿ ರಸ್ತೆಯನ್ನು ದ್ವಿಮುಖ ಜೋಡಿ ರಸ್ತೆಯಾಗಿ ಮಾಡಿ

ಮಾನ್ಯರೆ,

ಮೈಸೂರಿನ ಸಿದ್ಧಾರ್ಥನಗರ, ಆಲನಹಳ್ಳಿ, ರಾಘವೇಂದ್ರನಗರಕ್ಕೆ ಹೋಗಬೇಕಾದರೆ ನಜರ್‌ಬಾದ್ ಪೊಲೀಸ್ ಸ್ಟೇಷನ್ ಸರ್ಕಲ್, ಡೈರಿ ಹಾಗೂ ಟೆರೇಷಿಯನ್ ಕಾಲೇಜು ರಸ್ತೆ ಮುಖಾಂತರ ನೂರಾರು ವಾಹನಗಳು ಚಲಿಸುತ್ತವೆ. ಈ ರಸ್ತೆಯಲ್ಲಿ ಅನೇಕ ವಸತಿ ಸಮುಚ್ಚಯಗಳು ತಲೆ ಎತ್ತಿವೆ. ಪ್ರತಿದಿನ ಈ ರಸ್ತೆಯಲ್ಲಿ ದ್ವಿಚಕ್ರ ವಾಹನ ಹಾಗೂ ಇತರ ವಾಹನಗಳಿಗೆ ಅಪಘಾತವಾಗುತ್ತದೆ. ಇತ್ತೀಚೆಗೆ 'ಮೈಸೂರು ಮಿತ್ರ' ಪತ್ರಿಕೆಯ ನೌಕರರೊಬ್ಬರು ಹೊಸದಾಗಿ ಹಾಕಿದ ವೇಗ ನಿಯಂತ್ರಣ ಡುಬ್ಬದಲ್ಲಿ ಬಿದ್ದು ಕೈಕಾಲುಗಳಿಗೆ ತೊಂದರೆ ಮಾಡಿಕೊಂಡಿದ್ದಾರೆ.

ನಜರ್‌ಬಾದ್ ಪೊಲೀಸ್ ಠಾಣೆಯಿಂದ ಡೈರಿವರೆಗಿನ ರಸ್ತೆ ಅಗಲ ಕಿರಿದಾಗಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಇಲ್ಲಿನ ಶಾಸಕರನ್ನು ಹಲವಾರು ಬಾರಿ ಈ ಬಗ್ಗೆ ಮನವಿ ಮಾಡಿದರೂ ಉಪಯೋಗವಾಗಲಿಲ್ಲ. ದ್ವಿಮುಖ ರಸ್ತೆಗೆ ಜಾಗ ಬಿಟ್ಟಿದ್ದರೂ ಸಹ ಕಾಣದ ಕೈಗಳು ಈ ರಸ್ತೆಯ ಅಗಲೀಕರಣವನ್ನು ಮಾಡುತ್ತಿಲ್ಲ. ಹಲವಾರು ಜೀವಗಳು ಈ ರಸ್ತೆಗೆ ಬಲಿಯಾಗಿವೆ. ಸರಕಾರ ಈ ಬಗ್ಗೆ ಏನೂ ಕ್ರಮ ಕೈಗೊಂಡಿಲ್ಲ. ಅಮೂಲ್ಯ ಜೀವಗಳು ಬಲಿಯಾಗುವ ಮುನ್ನ ಈ ರಸ್ತೆಯನ್ನು ದ್ವಿಮುಖ ಜೋಡಿ ರಸ್ತೆ ಮಾಡಬೇಕಾಗಿ ಮನವಿ.

–ರಘುವೀರ ಪುರಾಣಿಕ, ಮೈಸೂರು.



ಶುದ್ಧ ಕುಡಿಯುವ ನೀರಿನ ಘಟಕವನ್ನು ದುರಸ್ತಿಗೊಳಿಸಿ

ಮಾನ್ಯರೆ,

ಹುಣಸೂರಿನ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕವು ಕೆಟ್ಟು ನಿಂತಿದ್ದು ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ. ನಿತ್ಯವು ನೂರಾರು ರೈತರು ತಮ್ಮ ತಮ್ಮ ತರಕಾರಿಗಳನ್ನು ಮಾರಾಟ ಮಾಡಲು ಇಲ್ಲಿಗೆ ಬರುತ್ತಿದ್ದು, ರೈತರಿಗೆ ಕುಡಿಯಲು ನೀರಿಲ್ಲದೆ ಪರಿತಪಿಸುವಂತಾಗಿದೆ. ಆದ್ದರಿಂದ ಕೂಡಲೇ ಈ ಶುದ್ಧ ಕುಡಿಯುವ ನೀರಿನ ಘಟಕವನ್ನು ದುರಸ್ತಿಗೊಳಿಸಬೇಕೆಂದು ಮನವಿ.

– ಆಯರಹಳ್ಳಿ ಪ್ರವೀಣ್, ಅಧ್ಯಕ್ಷ, ಜನಧ್ವನಿ ಫೌಂಡೇಶನ್

ಹೊಂಡಮಯ ರಸ್ತೆ ಸರಿಪಡಿಸಿ

ಮಾನ್ಯರೆ,

ಎಸ್‌ವಿಇಐ ಶಾಲೆಯ ಮುಂದಿರುವ ನಾಲ್ಕು ರಸ್ತೆಗಳು ಸೇರುವ ಜಂಕ್ಷನ್ ಸಂಪೂರ್ಣ ಹೊಂಡಮಯವಾಗಿದ್ದು, ಮಳೆ ಬಂದರೆ ನೀರು ನಿಂತು ಓಡಾಡಲು ಕಷ್ಟವಾಗಿದೆ. ನಾಲ್ಕು ಕಡೆಯೂ ರಸ್ತೆಗಳು ಗುಂಡಿ ಬಿದ್ದಿವೆ. ದಿನ ಸಾವಿರಾರು ಮಕ್ಕಳು, ವಾಹನಗಳು ಓಡಾಡುತ್ತವೆ. ನೂರಾರು ಮಕ್ಕಳು ಸೈಕಲಿನಲ್ಲಿ ಓಡಾಡುತ್ತಾರೆ. ಎಲ್ಲರೂ ಹೊಂಡಗಳನ್ನು ತಪ್ಪಿಸುವ ಭರದಲ್ಲಿ ಹೇಗೆಂದರೆ ಹಾಗೆ ಓಡಾಡುತ್ತಾರೆ. ಇದರಿಂದ ಅಲ್ಲಿ ಓಡಾಡಲು ಭಯವಾಗುತ್ತದೆ. ಸಂಬಂಧಪಟ್ಟವರು ಆ ಕಡೆ ಗಮನ ಹರಿಸುತ್ತಿಲ್ಲ. ಏನಾದರೂ ಅನಾಹುತ ಸಂಭವಿಸುವ ಮೊದಲು ಕ್ರಮ ಕೈಗೊಳ್ಳಬೇಕಾಗಿ ಮನವಿ.

– ಗಾಯತ್ರಿ ಕೆ.ಎಸ್., ಮೈಸೂರು.

ಭಾರತ ವಿಜ್ಞಾನದಲ್ಲಿ ಮುಂಚೂಣಿ ರಾಷ್ಟ್ರ

ಮಾನ್ಯರೆ,

ಚಂದ್ರಯಾನ–3, ಯಶಸ್ವಿ ಉಡಾವಣೆಯಿಂದಾಗಿ ಭಾರತ ಇಂದು ವಿಶ್ವದಲ್ಲೇ ಬಾಹ್ಯಾಕಾಶ ವಿಜ್ಞಾನದಲ್ಲಿ ಮುಂಚೂಣಿ ರಾಷ್ಟ್ರವೆನಿಸಿದೆ.

ಇಸ್ರೊ ವಿಜ್ಞಾನಿಗಳ ಈ ಅವಿರತ ಶ್ರಮ ಭಾರತದ ಪ್ರತಿ ಪ್ರಜೆಯು ಹೆಮ್ಮೆ ಪಡುವ ವಿಷಯ. ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಇದುವರೆಗೂ ಮುಂಚೂಣಿಯಲ್ಲಿದ್ದ, ಅಮೆರಿಕ, ರಷ್ಯಾ, ಜಪಾನ್ ದೇಶಕ್ಕೆ ಸಡ್ಡು ಹೊಡೆದದ್ದು ನಮ್ಮ ಇಸ್ರೋ ವಿಜ್ಞಾನಿಗಳ ಮಹತ್ಸಾಧನೆ. ಇದಕ್ಕಾಗಿ ಭಾರತೀಯರೆಲ್ಲರೂ ಇಸ್ರೋ ವಿಜ್ಞಾನಿಗಳನ್ನು ಅಭಿನಂದಿಸಲೇಬೇಕು. ಆದರೆ ಕೆಲವು ರಾಜಕೀಯ ಪಕ್ಷಗಳು ಈ ಸಾಧನೆಯನ್ನು ನಮ್ಮ ಪಕ್ಷದ ಸಾಧನೆ ಎನ್ನುವಂತೆ ಬೀಗುತ್ತಿವೆ. ಯಾವುದೇ ಕಾರಣಕ್ಕೂ ಯಾವುದೇ ರಾಜಕೀಯ ಪಕ್ಷಗಳು ಇಸ್ರೋ ವಿಜ್ಞಾನಿಗಳ ಈ ಅಭೂತಪೂರ್ವ ಸಾಧನೆಯನ್ನು ಚುನಾವಣೆಯಲ್ಲಿ ರಾಜಕೀಯವಾಗಿ ಬಳಸಿಕೊಳ್ಳಬಾರದು. ಮತ್ತೊಂದು, ಮುಖ್ಯವಾಗಿ ಈ ಯಶಸ್ವಿ ಉಡಾವಣೆಯಿಂದ ಸಾಮಾನ್ಯ ಜನರಿಗೆ ಆಗುವ ಉಪಯೋಗಗಳೇನು. ಈ ಎರಡೂ ವಿಷಯಗಳ ಬಗ್ಗೆ ಚರ್ಚೆಯಾಗಬೇಕು.

– ಬೂಕನಕೆರೆ ವಿಜೇಂದ್ರ, ಲೇಖಕರು, ಕುವೆಂಪುನಗರ, ಮೈಸೂರು

ಸನಾತನ ಹಿಂದೂ ಧರ್ಮದ ನಾಶ ಸಾಧ್ಯವಿಲ್ಲ

ಮಾನ್ಯರೆ,

ಸನಾತನ ಹಿಂದೂ ಧರ್ಮ ಮಲೇರಿಯಾ ಮತ್ತು ಡೆಂಗ್ಯು ಇದ್ದಂತೆ. ಅದನ್ನು ಬೇರು ಸಮೇತ ಕಿತ್ತುಹಾಕಿ ಆ ಧರ್ಮವನ್ನು ನಿರ್ಮೂಲನೆ ಮಾಡಬೇಕು ಎಂದು ಹೇಳಿರುವ ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಅವರ ಪುತ್ರ ಹಾಲಿ ಸಚಿವ ಉದಯ ನಿಧಿ ಅವರ ಹೇಳಿಕೆಯನ್ನು ಕೇಳಿ, ನೋಡಿ ಸಖೇದಾಶ್ಚರ್ಯ ಆಗುತ್ತದೆ.

ಅವರು ಸೂರ್ಯ, ಚಂದ್ರ, ಇತರ ಗ್ರಹಗಳನ್ನು ನಂಬುವುದಿಲ್ಲವೆ? ಆಕಾಶ, ವಾಯು, ಮಳೆ ಹಾಗೂ ಜಲಚರಗಳನ್ನೂ, ಸಮುದ್ರ, ಬಾವಿ ಮತ್ತು ನದಿಗಳ ಜಲವನ್ನು ನಂಬುವುದಿಲ್ಲವೆ? ಭೂಮಿಯನ್ನು ನಂಬುವುದಿಲ್ಲವೆ? ತಾವುಗಳು ಭೂಮಿಯ ಮೇಲೆ ವಾಸಿಸುತ್ತಿರುವುದನ್ನು ನಂಬುವುದಿಲ್ಲವೆ? ತಮ್ಮ ತಾಯಿ ತಂದೆಯವರನ್ನು ನಂಬುವುದಿಲ್ಲವೆ?

ಇವರುಗಳಿಗೆ ಸೊಳ್ಳೆಯಿಂದ ಯಾವಾಗಲೂ ಮಲೇರಿಯಾ ಅಥವಾ ಡೆಂಗ್ಯು ರೋಗ ಬಂದಿಲ್ಲವೆ? ಇವರ ಶರೀರ ಶಾಶ್ವತವೇ? ಇಂದಲ್ಲಾ ನಾಳೆ ಎಲ್ಲರೂ ಯಮಲೋಕ ಸೇರಲೇಬೇಕಲ್ಲವೆ? ಧರ್ಮ ಮತ್ತು ದೇವರು ಎಂಬುದು ಅವರವರ ನಂಬಿಕೆಗೆ ಬಿಟ್ಟ ವಿಷಯ. ಅದನ್ನು ಯಾರ ಮೇಲೂ ಹೇರುವುದು ಸಾಧ್ಯವಿಲ್ಲ.

ಈ ವಿಷಯದಲ್ಲಿ ಪೇಜಾವರ ಶ್ರೀಗಳ ಹೇಳಿಕೆ ಖಂಡಿತಾ ಸರಿಯಾಗಿದೆ ಎಂಬುದು ಸನಾತನ ಜ್ಞಾನಿಗಳ ಅಚಲ ನಂಬಿಕೆ. ಒಂದು ಶಿಸ್ತನ್ನು ಬೆಳೆಸಿಕೊಂಡು ಬೇರೆ ಯಾರಿಗೂ ತೊಂದರೆ ಕೊಡದೆ ತಮ್ಮ ಪಾಡಿಗೆ ತಾವು ಬದುಕು ನಡೆಸುತ್ತಿರುವ ಸನಾತನವಾದಿಗಳಿಗೆ ಯಾರೂ ಬುದ್ಧಿ ಹೇಳಬೇಕಾಗಿಲ್ಲ. ಅವರವರ ನಂಬಿಕೆ ಅವರದ್ದು. ಇದರಲ್ಲಿ ಬೇರೆ ಯಾರೂ ತಮ್ಮ ಮೂಗು ತೂರಿಸಬೇಕಿಲ್ಲ.

–ಬೇಲೂರು. ದ. ಶಂ. ಪ್ರಕಾಶ್, ಮೈಸೂರು

ಇಂದು ಕೃಷ್ಣ ಜನ್ಮಾಷ್ಟಮಿ

ಕೃಷ್ಣನ ನೆನೆದರೆ... ಕಷ್ಟವೊಂದಿಷ್ಟಿಲ್ಲ...

ವಸುದೇವಸುತಂ ದೇವಂ ಕಂಸ ಚಾಣುರ ಮರ್ಧನಂ
ದೇವಕಿ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ

ಪೂಜಾ ಮಠದ್
ಮೈಸೂರು

“ ತೂಗಿರೇ ರಂಗನ ತೂಗಿರೇ ಕೃಷ್ಣನ ತೂಗಿರೆ ಅಚ್ಯುತಾನಂತಾನ... ಎಂದು ಜಗದ್ಧೋದ್ಧಾರ ಶ್ರೀ ಕೃಷ್ಣನಿಗೆ ಲಾಲಿ ಹಾಡಿ ತೊಟ್ಟಿಲನ್ನು ತೂಗುವ ಈ ಪುಣ್ಯದಿನವೇ ಶ್ರೀ ಕೃಷ್ಣ ಜನ್ಮಾಷ್ಟಮಿ.

ದ್ವಾಪರಯುಗದ ಏಳನೇ ಮನ್ವಂತರ ವೈವಸ್ವತ ಮನ್ವಂತರದಲ್ಲಿ ವಿಜಯ ನಾಮಸಂವತ್ಸರದ ಶ್ರಾವಣಮಾಸ ಕೃಷ್ಣಪಕ್ಷದ ಅಷ್ಟಮಿ ದಿವಸ ರೋಹಿಣಿ ನಕ್ಷತ್ರದಲ್ಲಿ ಭಗವಂತ ಶ್ರೀಮನ್ನಾರಾಯಣನ ಎಂಟನೇ ಅವತಾರವಾಗಿ ಭಕ್ತರ ಉದ್ಧಾರಕ್ಕಾಗಿ ಶ್ರೀಕೃಷ್ಣನು ಬಾಲಕೃಷ್ಣನಾಗಿ ದೇವಕಿ ಮತ್ತು ವಾಸುದೇವರ ಮಗುವಾಗಿ ಜನ್ಮತಾಳುತ್ತಾನೆ. ದೇವಕಿ ಕೃಷ್ಣನಿಗೆ ಜನ್ಮನೀಡಿದ ತಾಯಿಯಾದರೆ, ಯಶೋಧೆ ಸಾಕಿ ಬೆಳೆಸಿದ ತಾಯಿ.

ಬಾಲಕೃಷ್ಣನ ಜನನ: ಶ್ರೀಕೃಷ್ಣನ ಸೋದರ ಮಾವ ಕಂಸ ತನ್ನ ತಂದೆ ಉಗ್ರಸೇನರನ್ನು ಬಂಧನದಲ್ಲಿಟ್ಟು ತಾನು ರಾಜನಾಗಿದ್ದನು. ಪ್ರೀತಿಪಾತ್ರಳಾದ ತಂಗಿ ದೇವಕಿಗೆ ವಾಸುದೇವನೊಂದಿಗೆ ಮದುವೆ ಮಾಡುತ್ತಾನೆ. ನಂತರದ ದಿನಗಳಲ್ಲಿ ಅಶರೀರವಾಣಿಯೊಂದು ಕಂಸನಿಗೆ ಕೇಳಿಸುತ್ತದೆ. ಆ ಪ್ರಕಾರ ದೇವಕಿಯ 8ನೆಯ ಮಗು ಕಂಸನ ವಧೆ ಮಾಡುತ್ತದೆ ಎಂದು. ಆ ಕಾರಣಕ್ಕೆ ಕಂಸನು ದೇವಕಿಯನ್ನು ಕೊಲ್ಲಲು ಮುಂದಾಗುತ್ತಾನೆ ವಾಸುದೇವನು ಅದನ್ನು ತಡೆದು ಪ್ರತಿ ಮಗುವು ಹುಟ್ಟಿದ ತಕ್ಷಣ ಕಂಸನಿಗೆ ಅರ್ಪಿಸುವೆವು ಎಂದು ಹೇಳುತ್ತಾನೆ. ಕಂಸನು ಅವರನ್ನು ಬಂಧಿಸಿ ಅವರಿಗೆ ಹುಟ್ಟಿದ 7ಮಕ್ಕಳನ್ನು ಕೊಂದನು. ಕಂಸನಿಗೆ ತಿಳಿಯದ ಹಾಗೆ ವಾಸುದೇವನು 8ನೇ ಮಗು ಜಗದ್ಧೋದ್ಧಾರಕ ಶ್ರೀಕೃಷ್ಣನನ್ನು ಬುಟ್ಟಿಯಲ್ಲಿ ಮಲಗಿಸಿ ತಲೆಯ ಮೇಲೆ ಹೊತ್ತು ಆದಿಶೇಷನ ರಕ್ಷಣೆಯಲ್ಲಿ ಯಮುನಾ ನದಿಯನ್ನು ದಾಟಿ ಗೋಕುಲಕ್ಕೆ ತೆರಳಿ ತನ್ನ ಗೆಳೆಯ ನಂದಕುಮಾರನ ಮನೆಯಲ್ಲಿ ಯಶೋಧೆಯ ಮಡಿಲಲ್ಲಿ ಬಿಟ್ಟು ಮಥುರಾಕ್ಕೆ ತೆರಳುತ್ತಾನೆ.

ಈ ರೀತಿಯಾಗಿ ಲೋಕರಕ್ಷಕ ಪರಮಾತ್ಮ ಶ್ರೀಕೃಷ್ಣನು ಭೂಮಿಯಲ್ಲಿ ಅವತರಿಸುತ್ತಾನೆ. ಗೋಕುಲ ನಂದನ ಶ್ರೀಕೃಷ್ಣ ಹುಟ್ಟಿದ ಈ ದಿನವನ್ನು ಕೃಷ್ಣ ಜನ್ಮಾಷ್ಟಮಿ ಅಥವಾ ಗೋಕುಲಾಷ್ಟಮಿ ದಿನವನ್ನಾಗಿ ಆಚರಣೆಮಾಡುತ್ತಾರೆ.

ಶ್ರೀ ಕೃಷ್ಣನ ನೆನೆದರೆ ಕಷ್ಟವೊಂದಿಷ್ಟಿಲ್ಲ.. ಎಂಬಂತೆ ಭಕ್ತರ ಕೂಗಿಗೆ ಓಗೊಟ್ಟು ಸಕಲರನ್ನು ಸಲಹುತ್ತಿರುವ ಶ್ರೀಮದ್ಭಾಗವತ ಪ್ರತಿಪಾದ್ಯನಾಗಿ ಧರ್ಮ ಸಂಸ್ಥಾಪನೆಗೆ ಅವತರಿಸಿದ ಪಿಳ್ಳಂಗೋವಿ ಶ್ರೀಕೃಷ್ಣನ ಸ್ವಭಾವವೇ ಮುದ್ದು ರಂಜಿತಮಯ, ಪ್ರೀತಿಯ ಪರಿಪಾಕ, ಅನುರಕ್ತಿಪೂರ್ಣ. ನಿಸ್ಸೀಮವಾದ ಭಕ್ತಿ ಆತನವತಾರದ ಧರ್ಮದ ಸಂದೇಶ. ಗೋವುಗಳನ್ನು, ಗೋಪಾಲಕರನ್ನೂ, ಪಶು–ಪಕ್ಷಿ ವೃಕ್ಷ, ವನಸ್ಪತಿಗಳನ್ನು ಸಂರಕ್ಷಿಸಿ ಉದ್ಧರಿಸಿದ ಪರಮಾತ್ಮ, ಮಹಾಭಾರತದ ಸೂತ್ರಧಾರ, ಭಗವದ್ಗೀತೆಯ ಮೂಲಕ ಆಧ್ಯಾತ್ಮ ತತ್ವವನ್ನು ಉಪದೇಶಿಸಿದ ಯೋಗಾಚಾರ್ಯ ಶ್ರೀಕೃಷ್ಣ ಪರಮಾತ್ಮನ ತನು–ಮನವರಳಿಸುವ ಶ್ರೀಕೃಷ್ಣ ಜನ್ಮಾಷ್ಟಮಿಯ ಸಂಭ್ರಮ ಇಂದು ವಿಶ್ವದೆಲ್ಲೆಡೆ ಕಳೆಗಟ್ಟಿದೆ.



ಜನ್ಮಾಷ್ಟಮಿ ಆಚರಣೆ: ಶ್ರೀ ಕೃಷ್ಣ ಜನ್ಮಾಷ್ಟಮಿಯ ದಿನದಂದು ಮನೆ ಮತ್ತು ದೇವಾಲಯಗಳನ್ನು ಸುಂದರವಾಗಿ ಅಲಂಕರಿಸಿ ಕೃಷ್ಣನ ಪುಟ್ಟ ಹೆಜ್ಜೆಗಳನ್ನು ರಂಗೋಲಿಯಲ್ಲಿ ಬರೆದು ಕೃಷ್ಣನ ವಿಗ್ರಹಗಳನ್ನು ವಿಧವಿಧವಾಗಿ ಅಲಂಕರಿಸಿ ಬಗೆಬಗೆಯ ತಿಂಡಿಗಳನ್ನು ಮಾಡಿ ಬಾಲಕೃಷ್ಣನನ್ನು ಪೂಜಿಸಲಾಗುತ್ತದೆ. ಕೆಲವೆಡೆ ಮಧ್ಯರಾತ್ರಿಯವರೆಗೆ ಉಪವಾಸವಿದ್ದು ನಂತರ ಆಹಾರ ಸ್ವೀಕರಿಸುವ ಸಂಪ್ರದಾಯವಿದೆ. ಪ್ರತಿವರ್ಷ ಜನ್ಮಾಷ್ಟಮಿ ವ್ರತವನ್ನು 2ದಿನಗಳವರೆಗೆ ಆಚರಿಸಲಾಗುತ್ತದೆ. ಮೊದಲ ದಿನ ಸ್ಮಾರ್ತ ಅಂದರೆ ಋಷಿ, ಸಂತ ಸಮುದಾಯದ ಜನರು ವ್ರತವನ್ನು ಆಚರಿಸುತ್ತಾರೆ ಮತ್ತು 2ನೇ ದಿನ ವೈಷ್ಣವ ಸಮುದಾಯದ ಜನರು ಆಚರಿಸುತ್ತಾರೆ.

ಶ್ರೀಕೃಷ್ಣನು ಮಧ್ಯರಾತ್ರಿಯಲ್ಲಿ ಜನಿಸಿದ ಕಾರಣ ರಾತ್ರಿ ಪೂಜೆಗೆ ಹೆಚ್ಚಿನ ಮಹತ್ವವಿದೆ. ಆದ್ದರಿಂದ ಈ ದಿನದಂದು ಬಾಲಕೃಷ್ಣನ ವಿಗ್ರಹವನ್ನು ಮಧ್ಯರಾತ್ರಿಯಲ್ಲಿ ಅಭಿಷೇಕ ಮಾಡಲಾಗುತ್ತದೆ. ನಂತರ ತೊಟ್ಟಿಲಲ್ಲಿ ವಿಗ್ರಹ ಇಟ್ಟು ಲಾಲಿಯನ್ನು ಹಾಡಲಾಗುತ್ತದೆ. ಮರುದಿನ ಬೇಗನೆ ಎದ್ದು ಶುಚಿರ್ಭೂತರಾಗಿ ಪೂಜಾ ಕೋಣೆಯನ್ನು ಸ್ವಚ್ಛಗೊಳಿಸಿ ಮಣೆಯನ್ನು ಹಾಕಿ ಅದರ ಮೇಲೆ ಹಳದಿ ಬಟ್ಟೆ ಹರಡಿ ದೇವರ ಕೋಣೆಯಲ್ಲಿನ ಎಲ್ಲಾ ದೇವತೆಗಳಿಗೆ ಜಲಾಭಿಷೇಕವನ್ನು ಮಾಡಿ ಮಣೆಯ ಮೇಲೆ ಬಾಲ ಗೋಪಾಲನ ವಿಗ್ರಹ ಸ್ಥಾಪಿಸಿ ಪೂಜಿಸಿ ಸಕ್ಕರೆ, ತುಪ್ಪ, ಬೆಣ್ಣೆ ಇತ್ಯಾದಿಗಳನ್ನು ಅರ್ಪಿಸಿ ಕೊನೆಯಲ್ಲಿ ಆರತಿ ಮಾಡಿ ಪ್ರಸಾದ ವಿತರಣೆ ಮಾಡಲಾಗುತ್ತದೆ.

ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ವಿಶ್ವದೆಲ್ಲೆಡೆ ವಿವಿಧ ರೀತಿಯಲ್ಲಿ ಆಚರಣೆಮಾಡಲಾಗುತ್ತದೆ. ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲಿ ಪುರುಷ ಮತ್ತು ಮಹಿಳೆಯರು ಮಾನವ ಪಿರಮಿಡ್ ಅನ್ನು ರೂಪಿಸಿ ಮಜ್ಜಿಗೆ ತುಂಬಿದ ಮಡಕೆಗಳನ್ನು ಒಡೆಯುವ ಮೂಲಕ ಆಚರಿಸುತ್ತಾರೆ. ದಹಿ ದಂಡಿ, ಮಜ್ಜಿಗೆ ತುಂಬಿದ ಮಣ್ಣಿನ ಮಡಕೆಯನ್ನು ಒಡೆಯುವ ಸಂಪ್ರದಾಯದ ಇನ್ನೊಂದು ಹೆಸರು. ಜಮ್ಮುವಿನಲ್ಲಿ ಗಾಳಿಪಟವನ್ನು ಹಾರಿಸುವ ವಿಧಾನದಲ್ಲಿ, ಮಣಿಪುರ, ಇಂಫಾಲ್‌ನಲ್ಲಿ ಇಸ್ಕಾನ್ ದೇವಾಯಲಗಳಲ್ಲಿ ಕೃಷ್ಣ ಜನ್ಮ ಎಂದು ಬಾಲ ಕೃಷ್ಣನ ಆರಾಧನೆ ಮಾಡುತ್ತಾರೆ. ಅದೇ ರೀತಿಯಲ್ಲಿ ಪೂರ್ವ ಭಾರತದಲ್ಲಿ ಜನ್ಮಾಷ್ಟಮಿ ನಂತರದ ನಂದಾ ಉತ್ಸವವು ಹಗಲು ಉಪವಾಸವನ್ನು ಆಚರಿಸುವ ಮೂಲಕ ಒರಿಸ್ಸಾದ ಪುರಿ ಮತ್ತು ಪಶ್ಚಿಮ ಬಂಗಾಳದ ನಬದ್ವೀಪ್‌ನಲ್ಲಿ ಜನ್ಮಾಷ್ಟಮಿಯ ಸಂಭ್ರಮ ಆಚರಿಸುತ್ತಾರೆ.

ಉಡುಪಿಯ ಕಂಡೀರಾ, ಉಡುಪಿಯ ಕೃಷ್ಣನ ಕಂಡೀರಾ ಎಂಬಂತೆ ಪಶ್ಚಿಮ ಘಟ್ಟದ ಕರ್ನಾಟಕ ಕರಾವಳಿಯ ರಮಣೀಯ ಪ್ರಕೃತೀಯ ಮಡಿಲಲ್ಲಿ ಇರುವ ಶ್ರೀಕೃಷ್ಣನ ಆಡುಂಬೋಲ ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ಮುಖ್ಯಪ್ರಾಣ ಆಂಜನೇಯ ಸ್ವಾಮಿ ಹಾಗೂ ಗರುಡ ದೇವರ ಸಾನಿಧ್ಯದ ಮಧ್ಯದಲ್ಲಿ ಸ್ವರ್ಣಾಭರಣಗಳಿಂದ, ವಜ್ರ ಕವಚದಿಂದ ಅಲಂಕೃತನಾದ ಕಡಗೋಲು ಕೃಷ್ಣನ ಸೊಬಗನ್ನು ಸವಿಯುವುದೇ ಒಂದು ಆನಂದಕರ ಕ್ಷಣವಾಗಿದೆ.

ಶ್ರೀಕೃಷ್ಣಾಜನ್ಮಾಷ್ಟಮಿಯ ಆಚರಣೆಯನ್ನು ವಿಟ್ಲಪಿಂಡಿ ಶ್ರೀಕೃಷ್ಣಲೀಲೋತ್ಸವವನ್ನಾಗಿ ವಿಜೃಂಭಣೆಯಿಂದ ನಡೆಸಲಾಗುತ್ತದೆ. ಇಂದು ಶ್ರೀಕೃಷ್ಣ ಮಠದ ರಥಬೀದಿಯನ್ನು ಸುಂದರವಾಗಿ ಅಲಂಕರಿಸಿ, ರಥಬೀದಿಯ ಸುತ್ತಾ ಕೃಷ್ಣಾವತಾರಿ ವೇಷಧಾರಿಗಳು, ಗೋಪಾಲಕರು, ಹುಲಿವೇಷ ಕುಣಿತ ಹೀಗೆ ಕೃಷ್ಣನ ಬಾಲ ಲೀಲೆಗಳ ಮರುನಿರ್ಮಾಣ ಮಾಡಿ ಬಾಲಕೃಷ್ಣನ ಬಾಲಲೀಲೆಗಳನ್ನು ನೆನೆದು, ವಿಶೇಷವಾಗಿ ವಿಟ್ಲಪಿಂಡಿ ಉತ್ಸವದಲ್ಲಿ ಮಾತ್ರ ಕೃಷ್ಣನ ಮಣ್ಣಿನ ಮೂರ್ತಿಯನ್ನು ಮಾಡಿ ಸ್ವರ್ಣ ರಥದಲ್ಲಿರಿಸಿ ಮೆರವಣಿಗೆ ಮಾಡಿ ಬಳಿಕ ಮಧ್ವಸರೋವರದಲ್ಲಿ ಮೂರ್ತಿಯನ್ನು ವಿಸರ್ಜಿಸುವ ಮೂಲಕ ಶ್ರೀಕೃಷ್ಣಾಜನ್ಮಾಷ್ಟಮಿ ಆಚರಣೆಯನ್ನು ವಿಟ್ಲಪಿಂಡಿ ಉತ್ಸವವನ್ನಾಗಿ ಆಚರಣೆ ಮಾಡಲಾಗುತ್ತದೆ.

ಮೊಸರು ಕುಡಿಕೆಗೆ ವಿಠಲನ ಹಿಂಡಿ ವಿಟ್ಲಪಿಂಡಿ ಉತ್ಸವ: ಕೃಷ್ಣನ ರಥಬೀದಿಯಲ್ಲಿ ಜನಸಾಗರ ತುಂಬಿ ತುಳುಕುವ ನಡುವೆ ಎತ್ತರದ ಕೋಲುಗಳನ್ನು ನಿಲ್ಲಿಸಿ ದಿಬ್ಬಗಳಿಗೆ ಕಟ್ಟಿದ ಮಡಕೆಗಳನ್ನು ಗೊಲ್ಲ ವೇಷಧಾರಿಗಳು ಒಡೆಯುವ ಸಂಪ್ರದಾಯವಿದೆ. ಗೊಲ್ಲವೇಷಧಾರಿಗಳು ಎತ್ತರದ ದಿಬ್ಬಗಳಿಗೆ ಕಟ್ಟಿದ ಮಡಕೆಗಳನ್ನು ಕೋಲಿನ ಸಹಾಯದಿಂದ ಒಡೆಯುವುದು ಪದ್ಧತಿ. ಒಡೆಯುವವರ ಕೋಲಿಗೆ ಸಿಲುಕದಂತೆ ರಾಟೆಯ ಸಹಾಯದಿಂದ ಮಡಕೆಯನ್ನು ಮೇಲೆ ಕೆಳಗೆ ಆಡಿಸುವುದನ್ನು ನೋಡುವುದೇ ಚಂದ. ಕೊನೆಗೂ ಮಡಕೆಗೆ ಕೋಲು ತಾಗಿ ಮಡಕೆ ಒಡೆದು ಮೊಸರು ಹೊರಗೆ ಚಿಮ್ಮುವ ಆ ಕ್ಷಣ ನಿಜಕ್ಕೂ ಅದ್ಭುತ.

ಗೋಕುಲ ನಗರದ ಮರುನಿರ್ಮಾಣ: ಶ್ರೀಕೃಷ್ಣ ಗೋಕುಲದಲ್ಲಿ ಜನಿಸಿದ ಸಮಯದಲ್ಲಿ ಆಚರಿಸಿದ ಸಂಭ್ರಮವೇ ಉಡುಪಿಯಲ್ಲಿ ಇಂದಿಗೂ ಆಚರಿಸಲಾಗುತ್ತದೆ. ವಿಟ್ಲಪಿಂಡಿ ಎಂದಾಕ್ಷಣ ನೆನಪಾಗುವುದು ಹುಲಿವೇಷ. ಹುಲಿವೇಷಗಳಿಲ್ಲದ ವಿಟ್ಲಪಿಂಡಿ ಅಪೂರ್ಣ. ಮಠದ ರಥಬೀದಿಯ ಸುತ್ತ Center of Attraction ಎಂಬಂತೆ ಭಯಾನಕ ನೂರಾರು ಹುಲಿ ವೇಷಧಾರಿಗಳ ಜೊತೆಗೆ ವೇಷ ಇಲ್ಲದಿದ್ದರೂ ಹುಲಿ ವೇಷದ ಸದ್ದಿಗೆ ನೃತ್ಯ ಮಾಡುವ ಜನರ ಗುಂಪುಗಳು, ಕೈಯಲ್ಲಿ ಕೊಳಲು ಹಿಡಿದು ಮುಖಕ್ಕೊಂದಿಷ್ಟು ಬಣ್ಣ ಬಳಿದುಕೊಂಡು ಜನಸಾಗರದ ನಡುವೆ ಪುಟ್ಟ ಪುಟ್ಟ ಹೆಜ್ಜೆ ಹಾಕಿ ಓಡಾಡುತ್ತಿರುವ ಮಕ್ಕಳು ಮತ್ತು ಅವರಲ್ಲಿರುವ ಮುಗ್ಧತೆ, ವಿಭಿನ್ನ ಶೈಲಿಯ ಬೃಹದಾಕಾರದ ತಟ್ಟಿರಾಯಗಳು, ಬಾಲ ಕೃಷ್ಣವೇಷಾದಾರಿಗಳನ್ನು ನೋಡುವುದೇ ಇಡೀ ಊರಿಗೆ ಹೊಸ ವೇಷ ಧರಿಸಿದಂತೆ ಕಾಣುತ್ತದೆ. ಒಟ್ಟಾರೆಯಾಗಿ ಜನ್ಮಾಷ್ಟಮಿಯ ವಿಟ್ಲಪಿಂಡಿಯ ಉತ್ಸವವೂ ಬಣ್ಣ ಬಣ್ಣದ ವೇಷಗಳ ಜಾತ್ರೆ.

ಹೀಗೆ ಕಡಲಶಯನ ಕಡಗೋಲುದಾರಿ ಜಗದೊಡೆಯ ಶ್ರೀಕೃಷ್ಣ ಮನುಷ್ಯರಂತೆ ವ್ಯವಹರಿಸಿದರೂ ಕಾಲಕ್ಕೆ ತಕ್ಕ ಹಾಗೆ ತನ್ನ ಅಪ್ರತಿಮ ಮತ್ತು ಅಮೋಘವಾದ ಜ್ಞಾನ, ಬಲ, ಶಕ್ತಿ, ತೇಜಸ್ಸುಗಳನ್ನೂ ಮತ್ತು ಆತ್ಮ ಗುಣ ಸಂಪತ್ತನ್ನೂ ಪ್ರದರ್ಶಿಸಿದ ಪರಮ ಪುರುಷ. ಬಾಲಕೃಷ್ಣನಾಗಿ ಅವತರಿಸಿದ ಈ ಪುಣ್ಯದಿನದಂದು ಶ್ರೀಕೃಷ್ಣ ಪರಮಾತ್ಮನ ಕೃಪೆಗೆ ಪಾತ್ರರಾಗಿ ಸಕಲರಿಗೂ ಸಂಪೂರ್ಣ ಅನುಗ್ರಹ ಪ್ರಾಪ್ತವಾಗಲಿ. ಉಡುಪಿ ಕೃಷ್ಣ ಪೊಡವಿಗೊಡೆಯ ಬಿಡದೆ ನಿನ್ನ ಅಡಿಗೆರಗುವೆ...

ತಡರಾತ್ರಿ ಹಿರಿಯ ಪೊಲೀಸ್ ಅಧಿಕಾರಿಗಳ ವರ್ಗಾವಣೆ; ಬೆಳಗಾಗುತ್ತಲೇ ಎಂಟು ಅಧಿಕಾರಿಗಳಿಗೆ ಅಡ್ಡಗಾಲು!

ಬೆಂಗಳೂರು, ಸೆ.5(ಕೆಎಂಶಿ)– ಭಾರಿ ಬೇಡಿಕೆ ಇದ್ದ ಆಯಕಟ್ಟಿನ ಸ್ಥಳಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಡರಾತ್ರಿ 35 ಐಪಿಎಸ್ ಅಧಿಕಾರಿಗಳನ್ನು ವರ್ಗಾವರ್ಗಿಗೊಳಿಸಿ ಆದೇಶ ಹೊರಡಿಸಿದ್ದಾರೆ. ಈ ಆದೇಶ ಹೊರಬಿದ್ದ 8 ಗಂಟೆಯೊಳಗೆ ಮತ್ತೆ 8 ಪ್ರಮುಖ ಸ್ಥಳಗಳಿಗೆ ನಿಯೋಜಿತಗೊಂಡ ಅಧಿಕಾರಿಗಳು ಅಧಿಕಾರ ಸ್ವೀಕರಿಸದಂತೆ ಮತ್ತೊಂದು ಆದೇಶವೂ ಹೊರಬಿದ್ದಿದೆ.

ಕಳೆದ ಮೂರು ತಿಂಗಳಿಂದ ಆಯಕಟ್ಟಿನ ಸ್ಥಾನ ಪಡೆಯಲು ಅಧಿಕಾರಿಗಳ ನಡುವೆ ಪೈಪೋಟಿ, ಮತ್ತೊಂದೆಡೆ ತಮ್ಮ ಸಹೋದ್ಯೋಗಿಗಳಿಂದ ಒತ್ತಡಕ್ಕೆ ಒಳಗಾಗಿದ್ದರು. ಪ್ರಭಾವಿ ಮುಖಂಡರು ಮತ್ತು ಸಚಿವರ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಅವರು, ವರ್ಗಾವಣೆ ಮಾಡಿದ್ದರು.

ವರ್ಗಾವಣೆ ಆದೇಶ ಹೊರಬೀಳುತ್ತಿದ್ದಂತೆ ಕೆಲವು ಮುಖಂಡರು ಮತ್ತು ಸಚಿವರು, ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ತಮ್ಮ ಜಿಲ್ಲೆ ಹಾಗೂ ಪ್ರಮುಖ ಸ್ಥಳಗಳಿಗೆ ನಿಯೋಜಿತ ಅಧಿಕಾರಿಗಳ ಬಗ್ಗೆ ಅಪಸ್ವರ ಎತ್ತಿ ಮತ್ತೆ ಕೆಲವು ಬದಲಾವಣೆಗೆ ಒತ್ತಾಯಿಸಿದರು. ಈ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಅವರು, ಅಧಿಕಾರಿಗಳಾದ ಅಬ್ದುಲ್ ಅಹಾದ್, ಭೀಮಾಶಂಕರ ಗುಳೇದ್, ಬದರಿನಾಥ್, ನಿರಂಜನ್ ರಾಜ್ ಅರಸ್, ಅಕ್ಷಯ್ ಮಚ್ಚೇಂದ್ರ, ಶೇಖರ್ ತೆಕ್ಕಣ್ಣವರ್, ಸೈಯಿದ್ ಉಲ್ಲಾ, ಸಂಜೀವ್ ಪಾಟೀಲ್ ಅವರುಗಳನ್ನು ಡಿಜಿ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸುವಂತೆ ಆದೇಶ ಹೊರಬಿದ್ದಿದೆ. **ಈ ಆದೇಶ ಬರುವುದಕ್ಕೂ ಮುನ್ನ ಆದೇಶ ಪಟ್ಟಿ ಇಂತಿದೆ:** ವರ್ಗಾವಣೆಗೊಂಡ ಅಧಿಕಾರಿಗಳ ವಿವರ



ಅನುಪಮ್ ಅಗರ್ವಾಲ್ – ಮಂಗಳೂರು ನಗರ ಪೊಲೀಸ್ ಆಯುಕ್ತ ಡಾ.ಎಸ್ ಡಿ ಶರಣಪ್ಪ– ಡಿಐಜಿಪಿ & ಡೈರೆಕ್ಟರ್, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು, ವರ್ತಿಕಾ ಕಟಿಯಾರ್ – ಎಸ್.ಪಿ, ರಾಜ್ಯ ಅಪರಾಧ ದಾಖಲೆಗಳ ಘಟಕ, ಕಾರ್ತಿಕ್ ರೆಡ್ಡಿ– ಡಿಸಿಪಿ, ಬೆಂಗಳೂರು ಸಂಚಾರ ದಕ್ಷಿಣ ವಿಭಾಗ, ಕೆ.ಸಂತೋಷ್ ಬಾಬು – ಡಿಸಿಪಿ, ಆಡಳಿತ ವಿಭಾಗ, ಬೆಂಗಳೂರು ನಗರ, ಯತೀಶ್ ಚಂದ್ರ ಜಿ.ಹೆಚ್– ಎಸ್.ಪಿ– ಆಂತರಿಕ ಭದ್ರತಾ ವಿಭಾಗ, ಡಾ.ಭೀಮಾಶಂಕರ ಗುಳೇದ್–ಎಸ್‌ಪಿ, ಬೆಳಗಾವಿ, ನಿಕಂ ಪ್ರಕಾಶ್ ಅಮ್ರಿತ್–ಎಸ್ಪಿ, ವೈರ್‌ಲೆಸ್, ರಾಹುಲ್ ಕುಮಾರ್ ಶಹಾಪುರವಾಡ್– ಡಿಸಿಪಿ, ಬೆಂಗಳೂರು ದಕ್ಷಿಣ ವಿಭಾಗ, ಡಿ.ದೇವರಾಜ್–ಡಿಸಿಪಿ ಬೆಂಗಳೂರು ಪೂರ್ವ ವಿಭಾಗ, ಅಬ್ದುಲ್ ಅಹಾದ್– ಡಿಸಿಪಿ ಬೆಂಗಳೂರು ಕೇಂದ್ರ ವಿಭಾಗ, ಎಸ್.ಗಿರೀಶ್– ಡಿಸಿಪಿ ಬೆಂಗಳೂರು ಪಶ್ಚಿಮ ವಿಭಾಗ, ಸಂಜೀವ್ ಎಂ.ಪಾಟೀಲ್– ಡಿಸಿಪಿ, ವೈಟ್ ಫೀಲ್ಡ್ ವಿಭಾಗ, ಕೆ.ಪರಶುರಾಮ್– ಎಸ್.ಪಿ. ಇಂಟಲಿಜೆನ್ಸ್, ಹೆಚ್.ಡಿ ಆನಂದ್ ಕುಮಾರ್– ಎಸ್.ಪಿ, ನಾಗರಿಕ ಹಕ್ಕುಗಳು ಮತ್ತು ಜಾರಿ ನಿರ್ದೇಶನಾಲಯ, ಡಾ.ಸುಮನ್ ಡಿ. ಪೆನ್ನೇಕರ್– ಎಐಜಿಪಿ, ಹೆಡ್ ಕ್ವಾರ್ಟ್ರರ್ಸ್–1, ಡೆಕಾ ಕಿಶೋರ್ ಬಾಬು– ಎಸ್ಪಿ & ಪ್ರಿನ್ಸಿಪಲ್, ಪೊಲೀಸ್ ತರಬೇತಿ ಕೇಂದ್ರ ಕಲಬುರಗಿ, ಡಾ.ಕೋನಾ ವಂಶಿಕೃಷ್ಣ – ಡಿಸಿಪಿ, ಕಮಾಂಡ್ ಸೆಂಟರ್, ಬೆಂಗಳೂರು, ಲಕ್ಷ್ಮಣ್ ನಿಂಬರಗಿ– ಎಸ್ಪಿ, ರಾಜ್ಯ ಅಪರಾಧ ದಾಖಲೆಗಳ ಘಟಕ, ಡಾ.ಅರುಣ್.ಕೆ– ಎಸ್ಪಿ, ಉಡುಪಿ, ಮಹಮ್ಮದ್ ಸುಜೀತಾ.ಎಂ.ಎಸ್– ಎಸ್ಪಿ ಹಾಸನ, ಜಯಪ್ರಕಾಶ್– ಎಸ್ಪಿ ಇಂಟಲಿಜೆನ್ಸ್, ಶೇಖರ್.ಹೆಚ್. ತೆಕ್ಕಣ್ಣವರ್– ಡಿಸಿಪಿ, ಸಿಸಿಬಿ ಬೆಂಗಳೂರು, ಸಾರಾ ಫಾತೀಮಾ– ಡಿಸಿಪಿ, ಬೆಂಗಳೂರು ಸಂಚಾರ ಪಶ್ಚಿಮ ವಿಭಾಗ, ಸೋನಾವಾನೆ ರಿಷಿಕೇಶ್ ಭಗವಾನ್– ಎಸ್.ಪಿ ವಿಜಯಪುರ, ಲೋಕೇಶ್ ಭರಮಪ್ಪ ಜಗಲ್ಸರ್– ಎಸ್ಪಿ, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು. ಆರ್.ಶ್ರೀನಿವಾಸ್‌ಗೌಡ– ಡಿಸಿಪಿ–2, ಸಿಸಿಬಿ ಬೆಂಗಳೂರು, ಪಿ.ಕೃಷ್ಣಕಾಂತ್– ಎಐಜಿಪಿ (ಆಡಳಿತ). ಅಮರನಾಥ್ ರೆಡ್ಡಿ.ವೈ–ಎಸ್ಪಿ ಬಾಗಲಕೋಟೆ, ಹರಿರಾಮ್ ಶಂಕರ್– ಎಸ್ಪಿ, ಇಂಟೆಲಿಜೆನ್ಸ್, ಅದ್ದೂರು ಶ್ರೀನಿವಾಸುಲು– ಎಸ್ಪಿ ಕಲಬುರಗಿ, ಅನ್ಷು ಕುಮಾರ್–ಎಸ್ಪಿ, ಕೋಸ್ಟಲ್ ಸೆಕ್ಯುರಿಟಿ ಪೊಲೀಸ್, ಉಡುಪಿ, ಕನ್ನಿಕಾ ಸಿಕ್ರಿವಾಲ್ – ಡಿಸಿಪಿ, ಕಾನೂನು ಸುವ್ಯವಸ್ಥೆ, ಕಲಬುರಗಿ, ಕುಶಾಲ್ ಚೌಕ್ಸಿ – ಜಂಟಿ ನಿರ್ದೇಶಕರು, ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು, ರವೀಂದ್ರ ಕಾಶಿನಾಥ್ ಗಡದಿ–ಎಸ್.ಪಿ ಇಂಟಲಿಜೆನ್ಸ್.

ಪರಹಿತ ಬಯಸಿ ಮಾಡುವ ಪ್ರಾರ್ಥನೆ ಫಲದಾಯಕ



ಸುತ್ತೂರು, ಸೆ. 5– ಪರಹಿತವನ್ನು ಬಯಸಿ ಮಾಡುವ ಪ್ರಾರ್ಥನೆಯ ಫಲ ವಿಫುಲವಾದುದು ಎಂದು ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಾದ ಡಿ.ಎಂ. ಸಿದ್ಧಲಿಂಗಸ್ವಾಮಿಯವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸದ 19ನೇ ದಿನದ ಪ್ರವಚನ ನೀಡುತ್ತಾ ತಿಳಿಸಿದರು. ಪ್ರಾರ್ಥನೆ ನಮ್ಮ ಪಾಲಿಗೆ ಆತ್ಮನಿವೇದನೆಯ ರೂಪದಲ್ಲಿ ಒದಗಿಬರುವಂತದ್ದು. ಯಾರೊಂದಿಗೂ ಹೇಳಿಕೊಳ್ಳಲಾಗದ ಮಾತುಗಳನ್ನು ದೇವರಲ್ಲಿ ಹೇಳಿಕೊಳ್ಳುವುದು ಪ್ರಾರ್ಥನೆಯಿಂದ ಸಾಧ್ಯವಾಗುತ್ತದೆ. 'ಸಂಕಟಗಳನ್ನು ಪರಿಹರಿಸು, ಬದುಕನ್ನು ಸುಗಮಗೊಳಿಸು' ಎನ್ನುವುದು ಬಹುತೇಕ ಪ್ರಾರ್ಥನೆಗಳ ಉದ್ದೇಶ. ಇತ್ತೀಚಿನ ದಿನಮಾನಗಳಲ್ಲಿ ಪ್ರಾರ್ಥನೆಗೆ ಮಾನಸಿಕ ಉದ್ವೇಗವನ್ನು ಶಮನಗೊಳಿಸುವ ಮದ್ದಿನ ಆಯಾಮವೂ ಬಂದಿದೆ. ಮಾನಸಿಕ ನೆಮ್ಮದಿಯನ್ನು ಗಳಿಸುವುದು, ಸಾಮಾಜಿಕ ನೆಮ್ಮದಿಗೂ ಪೂರಕ. ವ್ಯಕ್ತಿ ಮಾನಸಿಕವಾಗಿ ಆರೋಗ್ಯವಾಗಿದ್ದಾಗ ಆತ ಮಾಡುವ ಕೆಲಸದಲ್ಲೂ ಯಶಸ್ಸು ಕಾಣಲು ಸಾಧ್ಯ. ಪರಹಿತವನ್ನೇ ಕೇಂದ್ರವನ್ನಾಗಿಸಿಕೊಂಡು ಪ್ರಾರ್ಥಿಸುವುದು ನಮಗೆ ಸಾಧ್ಯವಾಗುತ್ತಿಲ್ಲ. 'ಸಬ್‌ಕೋ ಸನ್ಮತಿ ದೇ ಭಗವಾನ್' ಮಹಾತ್ಮರ ಪ್ರಾರ್ಥನೆಯಲ್ಲಿ ಲೋಕ ಕಲ್ಯಾಣದ ಹಿತ ಅಡಗಿದೆ. ನಿಸ್ವಾರ್ಥ ಮನೋಭಾವ ನಮಗೆ ಸಾಧ್ಯವಾಗಬೇಕಾದ ಅವಶ್ಯಕತೆ ಎಂದು ನುಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮಾನವ–ವನ್ಯಜೀವಿ ಸಂಘರ್ಷದಲ್ಲಿ 15 ದಿನದಲ್ಲಿ 11 ಮಂದಿ ಬಲಿ

● ಕಾಡಿನಿಂದ ನಾಡಿಗೆ ಬರುವ ಆನೆ ತಡೆಗೆ ರೈಲ್ವೆ ಕಂಬಿ ತಡೆಗೋಡೆ ನಿರ್ಮಾಣ; 500 ಕೋಟಿ ಅನುದಾನಕ್ಕೆ ಸಿಎಂಗೆ ಮನವಿ ● ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ; ಹಿರಿಯ ಅಧಿಕಾರಿಗಳೊಂದಿಗೆ ಈ ಸಂಬಂಧ ಮಹತ್ವದ ಸಭೆ



ಬೆಂಗಳೂರು, ಸೆ.5(ಕೆಎಂಶಿ)– ಕಳೆದ 15 ದಿನಗಳ ಅಂತರದಲ್ಲಿ ಮಾನವ–ವನ್ಯಜೀವಿ ಸಂಘರ್ಷದಲ್ಲಿ 11 ಜನರು ಸಾವಿಗೀಡಾಗಿದ್ದು, ಅಮೂಲ್ಯ ಜೀವ ಹಾನಿ ತಪ್ಪಿಸಲು ಅಗತ್ಯ ಮತ್ತು ತುರ್ತು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದೆ. ಆನೆಗಳು ನಾಡಿಗೆ ಬಾರದಂತೆ ತಡೆಯಲು ರೈಲ್ವೆ ಕಂಬಿ ಬ್ಯಾರಿಕೇಡ್ ನಿರ್ಮಾಣಕ್ಕಾಗಿ ಮುಖ್ಯಮಂತ್ರಿಗಳಿಗೆ 500 ಕೋಟಿ ರೂ. ಅನುದಾನ ನೀಡುವಂತೆ ಮನವಿ ಮಾಡಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಬಿ. ಖಂಡ್ರೆ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯ ಅರಣ್ಯ ಘಟಕದ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆಯ ಬಳಿಕ ಮಾನವ ಮತ್ತು ವನ್ಯಜೀವಿ ಸಂಘರ್ಷ ಇಂದು ನಿನ್ನೆಯದ್ದೇನಲ್ಲ. ಹಿಂದಿನಿಂದ ನಡೆಯುತ್ತಿದೆ. ಆದರೆ, ಅರಣ್ಯ ಪ್ರದೇಶ ಕಡಿಮೆ ಆಗುತ್ತಿದ್ದು, ಕಾಡುಪ್ರಾಣಿಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಸಂಘರ್ಷಗಳು ಹೆಚ್ಚಾಗುತ್ತಿವೆ ಎಂದರು.

ಈ ಬಾರಿ ವಾಡಿಕೆಗಿಂತ ಬಹಳ ಕಡಿಮೆ ಮಳೆ ಆಗಿದ್ದು, ಕಾಡಿನಲ್ಲಿ ಕುಡಿಯುವ ನೀರು ಮತ್ತು ಆಹಾರದ ಸಮಸ್ಯೆಯಿಂದಾಗಿ ಕಾಡುಪ್ರಾಣಿಗಳು ನಾಡಿಗೆ ಬರುತ್ತಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದು, ಈ ಹಿನ್ನೆಲೆಯಲ್ಲಿ ಅರಣ್ಯದೊಳಗೆ ವನ್ಯಜೀವಿಗಳಿಗೆ ಸೂಕ್ತ ಆಹಾರ ದೊರಕುವಂತೆ ಮಾಡುವ ಮಾರ್ಗೋಪಾಯಗಳ ಬಗ್ಗೆ ಚರ್ಚಿಸಲಾಗಿದೆ. ಆನೆ ಕಾರಿಡಾರ್‌ಗಳಲ್ಲಿ ರಸ್ತೆ, ರೈಲು, ವಿದ್ಯುತ್ ಕಂಬ, ನೀರಿನ ಕೊಳವೆ ಅಳವಡಿಕೆಗಾಗಿ ಕೆಲವು ಭಾಗ ಬಳಕೆಯಾಗಿದೆ, ಖಾಸಗಿಯವರಿಂದ ಭೂಮಿ ಒತ್ತುವರಿಯಾಗಿದ್ದರೆ ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಿ, ಆನೆ ಕಾರಿಡಾರ್ ಪ್ರದೇಶ ರಕ್ಷಿಸಲಾಗುವುದು. ಅರಣ್ಯದೊಳಗೆ ಹಾಗೂ ಅರಣ್ಯದಂಚಿನಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಕಂಡುಬಂದರೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು, ಅರಣ್ಯಾಧಿಕಾರಿಗಳ ಲೋಪ ಕಂಡುಬಂದರೆ ಅವರ ವಿರುದ್ಧವೂ ಕ್ರಮ ಜರುಗಿಸಲಾಗುವುದು ಎಂದರು.

ರಾಜ್ಯದಲ್ಲಿ ಆನೆಗಳ ದಾಳಿಯಿಂದಲೇ ಅಧಿಕ ಸಾವು ಸಂಭವಿಸುತ್ತಿದೆ, ಕಳೆದ ಐದೂವರೆ ವರ್ಷಗಳಲ್ಲಿ 148 ಜನರು ಕಾಡಾನೆ ದಾಳಿಯಿಂದ ಮೃತಪಟ್ಟಿದ್ದಾರೆ, 2018–19ರಲ್ಲಿ 13 ಜನರು ಆನೆ ದಾಳಿಯಿಂದ ಮೃತಪಟ್ಟಿದ್ದರೆ, 2019–20ರಲ್ಲಿ 30, 2020–21ರಲ್ಲಿ 26, 2021–22ರಲ್ಲಿ 28, 2022–23ರಲ್ಲಿ 30 ಹಾಗೂ 3.09.2023 ರವರೆಗೆ 21 ಅಮೂಲ್ಯ ಜೀವ ಹಾನಿ ಆಗಿದೆ ಎಂದು ವಿವರ ನೀಡಿದರು.

ಆನೆ ಕಾರ್ಯಾಚರಣೆ ವೇಳೆ ಶಾರ್ಪ್ ಶೂಟರ್ ವೆಂಕಟೇಶ್ ಸೇರಿದಂತೆ ಇಬ್ಬರು ಹೊರಗುತ್ತಿಗೆ ಸಿಬ್ಬಂದಿ ಮೃತಪಟ್ಟಿದ್ದಾರೆ, ಅವರ ಕುಟುಂಬಕ್ಕೆ ತಲಾ 15 ಲಕ್ಷ ರೂ. ಪರಿಹಾರ ನೀಡಲಾಗುತ್ತಿದೆ. ಇದರೊಂದಿಗೆ 4 ವರ್ಷ ಮಾಸಿಕ 4 ಸಾವಿರ ರೂ. ಪಿಂಚಣಿಯನ್ನೂ ನೀಡಲಾಗುತ್ತಿದೆ. ಪರಿಹಾರ ಹಣದಿಂದ ಜೀವ ಮರಳಿಸಲು ಸಾಧ್ಯವಿಲ್ಲ. ಮೃತರ ಕುಟುಂಬಕ್ಕೆ ಆಸರೆ ಆಗುತ್ತದೆ.



ಆನೆಗಳು ನಾಡಿಗೆ ದಾಳಿ ಇಟ್ಟಾಗ ಅರಣ್ಯ ಇಲಾಖೆಯವರು ಸಾಮಾಜಿಕ ತಾಣಗಳು ಹಾಗೂ ಮಾಧ್ಯಮಗಳ ಮೂಲಕ ಜನರಿಗೆ ಜಾಗೃತಿ ಮೂಡಿಸುತ್ತಾರೆ, ಆದರೂ ಕೆಲವರು ಮನೆಯಿಂದ ಹೊರಬಂದು ಜೀವ ಕಳೆದುಕೊಂಡಿದ್ದಾರೆ.

ಆನೆಗಳ ಸಂಚಾರದ ಬಗ್ಗೆ ಮಾಹಿತಿ ಇದ್ದಾಗ, ಯಾರೂ ಕಾಡಿನಂಚಿಗೆ, ತೋಟಗಳಿಗೆ ಹೋಗಬಾರದು ಎಂದು ಮನವಿ ಮಾಡಿದರು. ಕರ್ನಾಟಕದಲ್ಲಿ ಅತೀ ಹೆಚ್ಚು ಅಂದರೆ 6395 ಆನೆಗಳಿವೆ, ಆದರೆ ಅರಣ್ಯ ಇಲಾಖೆ ರೈಲ್ವೆ ಬ್ಯಾರಿಕೇಡ್, ಕಂದಕ ನಿರ್ಮಾಣ ಮತ್ತು ಸೌರ ವಿದ್ಯುತ್ ಬೇಲಿ ಹಾಕುತ್ತಿರುವ ಹಿನ್ನೆಲೆಯಲ್ಲಿ ಹಾಗೂ 7 ಆನೆ ಕಾರ್ಯಾಚರಣೆ ಪಡೆಗಳು, ನಾಡಿಗೆ ಬಂದ ಆನೆಗಳನ್ನು ರಾಜ್ಯದಲ್ಲಿ ಆನೆ ಹಾವಳಿ ತಪ್ಪಿಸಲು ಸುಮಾರು 640 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಿಸುವ ಅಗತ್ಯವಿದೆ. ಈವರೆಗೆ 312 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದೆ. ಪ್ರತಿ ಕಿಲೋ ಮೀಟರ್ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಸುಮಾರು 1.50 ಕೋಟಿ ವೆಚ್ಚ ಆಗುತ್ತದೆ.

ಹುಲಿ ಸೆರೆಗೆ ಕಾರ್ಯಾಚರಣೆ: ನಾಗರಹೊಳೆ ವಲಯದ ಹೆಗ್ಗಡದೇವನಕೋಟೆ ಬಳಿ 7 ವರ್ಷದ ಬಾಲಕ ಚರಣ್ ನಾಯಕ್ ಹುಲಿ ದಾಳಿಗೆ ಬಲಿಯಾಗಿದ್ದು, ಹಿರಿಯ ಐ.ಎಫ್.ಎಸ್ ಅಧಿಕಾರಿ ಕುಮಾರ್ ಪುಷ್ಕರ್ ಅವರನ್ನು ಸ್ಥಳಕ್ಕೆ ಕಳಹಿಸಿದ್ದು, ಹುಲಿ ಸೆರೆಗೆ ಕಾರ್ಯಾಚರಣೆ ಆರಂಭವಾಗಿದೆ ಎಂದರು.

ಮೂಲ ಸೌಲಭ್ಯದೊಂದಿಗೆ ಅಭಿವೃದ್ಧಿಗೊಂಡಿರುವ

ಮೈಸೂರಿನ 3 ರೈಲ್ವೇ ಯೋಜನೆಗಳು ಶೀಘ್ರ ಉದ್ಘಾಟನೆ

ಸಂಸದ ಪ್ರತಾಪ್ ಸಿಂಹರಿಂದ 'ಗತಿ ಶಕ್ತಿ' ಯೋಜನೆಯಡಿಯ ಕಾಮಗಾರಿಗಳ ಪ್ರಗತಿ ಪರಿಶೀಲನೆ

ಮೈಸೂರು, ಸೆ.5 (ಆರ್‌ಕೆ)– ಕಡಕೊಳ ಬಳಿಯ ಇನ್‌ಲ್ಯಾಂಡ್ ಕಂಟೇನರ್ ಡಿಪೋ, ಅಶೋಕಪುರಂ ರೈಲ್ವೇ ನಿಲ್ದಾಣ ಹಾಗೂ ಬೆಳಗೊಳ ರೈಲ್ವೇ ನಿಲ್ದಾಣದ ಎರಡು ಹೆಚ್ಚುವರಿ ಪಿಟ್‌ಲೈನ್ ಯೋಜನೆಗಳನ್ನು ತಿಂಗಳಾಂತ್ಯದಲ್ಲಿ ಉದ್ಘಾಟಿಸಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ 'ಗತಿ ಶಕ್ತಿ' ಯೋಜನೆಯಡಿ ರೈಲ್ವೇ ಇಲಾಖೆ ಕೈಗೊಂಡಿರುವ ಕಾಮಗಾರಿಗಳ ಕುರಿತಂತೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಈಗಾಗಲೇ ಅಂತಿಮ ಹಂತ ತಲುಪಿರುವ ಮೈಸೂರಿನ ಅಶೋಕಪುರಂ ರೈಲು ನಿಲ್ದಾಣ, ಕಡಕೊಳ ಬಳಿಯ ಇನ್‌ಲ್ಯಾಂಡ್ ಕಂಟೇನರ್ ಡಿಪೋ ಹಾಗೂ ಬೆಳಗೊಳ ರೈಲು ನಿಲ್ದಾಣದಲ್ಲಿ ನಿರ್ಮಿಸಿರುವ ಹೆಚ್ಚುವರಿ ಪಿಟ್‌ಲೈನ್‌ಗಳನ್ನು ಒಂದೇ ದಿನ ಉದ್ಘಾಟಿಸಲು ಸಿದ್ಧತೆ ಮಾಡುತ್ತಿದ್ದೇವೆ ಎಂದರು.

ಮೈಸೂರು ಭಾಗದಲ್ಲಿ ಉತ್ಪಾದನೆಯಾದ ಕೈಗಾರಿಕಾ ವಸ್ತುಗಳನ್ನು ರಫ್ತು ಮಾಡಲು ಐಸಿಡಿ ಉಪಯೋಗವಾಗಲಿದ್ದು, ಇದಕ್ಕೆ ಅನುಕೂಲವಾಗುವಂತೆ ಅಶೋಕಪುರಂ ರೈಲು ನಿಲ್ದಾಣ ವಿಸ್ತರಿಸಿ, ಮೂಲಸೌಕರ್ಯ ಒದಗಿಸಿರುವುದರಿಂದ ಪ್ರಯಾಣಿಕರಿಗೆ ಅನುಕೂಲವಾಗಿದೆ. ಪ್ಲಾಟ್‌ಫಾರಂಗಳು, ಫುಟ್‌ಓವರ್ ಬ್ರಿಡ್ಜ್‌ಗಳು ಮತ್ತಷ್ಟು ಸಹಕಾರಿಯಾಗಿವೆ ಎಂದು ಅವರು ತಿಳಿಸಿದರು.



ಇದರಿಂದಾಗಿ ಮೈಸೂರಿನ ಮುಖ್ಯ ರೈಲ್ವೇ ಸ್ಟೇಷನ್ ಮೇಲಿರುವ ಒತ್ತಡ ಕಡಿಮೆಯಾಗುವ ಜೊತೆಗೆ ಜಯನಗರ, ಜೆಪಿನಗರ, ವಿದ್ಯಾರಣ್ಯಪುರಂ ಭಾಗಗಳ ಜನರಿಗೆ ವರದಾನವಾಗಲಿದೆ. ಅಲ್ಲದೇ, ನಂಜನಗೂಡು, ಚಾಮರಾಜನಗರ ಕಡೆಗೆ ಹೋಗಿ ಬರುವವರಿಗೂ ಅಶೋಕಪುರಂ ಸ್ಟೇಷನ್‌ನಿಂದ ಅನುಕೂಲವಾಗಲಿದೆ ಎಂದರು.

ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ಕಡಕೊಳ ಸಮೀಪ ನಿರ್ಮಿಸುತ್ತಿರುವ ಇನ್‌ಲ್ಯಾಂಡ್ ಕಂಟೇನರ್ ಡಿಪೋ ಸಿವಿಲ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಸೆ.15ರ ನಂತರ ಉದ್ಘಾಟನೆಗೆ ಸಿದ್ಧವಾಗುತ್ತದೆ. ಬೆಳಗೊಳ ರೈಲು ನಿಲ್ದಾಣದ 2 ಹೆಚ್ಚುವರಿ ಪಿಟ್‌ಲೈನ್ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಈ ಎಲ್ಲಾ ಯೋಜನೆಗಳನ್ನು ದಸರಾ ಒಳಗಾಗಿ ಉದ್ಘಾಟಿಸಲಾಗುವುದು ಎಂದರು. ಮೈಸೂರು ರೈಲ್ವೇ ಸ್ಟೇಷನ್ ಯಾರ್ಡ್ ರೀ ಮಾಡೆಲಿಂಗ್, ವಿಸ್ತರಣೆ ಯೋಜನೆಗಾಗಿ 346 ಕೋಟಿ ರೂ. ಅನುಮೋದನೆಯಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ರೈಲ್ವೇ ಕ್ವಾಟ್ರರ್ಸ್ ನಿರ್ಮಾಣ ಇನ್ನಿತರ ಯೋಜನೆಗೂ ಶೀಘ್ರ ಚಾಲನೆ ನೀಡಲಾಗುವುದು ಎಂದು ಪ್ರತಾಪ್ ಸಿಂಹ ತಿಳಿಸಿದರು. ಸೀನಿಯರ್ ಡಿವಿಷನಲ್ ಇಂಜಿನಿಯರ್ ರವಿಚಂದ್ರನ್ (ಕೋ–ಆರ್ಡಿನೇಷನ್), ಗಟಿ ಶಕ್ತಿ ಯೂನಿಟ್ ಮುಖ್ಯಸ್ಥ ಟಿ.ವಿ. ಭೂಷಣ್ ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಸೆ.17, ಕೊಡವ ಸಮಾಜದಿಂದ ಕೈಲ್ ಪೊಳ್ದ್ ಆಚರಣೆ

ಮೈಸೂರು,ಸೆ.5(ಪಿಎಂ)– ಕೊಡವ ಸಮಾಜದ ವತಿಯಿಂದ ಸೆ.17ರಂದು ಮೈಸೂರಿನ ವಿಜಯನಗರ ಒಂದನೇ ಹಂತದಲ್ಲಿರುವ ಸಮಾಜದ ಭವನದಲ್ಲಿ ಕೈಲ್ ಪೊಳ್ದ್ ಹಬ್ಬ (ವಾರ್ಷಿಕ ಕೂಟ) ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿದ್ದು, ಆಯುಧ ಪೂಜೆ, ಕ್ರೀಡೆ, ಆಟೋಟ ಹಾಗೂ ಲಕ್ಕಿ ಡಿಪ್ ಸೇರಿದಂತೆ ಮೊದಲಾದ ಕಾರ್ಯಕ್ರಮಗಳು ನಡೆಯಲಿವೆ. ವಿವಿಧ ಕ್ಷೇತ್ರಗಳ ಸಾಧಕ ಕೊಡವರಿಗೆ ಸನ್ಮಾನ ಹಾಗೂ ವಿದ್ಯಾರ್ಥಿವೇತನ ವಿತರಣೆ ಕಾರ್ಯಕ್ರಮವೂ ಇರಲಿದೆ.

ಊಟದ ವ್ಯವಸ್ಥೆಗಾಗಿ ಕಾರ್ಡ್‌ಗಳ ವ್ಯವಸ್ಥೆ ಇದ್ದು, ವಯಸ್ಕರಿಗೆ 200 ರೂ. ಹಾಗೂ 6ರಿಂದ 12 ವರ್ಷದೊಳಗಿನ ಮಕ್ಕಳಿಗೆ 100 ರೂ.ಗಳ ಕಾರ್ಡ್ ವ್ಯವಸ್ಥೆ ಇದೆ (6 ವರ್ಷದೊಳಗಿನ ಮಕ್ಕಳಿಗೆ ಉಚಿತ). ಮುಂಗಡವಾಗಿ ಕಾರ್ಡ್ ಖರೀದಿಸಿದರೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲು ಅನುಕೂಲವಾಗಲಿದೆ. ಸ್ಥಳದಲ್ಲಿ ಕಾರ್ಡ್ ಖರೀದಿಗೆ ಅವಕಾಶವಿದ್ದು, ಅಂದು ವಯಸ್ಕರ ಕಾರ್ಡ್‌ಗೆ 250 ಹಾಗೂ 6ರಿಂದ 12 ವರ್ಷದೊಳಗಿನ ಮಕ್ಕಳ ಕಾರ್ಡ್‌ಗೆ 120 ರೂ. ಆಗಲಿದೆ.

ಸಾಧಕರಿಗೆ ಸನ್ಮಾನ, ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ 42 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುವುದು. ಕೊಡವ ಸಮಾಜದ (ಸಂಘಟನೆ) ಸದಸ್ಯರ ಮಕ್ಕಳಾಗಿದ್ದಲ್ಲಿ ಮೈಸೂರು ಹೊರತಾಗಿ ವಿದ್ಯಾಭ್ಯಾಸ ನಡೆಸಿದ್ದರೂ ವಿದ್ಯಾರ್ಥಿವೇತನಕ್ಕೆ ಅರ್ಹರಾಗಲಿದ್ದಾರೆ. ಉಳಿದಂತೆ ಮೈಸೂರಿನಲ್ಲಿ ಓದಿದ ಕೊಡವ ಸಮುದಾಯದ ವಿದ್ಯಾರ್ಥಿಗಳು ಮಾತ್ರ ಅರ್ಹರಾಗಲಿದ್ದಾರೆ.

ವಿದ್ಯಾರ್ಥಿವೇತನದ ವಿವರಗಳು: 7ನೇ ತರಗತಿಯ ಅಂತಿಮ ಪರೀಕ್ಷೆ ಸೇರಿದಂತೆ ವಿವಿಧ ತರಗತಿ, ಕೋರ್ಸ್‌ಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದವರು ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದು. ಎಸ್‌ಎಸ್‌ಎಲ್‌ಸಿ, ಎಸ್‌ಎಸ್‌ಎಲ್‌ಸಿ (ಇಂಗ್ಲಿಷ್), ಎಸ್‌ಎಸ್‌ಎಲ್‌ಸಿ (ಸಿಬಿಎಸ್‌ಇ), ಎಸ್‌ಎಸ್‌ಎಲ್‌ಸಿ (ಆರ್ಥಿಕ ದುರ್ಬಲ ವರ್ಗ), ಪಿಯುಸಿ, ಬಿಎ, ಬಿಕಾಂ, ಬಿಎಸ್‌ಸಿ (ಕಂಪ್ಯೂಟರ್ ಸೈನ್ಸ್ ಮತ್ತು ಮ್ಯಾಥ್ಸ್), ಬಿಬಿಎಂ, ಎಂಬಿಎ, ಕಾನೂನು ಪದವಿ, ಎಂಎ, ಎಂ.ಕಾಂ, ಎಂಎಸ್ಸಿ (ಪಿಇಎಂ, ಸಿಬಿಝಡ್), ಬಿಇ, ಬಿಇ (ಮೆಕ್ಯಾನಿಕಲ್), ಬಿಇ (ವಾಸ್ತುಶಿಲ್ಪ), ಬಿಇ (ಕಂಪ್ಯೂಟರ್ ಸೈನ್ಸ್), ಬಿಡಿಎಸ್, ಎಂಬಿಬಿಎಸ್, ಬಿಎಸ್‌ಸಿ, ಎಂಎಸ್‌ಸಿ (ಕೃಷಿ) ಅರ್ಜಿ ಸಲ್ಲಿಸಬಹುದು.

ಅಲ್ಲದೆ, ವಾಣಿಜ್ಯದಲ್ಲಿ ಡಿಪ್ಲೊಮಾ (ಸೆಕ್ರೆಟರಿಯಲ್), ಐಸಿಎಸ್‌ಇ ಮತ್ತು ಐಸಿಎಸ್‌ಇಐ ಒಳಗೊಂಡಂತೆ ಪ್ರಥಮ ಮತ್ತು ದ್ವಿತೀಯ ಪಿಯುಸಿಯಲ್ಲಿ ಕ್ರೀಡಾ ಸಾಧನೆ, ಎಸ್‌ಎಸ್‌ಎಲ್‌ಸಿ ವಿಜ್ಞಾನದಲ್ಲಿ ಅತ್ಯಧಿಕ ಅಂಕ ಗಳಿಕೆ, ಮೆಡಿಸನ್ ಎಂಡಿ ಅಥವಾ ಎಂಎಸ್‌ನಲ್ಲಿ ರಾಜ್ಯ ಮಟ್ಟದ ಕ್ರೀಡಾ ಸಾಧನೆಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. ವಿದ್ಯಾರ್ಥಿವೇತನ ಹಾಗೂ ವಿವಿಧ ಕ್ಷೇತ್ರಗಳ ಸಾಧನೆಯ ಸನ್ಮಾನಕ್ಕಾಗಿ ಆಸಕ್ತರು ಸೆ.11ರ ಸಂಜೆ 5ರೊಳಗೆ ಕಾರ್ಯದರ್ಶಿಗಳು, ಕೊಡವ ಸಮಾಜ, ಮೈಸೂರು ಇವರಿಗೆ ಅರ್ಜಿಗಳನ್ನು ಸಲ್ಲಿಸಬಹುದು. ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸುವವರು ಕುಟುಂಬದ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸಬೇಕು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಶಾಸಕ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ಪಾಲ್ಗೊಳ್ಳಲಿದ್ದಾರೆ. ಕೊಡವ ಸಮಾಜದ ಅಧ್ಯಕ್ಷ ಮೇಚಂಡ ಎಂ.ಶಶಿ ಪೊನ್ನಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕಿರಣ್ ಕೌಶಿಕ್ 'ಯಾಕೆ?' ಕಾದಂಬರಿ ಬಿಡುಗಡೆ



ಮೈಸೂರು, ಸೆ.5(ಎಸ್‌ಪಿಎನ್)– ಯುವ ಲೇಖಕ ಕಿರಣ್ ಪಿ.ಕೌಶಿಕ ಹೊರ ತಂದಿರುವ 'ಯಾಕೆ?' ಕಾದಂಬರಿಯನ್ನು ರಾಮಕೃಷ್ಣ ವಿದ್ಯಾಶಾಲೆಯ ಸಂಚಾಲಕರಾದ ಶ್ರೀ ಯುಕ್ತೇಶಾನಂದ ಜೀ ಅವರು ಶಾಲಾ ಆವರಣದಲ್ಲಿ ಮಂಗಳವಾರ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಶ್ರೀಗಳು, ಯುವ ಬರಹಗಾರ ಕಿರಣ್ ಪಿ.ಕೌಶಿಕ್ ಅವರ 'ಯಾಕೆ?' ಕಾದಂಬರಿಯಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಯುವಕರು ನಮ್ಮತನವನ್ನು ಮರೆಯುತ್ತಿರುವುದರಿಂದ ಆಗುವಂತಹ ಪರಿಣಾಮಗಳ ಕುರಿತು ಅದ್ಭುತವಾಗಿ ಚಿತ್ರಿಸಿ, ಓದುಗರ ಅಭಿಪ್ರಾಯಕ್ಕೆ ಬಿಟ್ಟಿದ್ದಾರೆ ಎಂದರು.

ಯುವಕರು ತಮ್ಮ ಜೀವಿತಾವಧಿಯಲ್ಲಿ ಒಮ್ಮೆ ದೇಶಕ್ಕಾಗಿ ಕೊಡುಗೆ ನೀಡಬೇಕು. ದೇಶ ನಮಗೆ ಎಲ್ಲಾ ಸವಲತ್ತುಗಳನ್ನು ನೀಡಿ, ಉತ್ತಮ ಪ್ರಜೆಯಾಗಿ ರೂಪಿಸುತ್ತದೆ. ಇದರ ಋಣವನ್ನು ತೀರಿಸುವ ಪ್ರಯತ್ನ ಮಾಡಬೇಕು. ಯುವಕರಲ್ಲಿ ಬಹಳ ಬೇಗ ಸಾಧನೆ ಮಾಡಬೇಕು ಎಂಬ ಉತ್ಸಾಹವಿರುತ್ತದೆ. ಆದರೆ, ತಾಳ್ಮೆ ಇರುವುದಿಲ್ಲ. ಯಾವುದೇ ಸಾಧನೆ ಮಾಡಬೇಕು ಎಂದರೆ ತಾಳ್ಮೆ, ಕ್ಷೇತ್ರ ಅಧ್ಯಯನ, ಗ್ರಂಥ ಸಂಪಾದನೆ ಹಾಗೂ ಪುಸ್ತಕ ಅಧ್ಯಯನ ಬಹಳ ಮುಖ್ಯ ಎಂದು ಯುವ ಬರಹಗಾರರಿಗೆ ಸಲಹೆ ನೀಡಿದರಲ್ಲದೆ, ಕಿರಣ್ ಪಿ.ಕೌಶಿಕ್ ರಚಿಸಿದ 'ಯಾಕೆ?' ಉತ್ತಮ ಕಾದಂಬರಿಯಾಗಿದ್ದು, ಇದನ್ನು ಯುವಕರು ಓದಿ ಯುವ ಬರಹಗಾರರನ್ನು ಪ್ರೋತ್ಸಾಹಿಸುವಂತೆ ಮನವಿ ಮಾಡಿದರು.

ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ಬಡವರಿಗೆ ಹೃದಯ ಶಸ್ತ್ರಚಿಕಿತ್ಸೆ

ಫಿಲಿಪ್ಸ್ ಇಂಡಿಯಾ ನೆರವು, ಬೆಂಗಳೂರಿನ ಇಂದಿರಾನಗರ ರೋಟರಿ ಸಂಸ್ಥೆ ಸಹಯೋಗ



ಮೈಸೂರು, ಸೆ.5(ಬಿಎಲ್‌ಯು)– ಫಿಲಿಪ್ಸ್ ಇಂಡಿಯಾ ಹಾಗೂ ಬೆಂಗಳೂರಿನ ಇಂದಿರಾನಗರ ರೋಟರಿ ಸಂಸ್ಥೆಯ ಸಹಯೋಗದಲ್ಲಿ ಬಡವರಿಗೆ ರಿಯಾಯಿತಿ ದರದಲ್ಲಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ಯೋಜನೆ ಹಮ್ಮಿಕೊಂಡಿದ್ದು, ಈ ಸೇವೆಯನ್ನು ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲೂ ಆರಂಭಿಸಲಾಗಿದೆ.

ಯೋಜನೆಯ 2ನೇ ಹಂತದ ಕಾರ್ಯಕ್ರಮವನ್ನು ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಆರಂಭಿಸಿದ್ದು, ಆಸ್ಪತ್ರೆ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಬೆಂಗಳೂರಿನ ಇಂದಿರಾನಗರ ರೋಟರಿ ಸಂಸ್ಥೆಯ ಅಧ್ಯಕ್ಷ ಬಾಲಕೃಷ್ಣನ್ ನಾರಾಯಣನ್, ಮಾಜಿ ಅಧ್ಯಕ್ಷ ಪಿಯೂಷ್ ಜೈನ್, ಎಂ.ಜಗದೀಶ್, ಡಾ.ಎ.ವಿ.ಶ್ರೀಕಾಂತ್ ಉಪಸ್ಥಿತರಿದ್ದರು. ಒಪ್ಪಂದದಂತೆ ಈ ಆಸ್ಪತ್ರೆಯಲ್ಲಿ 70 ಹೃದಯ ಶಸ್ತ್ರಚಿಕಿತ್ಸೆ ನಡೆಸಲು ಉದ್ದೇಶಿಸಲಾಗಿದೆ. ಬಡತನ ರೇಖೆಗಿಂತ ಕೆಳಗಿರುವ(ಬಿಪಿಎಲ್) ರೋಗಿಗಳಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಲು ಈ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಈ ಒಪ್ಪಂದದಂತೆ 300 ಜನರಿಗೆ ಹೃದಯ ಶಸ್ತ್ರಚಿಕಿತ್ಸೆ ನಡೆಸಲು ಉದ್ದೇಶಿಸಲಾಗಿದೆ. ಈ ಯೋಜನೆಗಾಗಿ ಫಿಲಿಪ್ಸ್ ಇಂಡಿಯಾ ಮುಖೇನ ಬೆಂಗಳೂರಿನ ಇಂದಿರಾನಗರ ರೋಟರಿ ಸಂಸ್ಥೆಯು 1.05 ಕೋಟಿ ರೂ. ನೆರವು ನೀಡಲಿದೆ.

ಬೆಂಗಳೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಜುಲೈ 1ರಂದು ಈ ಯೋಜನೆ ಉದ್ಘಾಟಿಸಿದ್ದು, ಈವರೆಗೆ 43 ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗಿದೆ.



ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿರುವ ಹುಣಸೂರು ಪಟ್ಟಣದ ಬಾಲಕಿಯರ ಪಿಯು ಕಾಲೇಜಿನ ಜೀವ ವಿಜ್ಞಾನ ಉಪನ್ಯಾಸಕ ಹೆಚ್.ಎನ್.ಗಿರೀಶ್ ಗೌಡ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಗಳವಾರ ಬೆಂಗಳೂರಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು. ಶಿಕ್ಷಣ ಸಚಿವ ಮಧು ಬಂಗಾರಪ್ಪ, ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಮಿತೃತ್ವ, ಅಂತರಂಗ ಭಾವದಿಂದ ಪ್ರತಿಯೊಬ್ಬರ ಸ್ನೇಹ ಸಂಪಾದಿಸಿ

ಚಿಂತಕ ಡಾ.ಕೆ.ಎಸ್. ಮಲ್ಲೇಶ್ ಅಭಿಮತ



ಮೈಸೂರು,ಸೆ.5(ಎಸ್‌ಪಿಎನ್)– ಮಿತೃತ್ವ ಮತ್ತು ಅಂತರಂಗ ಭಾವದ ಮೂಲಕ ಜಗತ್ತಿನ ಪ್ರತಿಯೊಬ್ಬರ ಸ್ನೇಹ ಸಂಪಾದಿಸಲು ಸಾಧ್ಯ ಎಂಬ ಭಾವನೆ ಶರಣರ ಚಿಂತನೆಯಾಗಿತ್ತು ಎಂದು ಚಿಂತಕ ಡಾ.ಕೆ.ಎಸ್.ಮಲ್ಲೇಶ್ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ 4ನೇ ಹಂತದಲ್ಲಿರುವ ಎಲ್.ಬಿ.ಚನ್ನಬಸಪ್ಪ ಅವರ ಮನೆಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ವತಿಯಿಂದ ಮನೆಮನೆಗೆ ಶ್ರಾವಣ ಮಾಸದ ಶರಣ ಸಂದೇಶ ಮಾಲಿಕೆಯಲ್ಲಿ ಭಾಗವಹಿಸಿ ಮಾತನಾಡಿದರು. ಪುರಾಣಗಳು ಕಲ್ಪಿತವಾಗಿದ್ದರೂ ಅವುಗಳಲ್ಲಿ ಭವ ಬಂಧನದ ಜಂಗಮತ್ವವನ್ನು ಕಂಡವರು ಅಣ್ಣ ಬಸವಣ್ಣನವರು. ಒಂದು ಕ್ಷೇತ್ರದಲ್ಲಿ ಜ್ಞಾನ ಸಂಪಾದನೆ ಮತ್ತು ಸಾಧನೆ ಮಾಡುವ ಇಚ್ಛೆ ಅಂತರಂಗದಲ್ಲಿದ್ದರೆ, ತಮ್ಮ ಇಚ್ಛೆಯನ್ನು ಪೂರೈಸಿಕೊಳ್ಳಬಹುದು ಎಂಬ ನಂಬಿಕೆ ವಚನಕಾರರಲ್ಲಿತ್ತು ಎಂದು ತಿಳಿಸಿದರು.


ನಗರಾಧ್ಯಕ್ಷ ಮ.ಗು.ಸದಾನಂದಯ್ಯ ಮಾತನಾಡಿ, ಶಿವ ಮತ್ತು ದೇವರ ನಿರಾಕಾರದ ಸಂಬಂಧಗಳು ಶರಣರ ವಚನಗಳಲ್ಲಿವೆ. ಇಚ್ಛಾಶಕ್ತಿ, ಕ್ರಿಯಾಶಕ್ತಿ, ಚೈತನ್ಯಶಕ್ತಿ, ಜಂಗಮರೂಪಿಯಾಗಿ ಈ ಜಗತ್ತನ್ನು ಹಿತದಾಯಕ ಮಾಡಿಕೊಳ್ಳಲು ಸಾಧ್ಯವಿದೆ ಎಂಬ ಅಂಶಗಳು ವಚನಕಾರರ ಬರಹಗಳಲ್ಲಿ ಅಡಕವಾಗಿದೆ ಎಂದು ಕೆಲ ವಚನಗಳನ್ನು ಉಲ್ಲೇಖಿಸಿ ತಿಳಿಸಿದರು.

ಈ ವೇಳೆ ಶರಣಾದ ಹಿನಕಲ್ ಬಸವರಾಜು, ಸುಗುಣ, ಶುಭಮಣಿ, ಲಲಿತಾ ಪಾಟೀಲ್, ಚನ್ನಬಸಪ್ಪ, ಲೋಕೇಶ್, ನೀಲಾಂಬಿಕ, ಅಶೋಕ್, ಚಂದ್ರಶೇಖರ್, ಟಾರ್ಪಾಲಿನ್ ವೀರಭದ್ರಪ್ಪ ಉಪಸ್ಥಿತರಿದ್ದರು.

ಇಂಡಿಯಾಕ್ಕೆ 'ಭಾರತ' ಎಂದು ನಾಮಕರಣ ಮಾಡಲು ಯತ್ನ

ನೆಹರೂ ಬದಲಿಗೆ ಬೋಸ್‌ರನ್ನು ಮೊದಲ ಪ್ರಧಾನಿ ಎಂದು ಘೋಷಿಸಿ: ಪ್ರಧಾನಿ ಮೋದಿಗೆ ಸ್ವಾಮಿ ಆಗ್ರಹ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಇಂಡಿಯಾವನ್ನು 'ಭಾರತ' ಎಂದು ಮರುನಾಮಕರಣ ಮಾಡುವ ಹುನ್ನಾರದಲ್ಲಿದ್ದಾರೆ. ಹೀಗಾಗಿ ಜವಾಹರ್ ಲಾಲ್ ನೆಹರೂ ಅವರ ಬದಲಿಗೆ ಸ್ವಾತಂತ್ರ್ಯ ಸೇನಾನಿ ಸುಭಾಷ್ ಚಂದ್ರ ಬೋಸ್ ಅವರನ್ನು ಮೊದಲ ಪ್ರಧಾನಿ ಎಂದು ಘೋಷಿಸಿ ಎಂದು ಹಿರಿಯ ನಾಯಕ ಸುಬ್ರಮಣಿಯನ್ ಸ್ವಾಮಿ ಆಗ್ರಹಿಸಿದ್ದಾರೆ.



ಸುಭಾಷ್ ಚಂದ್ರ ಬೋಸ್ ಅವರನ್ನು 1943ರ ಭಾರತದ ಮೊದಲ ಪ್ರಧಾನಿ ಎಂದು ಘೋಷಿಸಬೇಕು. ಸುಭಾಷ್ ಚಂದ್ರ ಬೋಸ್ ಅವರು ಅಂದಿನ ಹೋರಾಟ ಕಠಿಣವಾಗಿತ್ತು. ಬ್ರಿಟಿಷ್ ಸಹಭಾಗಿತ್ವದಲ್ಲಿ ನೆಹರು ವಂಚನೆಯ ಮೂಲಕ ಪಡೆದುಕೊಂಡಿರುವಂಥದ್ದಲ್ಲ ಎಂದು ಹೇಳಿದ್ದಾರೆ.

ರಿಪಬ್ಲಿಕ್ ಆಫ್ ಇಂಡಿಯಾ ಬದಲಿಗೆ ರಿಪಬ್ಲಿಕ್ ಆಫ್ ಭಾರತ್ ಎಂದು ಮರುನಾಮಕರಣ ಮಾಡುವ ಕುರಿತು ಈಗ ದೇಶದಲ್ಲಿ ಚರ್ಚೆ ಶುರುವಾಗಿದೆ. ಇನ್ನು ಕೇಂದ್ರ ಸರ್ಕಾರ ಇದೇ ತಿಂಗಳು ಕರೆದಿರುವ ವಿಶೇಷ ಸಂಸತ್ ಅಧಿವೇಶನದಲ್ಲಿ ಸಂವಿಧಾನದಲ್ಲಿ ಬಳಸಲಾಗಿರುವ ಇಂಡಿಯಾ ಪದ ಬದಲಿಗೆ ಭಾರತ ಎಂದು ಸೇರಿಸುವ ಬಗ್ಗೆ ವಿಧೇಯಕವನ್ನು ಮಂಡಿಸಲಿದೆ ಎಂದು ಹೇಳಲಾಗುತ್ತಿದೆ. ಇಂಡಿಯಾ ಬದಲಿಗೆ ಭಾರತ್ ಎಂದು ಮರು ನಾಮಕರಣ ಮಾಡುತ್ತಿರುವ ಬಗ್ಗೆ ವಿಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿವೆ. ವಿಪಕ್ಷಗಳು ತಮ್ಮ ಕೂಟಕ್ಕೆ ಇಂಡಿಯಾ ಎಂದು ಹೆಸರಿಟ್ಟಿರುವುದಕ್ಕೆ ಹೆದರಿ ಕೇಂದ್ರ ಸರ್ಕಾರ ಇಂಡಿಯಾ ಬದಲಿಗೆ ಭಾರತ್ ಎಂದು ಮರುನಾಮಕರಣ ಮಾಡುತ್ತಿದೆ ಎಂದು ಆರೋಪಿಸುತ್ತಿವೆ.

ನಾನು ಸನಾತನ ಧರ್ಮಕ್ಕೆ ಹುಟ್ಟಿಲ್ಲ; ಅಪ್ಪ–ಅಮ್ಮನಿಗೆ ಹುಟ್ಟಿದ್ದೇನೆ



ಬೆಂಗಳೂರು: ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಅವರ ಸನಾತನ ಧರ್ಮ ನಿರ್ಮೂಲನೆ ಹೇಳಿಕೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿರುವ ಬೆನ್ನಲ್ಲೇ, 'ನಾನು ಸನಾತನ ಧರ್ಮಕ್ಕೆ ಹುಟ್ಟಿಲ್ಲ, ಅಪ್ಪ, ಅಮ್ಮನಿಗೆ ಹುಟ್ಟಿದ್ದೇನೆ' ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಹೇಳಿದ್ದಾರೆ. ನಗರದ ಟೌನ್‌ಹಾಲ್‌ನಲ್ಲಿ ನಡೆದ ಗೌರಿನೆನಪು ಕಾರ್ಯಕ್ರಮದಲ್ಲಿ ಮಾತನಾಡಿದ ನಟ, ನಾನು ಟ್ವಿಟರ್‌ನಲ್ಲಿ 'ಸನಾತನಿ ಸಂಸತ್' ಎಂದು ಪೋಸ್ಟ್ ಮಾಡಿದ್ದೆ ಅದಕ್ಕೆ 'ನಿನ್ನದು ಸನಾತನ ಧರ್ಮ ಅಲ್ವಾ' ಎಂದು ಒಬ್ಬ ಪ್ರಶ್ನೆ ಕೇಳಿದ. ಅದಕ್ಕೆ ನಾನು ಸನಾತನ ಧರ್ಮಕ್ಕೆ ಹುಟ್ಟಿಲ್ಲ. ನನ್ನ ಅಪ್ಪ–ಅಮ್ಮನಿಗೆ ಹುಟ್ಟಿದ್ದೇನೆ ಎಂದು ಉತ್ತರಿಸಿರುವುದಾಗಿ ಹೇಳಿದರು.

ನಾನು ಯಾವುದೇ ಧರ್ಮದ ವಿರುದ್ಧ ಇಲ್ಲ. ಆದರೆ, ಪ್ರಧಾನಿ ಮೋದಿ ವಿರುದ್ಧ ಇದ್ದೇನೆ. ಅವರು ಸಂಸತ್ ಭವನದ ಉದ್ಘಾಟನೆ ವೇಳೆ ಹೋಮ ಹವನ ಮಾಡಿಸಿದರು. ಅದು ನಮ್ಮ ಸಂಸತ್ ಭವನ. ಅದರಲ್ಲಿ ಹೋಮ ಹವನ ಮಾಡಬಾರದು. ಯಾವುದನ್ನೂ ನಮ್ಮ ಮೇಲೆ ಬಲವಂತವಾಗಿ ಹೇರಬಾರದು. ಆದರೆ, ಮೋದಿಯಿಂದ ಅದು ಆಗುತ್ತಿದೆ, ಅದಕ್ಕೆ ನನ್ನ ವಿರೋಧವಿದೆ ಎಂದು ಪ್ರಕಾಶ್ ರಾಜ್ ತಿಳಿಸಿದ್ದಾರೆ.

ಗೃಹಲಕ್ಷ್ಮಿಯ 2000 ರೂ. ಪಡೆಯಲು ಬ್ಯಾಂಕುಗಳಿಗೆ ಯಜಮಾನಿಯರ ಲಗ್ಗೆ





ಮೈಸೂರು,ಸೆ.5(ಆರ್‌ಕೆ)–ಪ್ರತೀ ತಿಂಗಳು ಮನೆ ಯಜಮಾನಿಗೆ 2,000 ರೂ. ನೀಡುವ 'ಗೃಹಲಕ್ಷ್ಮಿ' ಯೋಜನೆಗೆ ರಾಜ್ಯ ಸರ್ಕಾರ ಚಾಲನೆ ನೀಡುತ್ತಿದ್ದಂತೆಯೇ ಮಹಿಳೆಯರು ಹಣ ಡ್ರಾ ಮಾಡಲು ಬ್ಯಾಂಕ್ ಶಾಖೆಗಳಿಗೆ ಲಗ್ಗೆ ಇಟ್ಟಿದ್ದಾರೆ.

ಆಗಸ್ಟ್ 30ರಂದು ಮೈಸೂರಿನಲ್ಲಿ ಡಿಬಿಟಿ (ಡೈರೆಕ್ಟ್ ಬೆನಿಫಿಟ್ ಟ್ರಾನ್ಸ್‌ಫರ್) ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ 2,000 ರೂ. ಹಣ ಜಮೆ ಮಾಡುವ ಮೂಲಕ ಗ್ಯಾರಂಟಿಗಳಲ್ಲೊಂದಾದ 'ಗೃಹಲಕ್ಷ್ಮಿ' ಯೋಜನೆಯನ್ನು ಜಾರಿಗೊಳಿಸಲಾಯಿತು. ಅಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರ ಪೈಕಿ ಬಹುತೇಕ ಮಹಿಳೆಯರ ಮೊಬೈಲ್‌ಗೆ ಹಣ ಜಮೆಯಾಗಿರುವ ಬಗ್ಗೆ ಸಂದೇಶಗಳು ಬಂದಿದ್ದವು.

ಯೋಜನೆ ಅನುಷ್ಠಾನವಾದ ಮೇಲೆ ಕಳೆದ 6 ದಿನಗಳಿಂದ ಕರ್ನಾಟಕ ಬ್ಯಾಂಕ್, ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಐಓಬಿ, ಯೂನಿಯನ್ ಬ್ಯಾಂಕ್ ಸೇರಿದಂತೆ ಎಲ್ಲಾ ರಾಷ್ಟ್ರೀಯ ಬ್ಯಾಂಕುಗಳ ಶಾಖೆಗಳಿಗೆ ಪ್ರತೀದಿನ ಸಾವಿರಾರು ಮಂದಿ ಮಹಿಳೆಯರು ತೆರಳಿ 2,000 ರೂ. ಹಣ ಡ್ರಾ ಮಾಡುತ್ತಿದ್ದಾರೆ. ರಾಜ್ಯದಾದ್ಯಂತ 1.10 ಕೋಟಿ ಕುಟುಂಬಗಳ ಯಜಮಾನಿಯರಿಗೆ ಗೃಹಲಕ್ಷ್ಮಿ ಯೋಜನೆಯ 2,000 ರೂ ಪ್ರತೀ ತಿಂಗಳೂ ಜಮೆಯಾಗಲಿದೆ. ಕೆನರಾ ಬ್ಯಾಂಕಿನ ನಜರ್‌ಬಾದ್, ತಿಲಕ್‌ನಗರ, ಬನ್ನಿಮಂಟಪ, ಎನ್.ಆರ್.ಮೊಹಲ್ಲಾ, ವಿಜಯನಗರ, ನಂಜುಮಳಿಗೆ ಸೇರಿದಂತೆ ಮೈಸೂರು ನಗರ, ಜಿಲ್ಲೆಯಾದ್ಯಂತ ಎಲ್ಲಾ ತಾಲೂಕು ಮತ್ತು ಹೋಬಳಿ ಮಟ್ಟದ ಶಾಖೆಗಳಲ್ಲಿ ಮಹಿಳೆಯರ ನೂಕು–ನುಗ್ಗಲು ಏರ್ಪಟ್ಟಿದೆ. ಯಾವ ದಿನವೂ ಬ್ಯಾಂಕಿಗೆ ಹೋಗದ ಮಹಿಳೆಯರು, ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿ ಬ್ಯಾಂಕುಗಳಿಗೆ ತೆರಳಿ ಗೃಹಲಕ್ಷ್ಮಿ ಯೋಜನೆಯಡಿ ಜಮಾ ಆಗಿರುವ ಹಣವನ್ನು ಚಲನ್ ಮೂಲಕ ಡ್ರಾ ಮಾಡುತ್ತಿದ್ದಾರೆ. ಪಾಸ್ ಬುಕ್ ಹಿಡಿದು ಬ್ಯಾಂಕಿಗೆ ಬರುತ್ತಿರುವ ಮಹಿಳೆಯರು, ಹಣ ಬಂದಿದೆಯೋ–ಇಲ್ಲವೋ ಎಂದು ಚೆಕ್ ಮಾಡಿಸುವುದು, ಪಾಸ್ ಬುಕ್ ಎಂಟ್ರಿ ಮಾಡಿಸುವುದು, ಡ್ರಾ ಮಾಡುವಲ್ಲಿ ನಿರತರಾಗಿದ್ದಾರೆ. ಎಟಿಎಂ ಕಾರ್ಡ್ ಇದ್ದವರು ಕೌಂಟರ್‌ಗಳಲ್ಲೇ ಡ್ರಾ ಮಾಡಿಕೊಳ್ಳುತ್ತಿದ್ದರೆ, ಗೂಗಲ್ ಪೇ, ಫೋನ್ ಪೇ ಸೌಲಭ್ಯವಿರುವವರು ನೇರವಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಬಳಸಿಕೊಳ್ಳುತ್ತಿದ್ದಾರೆ. ಈ ಸೌಲಭ್ಯಗಳಿಲ್ಲದವರು ಮಾತ್ರ ಖುದ್ದಾಗಿ ಬ್ಯಾಂಕ್ ಶಾಖೆಗೆ ಭೇಟಿ ನೀಡಿ ಬೇರೆಯವರ ಸಹಾಯದಿಂದ ಚಲನ್ ಬರೆಸಿ ಹಣ ಹಿಂಪಡೆಯುತ್ತಿರುವುದು ಕಂಡು ಬರುತ್ತಿದೆ.

ಎಲ್ಲಾ ಬ್ಯಾಂಕುಗಳ ಶಾಖೆಗಳಲ್ಲೂ ಗೃಹಲಕ್ಷ್ಮಿ ಹಣ ಡ್ರಾ ಮಾಡಲು ಮುಗಿ ಬೀಳುತ್ತಿದ್ದು, ಅಧಿಕಾರಿ, ಸಿಬ್ಬಂದಿಗೆ ತಮ್ಮ ಗ್ರಾಹಕರನ್ನು ನಿರ್ವಹಣೆ ಮಾಡುವುದೇ ದುಸ್ತರವಾಗುತ್ತಿದೆ. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್‌ಸಿ.ಮಹದೇವಪ್ಪ ಸಮ್ಮುಖದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆಗಸ್ಟ್ 30ರಂದು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಶಿಕ್ಷಕರು ತಾಯಿಯ ಸಮಾನ: ಚಲುವರಾಯಸ್ವಾಮಿ



ಮಂಡ್ಯ, ಸೆ.5– ಮಕ್ಕಳಿಗೆ ವಿದ್ಯೆ ನೀಡಿ ಸನ್ಮಾರ್ಗದಲ್ಲಿ ನಡೆಸುವ ಪ್ರತಿಯೊಬ್ಬ ಶಿಕ್ಷಕರು ತಾಯಿಗೆ ಸಮಾನ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಬಣ್ಣಿಸಿದರು.

ಮಂಗಳವಾರ ಜಿಲ್ಲಾಡಳಿತ, ಜಿಪಂ, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶ ಕಟ್ಟುವ ಶಕ್ತಿ ಇರುವ ವಿದ್ಯಾರ್ಥಿಗಳಿಗೆ ಬೇಕಿರುವ ಜ್ಞಾನ, ಜೀವನದ ಮೌಲ್ಯಗಳನ್ನು ಕಲಿಸುವ ಶಕ್ತಿ ಇರುವುದು ಶಿಕ್ಷಕರಿಗೆ ಮಾತ್ರ ಶಿಕ್ಷಕರು ಮಕ್ಕಳ ಜೀವನ ರೂಪಿಸಲು ಶ್ರಮಿಸಬೇಕು ಎಂದರು.

ಉಪರಾಷ್ಟ್ರಪತಿ, ರಾಯಭಾರಿಯಾಗಿ ಕೆಲಸ ಮಾಡಿರುವ ಡಾ.ರಾಧಾಕೃಷ್ಣನ್ ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿರುವುದು ಹೆಮ್ಮೆಯ ವಿಷಯವಾಗಿದೆ. ಪ್ರತಿದಿನ ಶಾಲೆಯಲ್ಲಿ ಮಾಡುವ ಪ್ರಾರ್ಥನೆ ಸಂಸ್ಕಾರ ಕಲಿಸುತ್ತದೆ. ಶಿಕ್ಷಕರು ನೀಡುವ ನೀತಿ ಪಾಠಗಳು ವಿದ್ಯಾರ್ಥಿಗಳು ಜೀವನದಲ್ಲಿ ಯಾವುದೇ ಹುದ್ದೆ ಅಲಂಕರಿಸಿದರೂ ನೆನಪು ಮಾಡಿಕೊಳ್ಳುತ್ತಾರೆ. ಇದು ಶಿಕ್ಷಕರ ಶಕ್ತಿ ಎಂದರು.

ಶಿಕ್ಷಕರ ಜವಾಬ್ದಾರಿ ಪೋಷಕರಕ್ಕಿಂತ ಹೆಚ್ಚಿದೆ. ವಿದ್ಯಾರ್ಥಿಗಳು ಬಹಳಷ್ಟು ಕಾಲವನ್ನು ಶಿಕ್ಷಕರೊಂದಿಗೆ ಇರುತ್ತಾರೆ. ಶಿಕ್ಷಕರು ತಮ್ಮ ಶಾಲೆಯ ಕೇಂದ್ರ ಸ್ಥಾನದಲ್ಲೇ ವಾಸವಾಗಿದ್ದರೆ ವಿದ್ಯಾರ್ಥಿಗಳ ಮನಸ್ಥಿತಿ ಹೆಚ್ಚಾಗಿ ತಿಳಿದುಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಪಠ್ಯ ಚಟುವಟಿಕೆಯೊಂದಿಗೆ ಮಾನಸಿಕ ಧೈರ್ಯ, ದೇಶದ ಇತಿಹಾಸ, ಮೌಲ್ಯಗಳನ್ನು ಮುಂದಿನ ಜೀವನದ ಸವಾಲುಗಳು, ಜೀವನ ನಡೆಸುವ ಕೌಶಲ್ಯಗಳು, ಸಾಮಾನ್ಯ ಜ್ಞಾನವನ್ನು ಬೆಳೆಸುವ ಕೆಲಸವನ್ನು ಶಿಕ್ಷಕರು ಮಾಡಬೇಕು ಎಂದರು.

ಶಾಸಕ ಗಣಿಗ ರವಿಕುಮಾರ್ ಮಾತನಾಡಿ, ಸಮಾಜದಲ್ಲಿ ಬದಲಾವಣೆ ತರಲು ಮಕ್ಕಳಲ್ಲಿ ಶಿಕ್ಷಣದ ಮೂಲಕ ಜ್ಞಾನ ನೀಡಿದ ಮಹಾನ್ ವ್ಯಕ್ತಿ ರಾಧಾಕೃಷ್ಣನ್. ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ಅವರ ಜನ್ಮ ದಿನವನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಸಮಾಜದಲ್ಲಿ ಒಳ್ಳೆಯ ಹೆಸರನ್ನು ಗಳಿಸಿ ಉತ್ತಮ ವ್ಯಕ್ತಿಗಳಾಗಿ ಎಂದು ಶುಭ ಹಾರೈಸುವ ಇಬ್ಬರೂ ವ್ಯಕ್ತಿಗಳಲ್ಲಿ ಒಬ್ಬರು ಪೋಷಕರು ಇನ್ನೊಬ್ಬರು ಶಿಕ್ಷಕರಾಗಿರುತ್ತಾರೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್, ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್, ಎಸ್ಪಿ ಎನ್.ಯತೀಶ್, ಕರ್ನಾಟಕ ಸಂಘ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಉಮೇಶ್, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಶಿವರಾಮೇಗೌಡ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಂಭೂಗೌಡ ಸೇರಿದಂತೆ ಇತರರಿದ್ದರು.

ಕಾವೇರಿ ವಿಚಾರದಲ್ಲಿ ರಾಜಕಾರಣ ಮಾಡಲ್ಲ

ನಮಗೆ ರೈತರ ಹಿತ ಮುಖ್ಯ: ಸಚಿವ ಸಿಆರ್‌ಎಸ್ ಸ್ಪಷ್ಟನೆ



ಮಂಡ್ಯ, ಸೆ.5– ಕಾವೇರಿ ವಿಚಾರದಲ್ಲಿ ರಾಜಕಾರಣ ಮಾಡುವ ಪ್ರಶ್ನೆಯೇ ಇಲ್ಲ. ನಮಗೆ ರೈತರ ಹಿತರಕ್ಷಣೆ ಮುಖ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಕಾವೇರಿ ಹಿತರಕ್ಷಣಾ ಸಮಿತಿಯಿಂದ ನಡೆಸುತ್ತಿರುವ ಧರಣಿ ಸ್ಥಳಕ್ಕೆ ಮಂಗಳವಾರ ಭೇಟಿ ನೀಡಿ, ಹೋರಾಟಗಾರರೊಂದಿಗೆ ಮಾತುಕತೆ ನಡೆಸಿ ಅವರು ಮಾತನಾಡಿದರು.

ತಮಿಳುನಾಡು ನಿತ್ಯ 25 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಪ್ರಾಧಿಕಾರ ಮತ್ತು ನ್ಯಾಯಾಲಯದ ಮೊರೆ ಹೋಗಿದ್ದು, ಕರ್ನಾಟಕ ಸರ್ಕಾರ ಇಲ್ಲಿನ ಪರಿಸ್ಥಿತಿ ಬಗ್ಗೆ ಮನವರಿಕೆ ಮಾಡಿಕೊಡುತ್ತಾ ಬಂದಿದೆ. ಹಾಗಾಗಿ ನೀರು ಬಿಡುವ ಪ್ರಮಾಣ ಕಡಿಮೆಯಾಗುತ್ತಾ ಬಂದಿದ್ದು, ಸುಪ್ರೀಂ ಕೋರ್ಟ್‌ನಲ್ಲಿ ನಾಳೆ ವಿಚಾರಣೆ ಮುಂದುವರೆದು ತೀರ್ಪು ಬರುವ ಸಾಧ್ಯತೆ ಇದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ವಿಶೇಷ ಕಾಳಜಿ ವಹಿಸಿ ಕಾನೂನು ತಜ್ಞರ ಜೊತೆ ನಿರಂತರ ಸಂಪರ್ಕ ಇರಿಸಿಕೊಂಡಿದ್ದಾರೆ ಎಂದರು.

ಸುಪ್ರೀಂ ಕೋರ್ಟ್ ತೀರ್ಪು ಹೊರ ಬಂದ ನಂತರ ಅನುಕೂಲ ಮತ್ತು ಅನಾನುಕೂಲದ ಬಗ್ಗೆ ಸರ್ಕಾರದ ನಿಲುವು ಏನಿರಬೇಕು ಎಂಬುದರ ಬಗ್ಗೆಯೂ ಚರ್ಚೆ ನಡೆದಿದೆ. ರೈತರ ಹಿತ ಕಾಪಾಡಲು ಸರ್ಕಾರ ಎಲ್ಲಾ ರೀತಿ ಮುಂದಾಗಿದ್ದು, ಸರ್ವಪಕ್ಷಗಳ ಸಭೆ ಕರೆದು ಚರ್ಚೆ ಮಾಡಿದ್ದೇವೆ. ಸರ್ವಪಕ್ಷ ನಿಯೋಗ ಪ್ರಧಾನಿ ಮೋದಿ ಅವರನ್ನು ಭೇಟಿಯಾಗಲು ಸಮಯಾವಕಾಶ ಕೋರಿದ್ದೇವೆ. ಆದರೆ ಅವರು ಇದುವರೆಗೆ ಸಮಯ ನಿಗದಿ ಮಾಡಿಲ್ಲ. ಕಾವೇರಿ ನದಿ ನೀರು ಪ್ರಾಧಿಕಾರ ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿದ್ದು, ಹಾಗಾಗಿ ಪ್ರಧಾನಿ ಭೇಟಿ ತುರ್ತು ಅಗತ್ಯವಾಗಿದೆ ಎಂದರು.

ರಾಜ್ಯದ 28 ಸಂಸದರು, ರಾಜ್ಯಸಭಾ ಸದಸ್ಯರು ಕಾವೇರಿ ವಿಚಾರದಲ್ಲಿ ಒಗ್ಗೂಡಿ ಹೋರಾಟ ಮಾಡಬೇಕಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವಿನ ಸಂಪರ್ಕ ಕೊಂಡಿಯಾಗಿ ಸಂಸದರು ಕಾರ್ಯ ನಿರ್ವಹಿಸಬೇಕು. ಕಾವೇರಿ ವಿಚಾರದಲ್ಲಿ ಸಂಸದರಿಗೆ ಪತ್ರ ಬರೆಯುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದು ಅವರು ಪತ್ರ ಬರೆಯುವುದಾಗಿ ತಿಳಿಸಿದ್ದಾರೆ. ಕಾವೇರಿ ಅಚ್ಚುಕಟ್ಟು ಪ್ರದೇಶದ ರೈತರು ನಡೆಸುತ್ತಿರುವ ಹೋರಾಟದಲ್ಲಿ ನ್ಯಾಯಯುತ ಬೇಡಿಕೆ ಮುಂದಿಟ್ಟು ಪ್ರತಿಭಟಿಸಲಾಗುತ್ತಿದೆ. ಈ ವೇಳೆ ಯಾರನ್ನು ಸಹ ಟೀಕೆ ಮಾಡದೆ ಹೋರಾಟ ಮುಂದುವರೆಸಿರುವುದು ಒಳ್ಳೆಯ ಬೆಳವಣಿಗೆ. ನಾವು ಕೂಡ ಕಾವೇರಿ ಹೋರಾಟದಲ್ಲಿ ನಿರಂತರವಾಗಿ ಭಾಗಿಯಾಗಿದ್ದೆವು. ಇದೀಗ ಮಂತ್ರಿಯಾಗಿದ್ದೇನೆ. ರಾಜ್ಯವನ್ನಾಳಿದ ಎಲ್ಲಾ ರಾಜಕೀಯ ಪಕ್ಷಗಳು ಸಮಸ್ಯೆ ಎದುರಿಸಿವೆ. ಒಕ್ಕೂಟ ವ್ಯವಸ್ಥೆಯಲ್ಲಿ ಕಾನೂನಿಗೆ ಸ್ಪಂದಿಸಬೇಕಾಗಿದೆ. ಸರ್ಕಾರ ರೈತರ ಹಿತ ಕಾಪಡಲು ಬದ್ಧ ಎಂದು ಪುನರುಚ್ಚರಿಸಿದರು. ಈ ವೇಳೆ ಶಾಸಕ ಗಣಿಗ ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಎನ್.ಯತೀಶ್ ಸೇರಿದಂತೆ ನೂರಾರು ಮಂದಿ ಹೋರಾಟಗಾರರು ಇದ್ದರು.

ಇಂದು ಹಿತರಕ್ಷಣಾ ಸಮಿತಿ ಸಭೆ

ಮಂಡ್ಯ: ಬುಧವಾರ ಸುಪ್ರೀಂ ಕೋರ್ಟ್‌ನಲ್ಲಿ ಕಾವೇರಿ ವಿಚಾರವಾಗಿ ತೀರ್ಪು ಬರುವ ಸಾಧ್ಯತೆ ಇದ್ದು, ತೀರ್ಪಿನ ಅನುಗುಣವಾಗಿ ಚರ್ಚಿಸಲು ಧರಣಿ ಸ್ಥಳವಾದ ಸರ್‌ಎಂವಿ ಪ್ರತಿಮೆ ಬಳಿ ಜಿಲ್ಲೆಯ ಜನಪ್ರತಿನಿಧಿಗಳು, ಹೋರಾಟಗಾರರು ಹಾಗೂ ಎಲ್ಲಾ ರಾಜಕೀಯ ಪಕ್ಷಗಳ ಸಭೆಯನ್ನು ಸಂಜೆ 4 ಗಂಟೆಗೆ ಕರೆಯಲಾಗಿದೆ ಎಂದು ಹಿತರಕ್ಷಣಾ ಸಮಿತಿ ಹೋರಾಟಗಾರ್ತಿ ಸುನಂದಾ ಜಯರಾಂ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವರು ಭೇಟಿ ನೀಡಿ, ನಮ್ಮ ಸಮಸ್ಯೆ ಆಲಿಸಿದ್ದಾರೆ. ಆದರೆ ಯಾವುದೇ ಭರವಸೆ ನೀಡಿಲ್ಲ. ಈ ನಿಟ್ಟಿನಲ್ಲಿ ಹೋರಾಟ ಮುಂದುವರೆಸಬೇಕಾದದ್ದು ನಮ್ಮ ಕರ್ತವ್ಯವಾಗಿದ್ದು, ಹೋರಾಟ ಮುಂದುವರೆಯಲಿದೆ ಎಂದು ಸ್ಪಷ್ಟಪಡಿಸಿದರು. ರೈತರು ಬೆಳೆದಿರುವ ಬೆಳೆಗೆ ನೀರಿಲ್ಲ. ಹೊಸ ಬೆಳೆ ಹಾಕಲು ಸಾಧ್ಯವಾಗುತ್ತಿಲ್ಲ. ಇದೊಂದೆ ಬೆಳೆಯಲ್ಲ ಮುಂದಿನ 2 ವರ್ಷಗಳ ಕಾಲ ರೈತನಿಗೆ ಬೆಳೆ ಹಾಕುವುದು ಅಸಾಧ್ಯ. ಇಂತಹ ಪರಿಸ್ಥಿತಿಯಲ್ಲಿ ರೈತನ ಬದುಕು ಸಂಕಷ್ಟಕ್ಕೆ ಸಿಲುಕಲಿದೆ. ಸರ್ಕಾರ ರೈತರ ರಕ್ಷಣೆಗೆ ಮುಂದಾಗಬೇಕು. ಕಾವೇರಿ ಕೊಳ್ಳದ ಪ್ರದೇಶದಲ್ಲಿ ಎಷ್ಟೇ ಪ್ರತಿಭಟನೆ ಮಾಡಿದದರೂ ನ್ಯಾಯಾಲಯ ಅದನ್ನು ಪರಿಗಣಿಸುವುದಿಲ್ಲ. ಕರ್ನಾಟಕ ಸರ್ಕಾರ ವಾಸ್ತವ ಪರಿಸ್ಥಿತಿ ಮನವರಿಕೆ ಮಾಡಿಕೊಡುವ ಮೂಲಕ ರಾಜ್ಯದ ರೈತರಿಗೆ ನ್ಯಾಯ ದೊರಕಿಸಿ ಕೊಡಬೇಕಾಗಿದೆ ಎಂದರು.

ಉದರ ದರ್ಶಕ ಶಸ್ತ್ರಚಿಕಿತ್ಸಾ ಶಿಬಿರ

ಮಂಡ್ಯ, ಸೆ.5– ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ವತಿಯಿಂದ ಸೆ.7 ರಿಂದ ಸೆ.27 ರವರೆಗೆ ಉದರ ದರ್ಶಕ ಶಸ್ತ್ರಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ.

ಸೆ.7 ಕೆರೆಗೋಡು ಪ್ರಾಥಮಿಕ ಆರೋಗ್ಯ ಕೇಂದ್ರ, ಸೆ.8 ಕೀಲಾರ ಸರ್ಕಾರಿ ಆರೋಗ್ಯ ಕೇಂದ್ರ, ಸೆ.12 ಕೆ.ಎಂ.ದೊಡ್ಡಿ ಸರ್ಕಾರಿ ಆರೋಗ್ಯ ಕೇಂದ್ರ, ಸೆ.13 ಕಿರುಗಾವಲು ಸರ್ಕಾರಿ ಆರೋಗ್ಯ ಕೇಂದ್ರ, ಸೆ.15 ಬಿಂಡಿಗನವಿಲೆ ಸರ್ಕಾರಿ ಆರೋಗ್ಯ ಕೇಂದ್ರ ಹಾಗೂ ಮಧ್ಯಾಹ್ನ 1 ಗಂಟೆಗೆ ನಾಗಮಂಗಲ ಸರ್ಕಾರಿ ಆಸ್ಪತ್ರೆ, ಸೆ.16 ಪಾಂಡವಪುರ ಉಪವಿಭಾಗ ಆಸ್ಪತ್ರೆ, ಸೆ.20 ಅರಕೆರೆ ಸರ್ಕಾರಿ ಆರೋಗ್ಯ ಕೇಂದ್ರ, ಸೆ.22 ಪಾಂಡವಪುರ ಉಪವಿಭಾಗ ಆಸ್ಪತ್ರೆ, ಸೆ.26 ಶಿವಳ್ಳಿ ಸರ್ಕಾರಿ ಆರೋಗ್ಯ ಕೇಂದ್ರ, ಸೆ.27 ರಂದು ಮದ್ದೂರು ತಾಲೂಕು ಆಸ್ಪತ್ರೆಗಳಲ್ಲಿ ಬೆಳಗ್ಗೆ 10 ಗಂಟೆಗೆ ಉದರ ದರ್ಶಕ ಶಸ್ತ್ರಚಿಕಿತ್ಸಾ ಶಿಬಿರ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬರಪೀಡಿತ ಪಟ್ಟಿಗೆ ಮತ್ತಷ್ಟು ತಾಲೂಕುಗಳ ಸೇರ್ಪಡೆ




ಮಂಡ್ಯ, ಸೆ.5– ರಾಜ್ಯ ಸರ್ಕಾರ 113 ತಾಲೂಕುಗಳನ್ನು ಬರಪೀಡಿತವೆಂದು ಪರಿಗಣಿಸಿ, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಆದರೆ ಕೇಂದ್ರ ಈ ಪೈಕಿ ಕೇವಲ 51 ತಾಲೂಕುಗಳನ್ನು ಮಾತ್ರ ಬರಪೀಡಿತವೆಂದು ನಿರ್ಧರಿಸಿದ್ದು, ಈ ನಿಟ್ಟಿನಲ್ಲಿ ಉಳಿದ 62 ತಾಲೂಕುಗಳ ಜೊತೆಗೆ ಮತ್ತಷ್ಟು ಬರ ಪೀಡಿತ ಪ್ರದೇಶಗಳನ್ನು ಸೇರಿಸಿ ಒಟ್ಟು 134 ತಾಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿ, ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಮಂಗಳವಾರ ನಗರದ ಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ನಾನು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅಧಿಕಾರಿಗಳೊಂದಿಗೆ ಸಭೆ ನಡೆಸಿ, 113 ತಾಲೂಕುಗಳನ್ನು ಬರ ಪೀಡಿತ ಪ್ರದೇಶವೆಂದು ಕೇಂದ್ರದ ಮಾರ್ಗಸೂಚಿ ಪ್ರಕಾರ ಘೋಷಿಸಿದ್ದೆವು. ಆದರೆ ಕೇಂದ್ರ ಈ ಪೈಕಿ ಕೇವಲ 51 ತಾಲೂಕನ್ನು ಮಾತ್ರ ಬರ ಪ್ರದೇಶ ಎಂದು ಅಂತಿಮಗೊಳಿಸಿದೆ. ಈ ನಿಟ್ಟಿನಲ್ಲಿ ಉಳಿದ 62 ತಾಲೂಕುಗಳೊಂದಿಗೆ ಮತ್ತಷ್ಟು ಪ್ರದೇಶ ಸೇರಿಸಿ, 134 ತಾಲೂಕುಗಳನ್ನು ಬರ ಪೀಡಿತವೆಂದು ಘೋಷಿಸಿ ಎಂದು ಮನವಿ ಮಾಡಲು ನಿರ್ಧರಿಸಿದ್ದೇವೆ ಎಂದರು.

ಸೆ.7 ರಂದು ಕ್ಯಾಬಿನೆಟ್ ಸಭೆ ಇದ್ದು, ಅಲ್ಲಿ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಿದ್ದೇವೆ. ಅಂತಿಮವಾಗಿ ಕೇಂದ್ರ ಸರ್ಕಾರ ನಿಗದಿ ಮಾಡಿರುವ 51 ತಾಲೂಕುಗಳ ಬರ ಪೀಡಿತ ಪಟ್ಟಿಯಲ್ಲಿ ಮಂಡ್ಯ ಜಿಲ್ಲೆಯ 2 ತಾಲೂಕುಗಳಿದ್ದು, ಕ್ಯಾಬಿನೆಟ್ ಬಳಿಕ 51 ತಾಲೂಕುಗಳ ಹೆಸರನ್ನು ಘೋಷಿಸುತ್ತೇವೆ. ಅಗತ್ಯ ಮಳೆಯಾಗದೇ ಇರುವುದು, ಕೆರೆ, ಕಟ್ಟೆಗಳು ಖಾಲಿ ಇರುವುದರಿಂದ ರಾಜ್ಯದಲ್ಲಿ ಬರ ಪರಿಸ್ಥಿತಿ ಹೆಚ್ಚಾಗಿದೆ ಎಂದರು.

ಬರಪೀಡಿತ ಪ್ರದೇಶಗಳನ್ನು ನಾವು ಗುರುತಿಸಿರುವಷ್ಟು ಘೋಷಣೆ ಮಾಡಿ ಎಂದು ಸಿಎಂ ಸಹ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಕೇಂದ್ರ ಸರ್ಕಾರ ನಮ್ಮ ಮನವಿ ಪರಸ್ಕರಿಸಬೇಕೆಂದ ಅವರು, ಬರ ಪೀಡಿತ ಪ್ರದೇಶಗಳನ್ನು ಗುರುತಿಸಿರುವಷ್ಟು ಘೋಷಣೆ ಮಾಡಬೇಕೆಂದು ಮನವಿ ಸಲ್ಲಿಸಲು ನಾನು ಸೇರಿದಂತೆ ಸಂಬಂಧಿಸಿದ ಸಚಿವರು ಕೇಂದ್ರ ಸರ್ಕಾರದ ಬಳಿ ಹೋಗಿ ಆಯಾ ಇಲಾಖೆ ಮಂತ್ರಿಗಳು ಹಾಗೂ ಅಧಿಕಾರಿಗಳನ್ನು ಭೇಟಿ ಮಾಡಲಿದ್ದೇವೆ ಎಂದು ತಿಳಿಸಿದರು.

ಕಾವೇರಿ ವಿಚಾರದಲ್ಲಿ ತಮಿಳುನಾಡು ನಿತ್ಯ 20 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಪ್ರಾಧಿಕಾರದ ಮೇಲೆ ಒತ್ತಡ ಹೇರಿತ್ತು. ಆದರೆ ನಾವು ನೆರೆ ರಾಜ್ಯದ ಒತ್ತಡಕ್ಕೆ ಮಣಿಯದಿದ್ದಾಗ ಅವರು ಮತ್ತೆ ಪ್ರಾಧಿಕಾರ ಹಾಗೂ ಸುಪ್ರೀಂ ಮೊರೆ ಹೋದ ಪರಿಣಾಮ 5 ಸಾವಿರ ಕ್ಯುಸೆಕ್ ಬಿಡುವಂತಾಗಿದೆ. ಕೆಲ ಹೋರಾಟಗಾರರು ಹೇಳುವಂತೆ ಮುಂಚೆಯೇ ನಾವು ಸುಪ್ರೀಂ ಮೊರೆ ಹೋಗಲು ಆಗಲ್ಲ. ಸುಪ್ರೀಂ ಮೊದಲು ನೀರು ಬಿಟ್ಟು ನಂತರ ಅರ್ಜಿ ಸಲ್ಲಿಸಿ ಎನ್ನುತ್ತಾರೆ. ಆ ಕಾರಣಕ್ಕೆ ನೀರು ಬಿಡಬೇಕಾಯಿತು. ನಾಳೆ ನಮ್ಮ ಪರ ತೀರ್ಪು ಬರುವ ವಿಶ್ವಾಸವಿದೆ. ತೀರ್ಪು ವ್ಯತಿರಿಕ್ತವಾದರೆ ಏನು ಕ್ರಮ ಕೈಗೊಳ್ಳಬೇಕೆಂದು ಚರ್ಚಿಸಿ ನಿರ್ಧರಿಸುತ್ತೇವೆ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಶಾಸಕ ಗಣಿಗ ರವಿಕುಮಾರ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ನಿರ್ದೇಶಕ ಅಶೋಕ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್, ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಉಪಸ್ಥಿತರಿದ್ದರು.



ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯಲ್ಲಿ ಕಾನೂನು ಅರಿವು ಕಾರ್ಯಕ್ರಮ ನಡೆಯಿತು. ಈ ವೇಳೆ ನ್ಯಾಯಾಧೀಶ ಹೆಚ್.ಮಹದೇವಪ್ಪ, ಅಪರ ಸಿವಿಲ್ ನ್ಯಾಯಾಧೀಶ ಬಿ.ಆರ್.ಹನುಮಂತರಾಯಪ್ಪ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಆರ್.ರಜನಿ, ವಕೀಲರ ಸಂಘದ ಅಧ್ಯಕ್ಷ ಸತ್ಯನಾರಾಯಣ, ಕಾರ್ಯದರ್ಶಿ ಡಿ.ಚಂದ್ರೇಗೌಡ, ವೈದ್ಯಾಧಿಕಾರಿ ಸುರೇಶ್ ಸೇರಿದಂತೆ ಇನ್ನಿತರರಿದ್ದರು.



ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರು ಸರ್ಕಾರಿ ಅಂಧ ಮಕ್ಕಳ ಪಾಠಶಾಲೆಯ ಮಕ್ಕಳೊಂದಿಗೆ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಈ ವೇಳೆ ಮಕ್ಕಳು ಹಾಗೂ ಸತೀಶ್ ಅವರು ಶುಭಾಶಯ ಕೋರಿದರು. ಡಾ. ಡಿ.ತಿಮ್ಮಯ್ಯ ಅಭಿಮಾನಿ ಬಳಗದ ಎಡತೊರೆ ನಿಂಗರಾಜ್, ಯುವ ಮುಖಂಡ ಸೌರಭ, ಹರೀಶ್‌ಕುಮಾರ್, ಹೇಮಂತ್, ಜಯಂತ್, ರಾಚಪ್ಪ, ರಾಮು, ಗುರು ಮತ್ತಿತರರಿದ್ದರು.

ಗಾಂಧೀಜಿ ಕೊಂದ ಮನಸ್ಥಿತಿಯವರಿಂದಲೇ ಗೌರಿ ಲಂಕೇಶ್ ಹತ್ಯೆ: ಸಿಎಂ ಸಿದ್ದರಾಮಯ್ಯ



ಬೆಂಗಳೂರು: ಮಹಾತ್ಮ ಗಾಂಧೀಜಿ ಅವರನ್ನು ಕೊಂದ ಮನಸ್ಥಿತಿಯವರೇ ಗೌರಿ ಲಂಕೇಶ್ ಅವರನ್ನು ಹತ್ಯೆ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಹೇಳಿದ್ದಾರೆ.

ಇಂದು ನಗರದ ಟೌನ್‌ಹಾಲ್‌ನಲ್ಲಿ ನಡೆದ ಗೌರಿ ನೆನಪು ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ, ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ ಗೌರಿ ಲಂಕೇಶ್ ಅನೇಕ ಬಾರಿ ಭೇಟಿಯಾಗಿದ್ದರು. ಆದರೆ ಅವರು ಯಾವತ್ತೂ ವೈಯಕ್ತಿಕ ಸಹಾಯ ಕೇಳಲಿಲ್ಲ. ಸಾಮಾಜಿಕ ಸಮಸ್ಯೆಗಳ ಬಗ್ಗೆ ನನ್ನ ಬಳಿ ಚರ್ಚೆ ಮಾಡುತ್ತಿದ್ದರು ಎಂದರು. ಕೋಮುವಾದಿಗಳೇ ಪತ್ರಕರ್ತೆ ಗೌರಿ ಲಂಕೇಶ್‌ರನ್ನು ಹತ್ಯೆ ಮಾಡಿದರು. ಕೋಮುವಾದಿಗಳಿಗೆ ಹಿಂದೂಗಳು ಹಾಗೂ ಮುಸ್ಲಿಂ ಒಟ್ಟಾಗಿ ಇರುವುದು ಇಷ್ಟವಿಲ್ಲ ಕೋಮುವಾದಿಗಳು ಬೆದರಿಕೆ ಪತ್ರ ಬರೆಯುತ್ತಾರೆ. ಆದರೆ ಯಾರೂ ಭಯಪಡಬೇಡಿ. ಕೋಮುವಾದದ ವಿರುದ್ಧ ಹೋರಾಟ ಮಾಡೋಣ ಎಂದು ಸಿಎಂ ಹೇಳಿದರು. ಇದೇ ವೇಳೆ ರಾಜ್ಯದ ಸಾಹಿತಿಗಳು, ಕವಿಗಳು, ಚಿಂತಕರಿಗೆ ಬೆದರಿಕೆ ಪತ್ರ ವಿಚಾರ ಪ್ರಸ್ತಾಪಿಸಿದ ಸಿಎಂ ಸಿದ್ದರಾಮಯ್ಯ, ಬೆದರಿಕೆ ಪತ್ರ, ಬೆದರಿಕೆ ಕರೆಗಳ ಬಗ್ಗೆ ತನಿಖೆ ನಡೆಸಲು ಆದೇಶಿಸಿದ್ದೇನೆ. ಅದೇ ರೀತಿ, ನೈತಿಕ ಪೊಲೀಸ್‌ಗಿರಿ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆಯೂ ಸೂಚನೆ ನೀಡಿದ್ದೇನೆ. ಮೈಸೂರಿನಲ್ಲಿ ಇದಕ್ಕೆ ಡಿವೈಎಸ್‌ಪಿ ನೇತೃತ್ವದಲ್ಲಿ ಒಂದು ಕಚೇರಿಯನ್ನೇ ತೆರೆದಿದ್ದೇವೆ. ಗೌರಿ ಲಂಕೇಶ್ ಹತ್ಯೆ ಕುರಿತಾಗಿ 1 ಸಾವಿರ ಪುಟದ ಚಾರ್ಜ್‌ಶೀಟ್ ದಾಖಲಾಗಿದೆ. ಪ್ರಾಮಾಣಿಕ ತನಿಖೆಯಾಗಿದೆ, ಅವರು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದರು.

ತಮಿಳುನಾಡಿಗೆ ಕಾವೇರಿ ನೀರು

ರಾಜ್ಯದ ರೈತ ಸಂಘಟನೆಗಳಿಂದ ಸುಪ್ರೀಂಕೋರ್ಟ್‌ಗೆ ಅರ್ಜಿ

ಬೆಂಗಳೂರು: ಕೆಆರ್‌ಎಸ್ ಡ್ಯಾಂನಿಂದ ತಮಿಳುನಾಡಿಗೆ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ(ಸಿಡಬ್ಲ್ಯುಎಂಎ) ನೀಡಿರುವ ಆದೇಶ ಪ್ರಶ್ನಿಸಿ ಕರ್ನಾಟಕ ರೈತ ಸಂಘಟನೆಗಳು ಮಂಗಳವಾರ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಈ ಸಂಬಂಧ ಸರ್ವೋದಯ ಕರ್ನಾಟಕ ಪಕ್ಷದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ದೆಹಲಿಗೆ ತೆರಳಿದ್ದು, ಹಿರಿಯ ವಕೀಲ ರವಿವರ್ಮ ಕುಮಾರ್ ಅವರ ಮೂಲಕ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿವೆ. ನಾವು ಬೆಳೆಗೆ ನೀರು ಕೇಳುತ್ತಿಲ್ಲ. ಬದಲಿಗೆ ಕುಡಿಯುವ ನೀರಿಗೆ ಆದ್ಯತೆ ಕೊಡಿ. ತಮಿಳುನಾಡು ಸರ್ಕಾರ ಕುರುವೈ ಬೆಳೆಗೆ ನೀರು ಕೇಳುತ್ತಿದೆ. ಮಂಡ್ಯ, ಮೈಸೂರು ಸುತ್ತಮುತ್ತ ಮೂರು ದಿನಕ್ಕೊಮ್ಮೆ ನೀರು ಬಿಡಲಾಗುತ್ತಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (CWMA) ತಂಡ ತಮಿಳುನಾಡಿಗೆ ಭೇಟಿ ನೀಡಿ ಪರಿಶೀಲನೆ ಮಾಡಿದೆ. ಆದರೆ, ಕರ್ನಾಟಕ್ಕೆ ಭೇಟಿ ನೀಡಿಲ್ಲ ಎಂದು ರೈತ ಸಂಘಟನೆಗಳು ಅರ್ಜಿಯಲ್ಲಿ ಉಲ್ಲೇಖಿಸಿವೆ.

ಮೊದಲು ನಿಮ್ಮ ಮನೆಯನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಿ

ಲೋಕಾಯುಕ್ತಕ್ಕೆ ಹೈಕೋರ್ಟ್ ತೀಕ್ಷ್ಣ ಸಲಹೆ



ಬೆಂಗಳೂರು: ಮೊದಲು ನಿಮ್ಮ ಮನೆಯನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಿ ಎಂದು ಹೈಕೋರ್ಟ್ ಲೋಕಾಯುಕ್ತ ಪೊಲೀಸರಿಗೆ ಕಟುವಾಗಿ ತಿವಿದಿದೆ.

ಲೋಕಾಯುಕ್ತರು ನನ್ನ ವಿರುದ್ಧ ದಾಖಲಿಸಿರುವ ಅಕ್ರಮ ಆಸ್ತಿ ಗಳಿಕೆ ಪ್ರಕರಣ ರದ್ದುಪಡಿಸಬೇಕು ಎಂದು ಕೋರಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಕಾಳಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಲೋಕಾಯುಕ್ತ ಪೊಲೀಸರು ಮತ್ತು ಪ್ರಾಸಿಕ್ಯೂಷನ್ ವೈಫಲ್ಯಗಳ ಬಗ್ಗೆ ಮಾತನಾಡಿದರೆ ಅದು ಸಂಪುಟಗಟ್ಟಲೆ ಆಗುತ್ತದೆ ಎಂದು ಕಟುವಾಗಿ ನುಡಿದಿರುವ ನ್ಯಾಯಪೀಠ, ತನಿಖೆಗಳನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಪೂರ್ಣಗೊಳಿಸಿ. ಇಲ್ಲವಾದರೆ ಸಾರ್ವಜನಿಕ ಸಿಬ್ಬಂದಿಯ ನೆತ್ತಿಯ ಮೇಲೆ ತೂಗುಗತ್ತಿ ಸದಾ ತೂಗಾಡುತ್ತಿರುತ್ತದೆ. ಅವರ ಹಕ್ಕುಗಳಿಗೆ ಸೋಲಾಗುತ್ತದೆ ಎಂದು ಎಚ್ಚರಿಸಿದೆ.

ಈ ಕೋರ್ಟ್ ಇಂತಹ ಹಲವು ಪ್ರಕರಣಗಳನ್ನು ನೋಡಿದೆ. ಅವುಗಳಲ್ಲಿ ತನಿಖೆಯು ದಶಕಗಳ ಕಾಲ ಮುಂದುವರಿದಿದ್ದು ಅಂತಿಮ ವರದಿ ಸಲ್ಲಿಕೆಯಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದನ್ನು ಕಂಡಿದೆ. ಇಂತಹುದನ್ನೆಲ್ಲಾ ನೋಡಿದರೆ ಲೋಕಾಯುಕ್ತ ಪೊಲೀಸರಿಗೆ ಇಚ್ಛಾಶಕ್ತಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದು ನ್ಯಾಯಪೀಠ ಹೇಳಿದೆ.

ಬದುಕಿನ ಸವಾಲು ಎದುರಿಸಲು ಸರಳ ಮಾರ್ಗ ತೋರಿಸಿದವರು ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಆಧ್ಯಾತ್ಮಿಕ ಚಿಂತಕಿ ಡಾ.ವೀಣಾ ಬನ್ನಂಜೆ ಸ್ಮರಣೆ



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಶ್ರೀ ಸಿದ್ಧೇಶ್ವರ ಸಾಮಿಗಳವರ ನೆನಪಿನ ಉಪನ್ಯಾಸದಲ್ಲಿ ಶಿಕ್ಷಕರ ದಿನದ ಪ್ರಯುಕ್ತ ಐವರು ಶಿಕ್ಷಕರನ್ನು ಸನ್ಮಾನಿಸಲಾಯಿತು.

ಮೈಸೂರು, ಸೆ.5(ಪಿಎಂ)– ಬದುಕಿನ ಸವಾಲುಗಳನ್ನು ಎದುರಿಸುವ ಕಲೆಯನ್ನು ಸರಳವಾಗಿ ತಿಳಿಸಿಕೊಟ್ಟವರು ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಎಂದು ಆಧ್ಯಾತ್ಮಿಕ ಚಿಂತಕಿ ಹಾಗೂ ಲೇಖಕಿ ಡಾ.ವೀಣಾ ಬನ್ನಂಜೆ ಸ್ಮರಿಸಿದರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಶ್ರೀ ಸಿದ್ಧೇಶ್ವರ ಸಾಮಿಗಳವರ ನೆನಪಿನ ಉಪನ್ಯಾಸ ಹಾಗೂ ಶಿಕ್ಷಕರ ದಿನದ ಪ್ರಯುಕ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭದಲ್ಲಿ ಅವರು ಉಪನ್ಯಾಸ ನೀಡಿದರು.

ಅಪ್ಪನವರನ್ನು (ಸಿದ್ಧೇಶ್ವರ ಸ್ವಾಮಿಗಳು) ನಾನು ಮೊದಲ ಬಾರಿಗೆ ಸಂದರ್ಶಿಸಿದ ಸಂದರ್ಭದಲ್ಲಿ ನನ್ನಲ್ಲಿ ಒರಟಿನ ಸ್ವಭಾವವಿತ್ತು. ಅವರು ನನ್ನಲ್ಲಿನ ಇಂತಹ ಅಹಂ ಅನ್ನು ದೂರ ಮಾಡಿದರು. ಅಪ್ಪನವರ ಬದುಕು ಅನುಭವವಾಗಿ ಅದರಾಚೆಗಿನ ಘಟರಹಿತ ಸ್ಥಿತಿಗೆ ತಲುಪಿದ್ದರಿಂದಲೇ ಅವರು ಮಾನವನ ಬದುಕಿನ ಸವಾಲುಗಳಿಗೆ ಉತ್ತರ ಹುಡುಕಿಕೊಟ್ಟಿದ್ದಾರೆ. ಬದುಕಿನ ಸಮಸ್ಯೆ ಮತ್ತು ಸವಾಲುಗಳನ್ನು ಅವರು ಹಲಸಿನ ಹಣ್ಣಿಗೆ ಹೋಲಿಸಿದ್ದು, ಹಲಸಿನ ಹಣ್ಣಿನ ಸಿಹಿಯ ತೊಳೆ ತಿನ್ನಬೇಕಾದರೆ ಕೈಗೆ ಎಣ್ಣೆ ಹಚ್ಚಿಕೊಂಡರೆ ಕೈಗೆ ಹಣ್ಣಿನೊಳಗಿನ ಮೇಣ ಅಂಟುವುದಿಲ್ಲ. ಅಂತೆಯೇ ಬದುಕು ಎಂದು ಅತ್ಯಂತ ಸರಳವಾಗಿ ಸವಾಲು ಎದುರಿಸುವ ಕಲೆಯನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು.

ಭಗವದ್ಗೀತೆಗೆ ಸಂಬಂಧಿಸಿದಂತೆ ಎಲ್ಲಿಯೂ ಶ್ಲೋಕಗಳನ್ನು ಉಲ್ಲೇಖಿಸಿದೇ ಕರ್ಮಸಿದ್ಧಾಂತ ಹೇಳಬಲ್ಲವರಾಗಿದ್ದರು. ಅದ್ಭುತವಾದ ಕಥೆಗಳ ಮೂಲಕ ಭಗವದ್ಗೀತೆಯ ಸಾರವನ್ನು ಸರಳವಾಗಿ ತಿಳಿಸಿಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ. ನಾನು ವಚನ ಪರಂಪರೆಯಲ್ಲಿನ ಆಧ್ಯಾತ್ಮ ಅರ್ಥ ಮಾಡಿಕೊಳ್ಳುವ ಹಸಿವಿನಲ್ಲಿದ್ದ ಸಂದರ್ಭದಲ್ಲಿ 'ತಂತ್ರ ಮತ್ತು ಶರಣ' ಎಂಬ ವಿಷಯ ಕುರಿತು ಅವರು ಮಾಡಿದ ಉಪನ್ಯಾಸ ನನ್ನಲ್ಲಿ ಸ್ಪಷ್ಟತೆ ಮೂಡಿಸಿತು ಎಂದರು.

ಆಶಯ ನುಡಿಗಳನ್ನಾಡಿದ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಪಿ.ಪ್ರಕಾಶ್, ಶ್ರೀ ಸಿದ್ಧೇಶ್ವರ ಸ್ವಾಮಿಗಳು ಇಹಲೋಕದಿಂದ ಮರೆಯಾದರೂ ನಮ್ಮ ಬದುಕು ಹಸನಾಗಿಸಲು ಇರುವ ಎಚ್ಚರಿಕೆಯ ದೀಪವಾಗಿ ನಮ್ಮೊಂದಿಗೆ ಇದ್ದಾರೆ ಎಂದು ಹೇಳಿದರು.

ಅವರು ಒಂದು ಶ್ರೇಷ್ಠ ಅಭಿವಂದನಾ ಪತ್ರ ಬರೆದಿಟ್ಟಿದ್ದು, ಅದು ಅತ್ಯಂತ ಅಪರೂಪ. ಇದು ನಮ್ಮ ಮನಸ್ಸಿನ ಸಮನ್ವಯತೆಯ ವ್ಯವಸ್ಥೆ ಜಾಗೃತಗೊಳಿಸಿ ಸರಿ–ಸತ್ಯ ಮತ್ತು ನೆಮ್ಮದಿ ದಾರಿ ತೋರಲು ಸಹಕಾರಿಯಾಗಲಿದೆ. ಬದುಕಿನ ಬಂಧನಗಳಿಂದ ಬಿಡುಗಡೆಯಾಗಲು ಕೀಲಿಕೈಯನ್ನು ಸಿದ್ಧೇಶ್ವರ ಸ್ವಾಮಿಗಳು ನೀಡಿದ್ದಾರೆ. ವಿಶ್ವ ಮತ್ತು ನಾಗರಿಕತೆಗೆ ಒಪ್ಪುವಂತಹ ಚಿಂತನೆಗಳಿಂದ ಮಾತ್ರ ನಿಮ್ಮ ಬದುಕು ಶ್ರೀಮಂತಿಕೆ ಪಡೆಯುತ್ತದೆ ಹಾಗೂ ಸತ್ಯ ಶೋಧನೆ ನಿಮ್ಮ ಬದುಕಿನಲ್ಲಿ ಇರಬೇಕೆಂಬ ಸಂದೇಶವನ್ನು ಶ್ರೀಗಳು ನೀಡಿದ್ದಾರೆ ಎಂದು ಸ್ಮರಿಸಿದರು.

ಇದೇ ಸಂದರ್ಭದಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ ಮೈಸೂರು ಗ್ರಾಮಾಂತರ ಸರ್ಕಾರಿ ಪ್ರಾಥಮಿಕ ಶಾಲೆಯ ಐದವರು ಶಿಕ್ಷಕರಿಗೆ ತಲಾ 10 ರೂ. ಗೌರವ ಧನ ನೀಡಿ ಸನ್ಮಾನಿಸಲಾಯಿತು. ಮರಯ್ಯನಹುಂಡಿ ಶಾಲೆಯ ಜಿ.ಹೇಮಲತಾ, ಕಡಕೊಳ ಶಾಲೆಯ ಪಿ.ಮಹಾಲಕ್ಷ್ಮೀ, ನಾಗವಾಲ ಶಾಲೆಯ ಟಿ.ಎನ್.ಶಿವಮಲ್ಲಯ್ಯ, ಚಟ್ನಳ್ಳಿ ಶಾಲೆಯ ಕುಮುದ, ರಾಮೇನಹಳ್ಳಿ ಶಾಲೆಯ ಭಾಗ್ಯಮ್ಮ ಸನ್ಮಾನಿತರಾದ ಶಿಕ್ಷಕರು. ಅಲ್ಲದೆ, 1000 ಮುದ್ದುರಾಮ ಚಿತ್ರ ಚೌಪದಿಗಳ ಸಂಯೋಜಕ ವಿಶ್ವನಾಥ್ ಬಳುವನೇರಲು ಅವರನ್ನು ಸನ್ಮಾನಿಸಲಾಯಿತು.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಸಾನಿಧ್ಯ ವಹಿಸಿದ್ದರು. ಮುದ್ದುರಾಮ ಪ್ರತಿಷ್ಠಾನದ ಅಧ್ಯಕ್ಷ ಕೆ.ಸಿ.ಶಿವಪ್ಪ, ನಿವೃತ್ತ ಪ್ರಾಧ್ಯಾಪಕ ಪ್ರೊ.ನೀಲಗಿರಿ ತಳವಾರ್, ಮಹಾಲಕ್ಷ್ಮೀ ಸ್ವೀಟ್ಸ್‌ನ ಶಿವಕುಮಾರ್ ಮತ್ತಿತರರು ಹಾಜರಿದ್ದರು.

ಪ್ರಜ್ವಲ್ ರೇವಣ್ಣ ಅನರ್ಹತೆ ಪ್ರಕರಣ: ಆಕ್ಷೇಪಣೆ ಸಲ್ಲಿಸಲು ಹೈಕೋರ್ಟ್ ಸೂಚನೆ



ಬೆಂಗಳೂರು: ಹಾಸನ ಲೋಕಸಭಾ ಕ್ಷೇತ್ರದಿಂದ ತಮ್ಮ ಸಂಸದ ಆಯ್ಕೆಯನ್ನು ಅಸಿಂಧುಗೊಳಿಸಿರುವ ಆದೇಶಕ್ಕೆ ತಡೆ ನೀಡುವಂತೆ ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಅರ್ಜಿದಾರ ಜಿ. ದೇವರಾಜೇಗೌಡ ಅವರಿಗೆ ಹೈಕೋರ್ಟ್ ಕಾಲಾವಕಾಶ ನೀಡಿದೆ.

ಈ ಕುರಿತಂತೆ ಪ್ರಜ್ವಲ್ ಪರ ವಕೀಲರು ಮಂಗಳವಾರ ಬೆಳಗ್ಗೆ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಹಾಜರಾಗಿ, ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಕೋರಿದರು.


ಸುಪ್ರಿಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು. ಅಲ್ಲಿಯವರೆಗೆ ಅಸಿಂಧು ಆದೇಶಕ್ಕೆ ತಡೆ ನೀಡಬೇಕು ಎಂದು ಕೋರಿದರು. ಈ ವೇಳೆ ಹಾಜರಿದ್ದ ಮೂಲ ಅರ್ಜಿದಾರ ಜಿ. ದೇವರಾಜೇಗೌಡ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಅವರು, ಅಸಿಂಧು ಆದೇಶಕ್ಕೆ ತಡೆ ನೀಡಬಾರದು ಎಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿತು.

ರಾಷ್ಟ್ರೀಯ ಟ್ಯಾಲೆಂಟ್ ಹಂಟ್ ಪರೀಕ್ಷೆ ANTHE ಆರಂಭ



ಮೈಸೂರು, ಸೆ.5–ಮೈಸೂರಿನ ಆಕಾಶ್ ಬೈಜೂಸ್ ತನ್ನ ಜನಪ್ರಿಯ ANTHE (ಆಕಾಶ್ ರಾಷ್ಟ್ರೀಯ ಟ್ಯಾಲೆಂಟ್ ಹಂಟ್ ಪರೀಕ್ಷೆ) 14ನೇ ಆವೃತ್ತಿಯನ್ನು ಅನಾವರಣಗೊಳಿಸಿತು. ವಾರ್ಷಿಕ ವಿದ್ಯಾರ್ಥಿ ವೇತನ ಪರೀಕ್ಷೆಯು VII-XII ತರಗತಿಯ ವಿದ್ಯಾರ್ಥಿಗಳಿಗೆ 100%ವರೆಗಿನ ವಿದ್ಯಾರ್ಥಿ ವೇತನಗಳು ಮತ್ತು ನಗದು ಪ್ರಶಸ್ತಿಗಳೊಂದಿಗೆ ತಮ್ಮ ಸಾಮರ್ಥ್ಯವನ್ನು ಬಹಿರಂಗಪಡಿಸುವ ಅವಕಾಶವನ್ನು ಒದಗಿಸುತ್ತಿದೆ. ಇದರ ಜೊತೆಗೆ ವೈದ್ಯಕೀಯ ಅಥವಾ ಇಂಜಿನಿಯರಿಂಗ್‌ನಲ್ಲಿ ಭರವಸೆಯ ಭವಿಷ್ಯದ ಕನಸುಗಳತ್ತ ಯುವ ಮನಸ್ಸುಗಳನ್ನು ಮೇಲಕ್ಕೆತ್ತಲು ಸಬಲೀಕರಣಗೊಳಿಸುವುದು ಇದರ ಉದ್ದೇಶವಾಗಿದೆ. ಪರೀಕ್ಷೆಯು ಆನ್‌ಲೈನ್ ಮತ್ತು ಆಫ್ ಲೈನ್ ಮೋಡ್‌ನಲ್ಲಿ ಅ.7ರಿಂದ 15ರವರೆಗೆ ನಡೆಯಲಿದೆ. ANTHE ಆನ್‌ಲೈನ್ ಎಲ್ಲಾ ಪರೀಕ್ಷೆಯ ದಿನಗಳಲ್ಲಿ ಬೆಳಗ್ಗೆ 10ರಿಂದ ರಾತ್ರಿ 9ರ ನಡುವೆ ನಡೆಯಲಿದೆ. ಆದರೆ ಆಫ್‌ಲೈನ್ ಪರೀಕ್ಷೆಗಳನ್ನು ಅಕ್ಟೋಬರ್ 8 ಮತ್ತು 15 ಎರಡು ಪಾಳಿಗಳಲ್ಲಿ ನಡೆಸಲಾಗುವುದು. ಬೆಳಗ್ಗೆ 10.30 ರಿಂದ 11:30 ರವರೆಗೆ ಮತ್ತು ಸಂಜೆ 4ರಿಂದ–5ರವರೆಗೆ ದೇಶದಾದ್ಯಂತ ಎಲ್ಲಾ 315+ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ತಮಗೆ ಅನುಕೂಲಕರವಾದ ಒಂದು ಗಂಟೆಯ ಸ್ಲಾಟ್ ಅನ್ನು ಆಯ್ಕೆ ಮಾಡಬಹುದು.

ಹಿಂದೂ ಧರ್ಮ ಹುಟ್ಟಿದ್ದು ಯಾವಾಗ, ಯಾರು ಹುಟ್ಟಿಸಿದರು



ತುಮಕೂರು: ಸನಾತನ ಧರ್ಮದ ಕುರಿತು ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಹೇಳಿಕೆ ಇದೀಗ ತೀವ್ರ ಸ್ವರೂಪ ಪಡೆದುಕೊಂಡಿದೆ. ಈ ಮಧ್ಯೆ ಹಿಂದೂ ಧರ್ಮ ಹುಟ್ಟಿದ್ದು ಯಾವಾಗ, ಯಾರು ಹುಟ್ಟಿಸಿದರು ಎಂಬುದೇ ಪ್ರಶ್ನೆ ಎಂದು ಗೃಹ ಇಲಾಖೆ ಸಚಿವ ಜಿ. ಪರಮೇಶ್ವರ್ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಕೊರಟಗೆರೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಪರಮೇಶ್ವರ್, ಜಗತ್ತಿನಲ್ಲಿ ಅನೇಕ ಧರ್ಮಗಳು ಹುಟ್ಟಿಕೊಂಡಿವೆ. ಹಿಂದೂ ಧರ್ಮವನ್ನು ಹುಟ್ಟಿಸಿದ್ದು ಯಾರು, ಯಾವಾಗ ಹುಟ್ಟಿತು ಎಂಬುದು ಇನ್ನೂ ಪ್ರಶ್ನಾರ್ಥಕ ಚಿಹ್ನೆಯಾಗಿಯೇ ಉಳಿದಿದೆ ಎಂದರು. ಬೌದ್ಧ ಧರ್ಮ ಹಾಗೂ ಜೈನ ಧರ್ಮ ನಮ್ಮ ಭಾರತದಲ್ಲೇ ಹುಟ್ಟಿತ್ತು. ಹೊರಗಿನಿಂದ ಕ್ರೈಸ್ತ ಧರ್ಮ ಹಾಗೂ ಇಸ್ಲಾಂ ಬಂದಿವೆ. ಎಲ್ಲಾ ಧರ್ಮಗಳ ಸಾರಾಂಶ ಮನುಕುಲಕ್ಕೆ ಒಳ್ಳೆಯದ್ದು ಆಗಲಿ ಎಂಬುದೇ ಆಗಿದೆ ಎಂದು ಪರಮೇಶ್ವರ್ ಹೇಳಿದ್ದಾರೆ. ಉದಯನಿಧಿ ಸ್ಟಾಲಿನ್ ಹೇಳಿಕೆಗೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿದ್ದರೆ ಇತ್ತ ಕಾಂಗ್ರೆಸ್ ಅಂತರ ಕಾಯ್ದುಕೊಂಡಿದ್ದರೂ ಕೆಲ ನಾಯಕರು ಮಾತ್ರ ಪರವಾಗಿ ಮಾತನಾಡುತ್ತಿದ್ದಾರೆ.

ಶಿಕ್ಷಕರ ವೃತ್ತಿ ಶ್ರೇಷ್ಠವಾದದ್ದು, ಅವರೇ ದೇಶದ ಅಮೂಲ್ಯ ಆಸ್ತಿ



ಮೈಸೂರು, ಸೆ. 5–ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ದೇಶ ಮುನ್ನಡೆಯಲು ಶಿಕ್ಷಕರ ಪಾತ್ರ ಹಾಗೂ ಕೊಡುಗೆ ಬಹು ಮುಖ್ಯವಾದದ್ದು ಎಂದು ಕೆಪಿಸಿಸಿ ರಾಜ್ಯ ಕಾರ್ಯದರ್ಶಿ ಗುರುಪಾದಸ್ವಾಮಿ ಹೇಳಿದರು.

ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ರಾಷ್ಟ್ರೀಯ ಶಿಕ್ಷಕರ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಶಿಕ್ಷಕರಿಗೆ ಗುರು ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಶಿಕ್ಷಕರ ವೃತ್ತಿ ಮಹತ್ವವಾದದ್ದು. ಜಗತ್ತಿನಲ್ಲಿ ಯಾವುದಕ್ಕೆ ಬೇಕಾದರೂ ಬೆಲೆ ಕಟ್ಟಬಹುದು, ಆದರೆ ಶಿಕ್ಷಣ ಮತ್ತು ಶಿಕ್ಷಕರಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಶಿಕ್ಷಕರು ದೇಶದ ಆಸ್ತಿ ಇದ್ದಂತೆ. ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯವಾಗಿದೆ. ಹಾಗಾಗಿ ಶಿಕ್ಷಕ ವೃತ್ತಿ ಎಲ್ಲ ವೃತ್ತಿಗಳಿಗಿಂತಲೂ ಶ್ರೇಷ್ಠ ವೃತ್ತಿಯಾಗಿದೆ ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಆರ್.ಹೆಚ್ ಪವಿತ್ರ, ಇಂದು ನಮಗೆ ವಿದ್ಯೆ ಹೇಳಿಕೊಟ್ಟ ಗುರುಗಳು ಶ್ರೇಷ್ಠ. ಹಾಗೆಯೇ ನಮಗೆ ಜೀವನದಲ್ಲಿ ಮಾರ್ಗದರ್ಶನ ಮಾಡುವ ಗುರುಗಳು ಕೂಡ ಶ್ರೇಷ್ಠ. ಕ್ರೀಡಾ, ಸಾಮಾಜಿಕ, ಶೈಕ್ಷಣಿಕ ಮುಂತಾದ ವಿಧಗಳಲ್ಲಿ ಪ್ರತಿಯೊಬ್ಬರು ಕೂಡ ಗುರುಗಳ ಮೇಲೆ ಅವಲಂಬಿತರಾಗಿರುವುದು ಸಹಜ. ಹಿರಿಯರು ಹೇಳಿದಂತೆ ಗುರು ದೇವೋಭವ ಎಂದರೆ ಅದರ ಶಕ್ತಿಯೇ ನಮಗೆ ಸ್ಫೂರ್ತಿಯಾಗಿರುತ್ತದೆ. ಆದ್ದರಿಂದ ಇಂದಿನ ಪೀಳಿಗೆಯ ಮಕ್ಕಳು ಗುರುಸ್ಥಾನದಲ್ಲಿರುವ ಹಿರಿಯರಿಗೆ ಹೆಚ್ಚಿನ ಗೌರವ ಕೊಡುವ ಮೂಲಕ ಮತ್ತು ನಾನಾ ಸಂಘ ಸಂಸ್ಥೆಗಳು ಹಿರಿಯರನ್ನು ಗೌರವಿಸುವ ಮೂಲಕ ಬೇರೆಯವರಿಗೆ ಮಾದರಿಯಾಗಲಿ ಎಂದರು. ಆರ್.ಎಚ್. ಪವಿತ್ರ (ಶಿಕ್ಷಣ ಕ್ಷೇತ್ರ), ಎನ್.ದೀಪಾ (ಶಿಕ್ಷಣ ಕ್ಷೇತ್ರ), ಅಕ್ಷಯ್ ಮಹಂತ್ (ಕ್ರೀಡಾ ಕ್ಷೇತ್ರ), ವಿದ್ವಾನ್ ಎಸ್ ಕೃಷ್ಣಮೂರ್ತಿ (ಧಾರ್ಮಿಕ ಕ್ಷೇತ್ರ), ಯೋಗಾಚಾರ್ಯ ಬಿ. ಶಾಂತರಾಮ್ (ಯೋಗ ಕ್ಷೇತ್ರ), ವಿದುಷಿ ಎಸ್ ಎನ್ ಮೇಘನಾ ರಾವ್ (ಕಲಾ ಕ್ಷೇತ್ರ), ಅಶ್ವಿನಿ ಪಿ.ಗೌಡ (ಬ್ಯೂಟಿಷಿಯನ್ ಕ್ಷೇತ್ರ) ಅವರಿಗೆ ಗುರು ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಿವಮೊಗ್ಗ ನಗರದ ಮಾಜಿ ನಗರ ಪಾಲಿಕೆ ಸದಸ್ಯರಾದ ಗೌರಿ, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷರಾದ ರೇಖಾ ಶ್ರೀನಿವಾಸ, ಹೊಯ್ಸಳ ಟ್ರಸ್ಟ್ ಅಧ್ಯಕ್ಷ ಎಂ.ಪಿ.ರಾಜೇಶ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸವಿತಾ ಘಾಟ್ಕೆ, ರಶ್ಮಿ, ಸದಾಶಿವ್, ಪಲ್ಲವಿ, ಸುರೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಶಿಕ್ಷಕರ ದಿನಾಚರಣೆ: 43 ಶಿಕ್ಷಕರಿಗೆ ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ

ಬೆಂಗಳೂರು, ಸೆ.5– ಭಾರತ ರತ್ನ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮ ದಿನದ ಅಂಗವಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆ ಜಂಟಿಯಾಗಿ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಉದ್ಘಾಟಿಸಿದರು. ಬಳಿಕ 2023–24ನೇ ಸಾಲಿನ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ 43 ಶಿಕ್ಷಕರಿಗೆ ಸಿಎಂ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗಾಗಿ ಪ್ರೌಢಶಾಲಾ ವಿಭಾಗದಿಂದ ಧಾರವಾಡದ ಸುರೇಶ್ ಮುಗಳಿ ಸೇರಿದಂತೆ 11 ಶಿಕ್ಷಕರನ್ನು ಆಯ್ಕೆ ಮಾಡಲಾಗಿದ್ದು, ಪ್ರಾಥಮಿಕ ಶಾಲಾ ವಿಭಾಗದಿಂದ 20 ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಉತ್ತಮ ಶಿಕ್ಷಕರ ಪಟ್ಟಿಯಲ್ಲಿರುವ ಮಹಿಳಾ ಶಿಕ್ಷಕರುಗಳಿಗೆ ಅಕ್ಷರ ಮಾತೆ ಸಾವಿತ್ರಿಬಾಯಿ ಫುಲೆ ಇವರ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಾಸಕರಾದ ರಿಜ್ವಾನ್ ಅರ್ಷದ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಉನ್ನತ ಶಿಕ್ಷಣ ಸಚಿವರಾದ ಡಾ. ಎಂ.ಸಿ.ಸುಧಾಕರ್ ಸೇರಿದಂತೆ ಹಲವು ಮಂದಿ ಹಾಲಿ, ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

ನಿಗಮ ಮಂಡಳಿಗಳಲ್ಲಿ ಶಾಸಕರಿಗೆ ಮೊದಲ ಆದ್ಯತೆ: ಉಳಿದವು ಕಾರ್ಯಕರ್ತರಿಗೆ

- 15ಕ್ಕೂ ಅಧಿಕ ಶಾಸಕರಿಗೆ ನಿಗಮ ಮಂಡಳಿ ಅಧ್ಯಕ್ಷಗಿರಿ
- ಎರಡೂವರೆ ವರ್ಷ ಅಧಿಕಾರಾವಧಿ
- ಸೆ. 7ರಂದು ಭಾರತ್ ಜೋಡೋಗೆ ವರ್ಷ; ರಾಮನಗರದಲ್ಲಿ ಪಾದಯಾತ್ರೆ



ಬೆಂಗಳೂರು, ಸೆ.5(ಕೆಎಂಶಿ)– ಪಕ್ಷದ 15 ಶಾಸಕರೂ ಸೇರಿದಂತೆ ಕಾರ್ಯಕರ್ತರಿಗೆ ನಿಗಮ–ಮಂಡಳಿಗಳ ಅಧ್ಯಕ್ಷ ಸ್ಥಾನಗಳಿಗೆ ಅವಕಾಶ ಮಾಡಿಕೊಡುವುದಾಗಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ನಿಗಮ–ಮಂಡಳಿಗಳಿಗೆ ಶಾಸಕರು ಆಸಕ್ತಿ ತೋರುತ್ತಿಲ್ಲ. 15 ರಿಂದ 20 ಮಂದಿ ಮಾತ್ರ ಪದವಿ ಕೇಳುತ್ತಿದ್ದಾರೆ. ಅವರಿಗೂ ಅವಕಾಶ ಮಾಡಿಕೊಟ್ಟು ಉಳಿದವನ್ನು ಕಾರ್ಯಕರ್ತರಿಗೆ ನೀಡಲಾಗುವುದು ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಮಾತ್ರ ಮಂತ್ರಿಯಾಗಿ, ಶಾಸಕರುಗಳಿಗೆ ಅಧಿಕಾರ ಸಿಗದಿದ್ದರೆ ತಪ್ಪಲ್ಲವೇ, ಎಲ್ಲರಿಗೂ ಅವಕಾಶ ಸಿಕ್ಕೇ ಸಿಗುತ್ತದೆ ಎಂದರು. ನಿಗಮ–ಮಂಡಳಿಗಳಿಗೆ ನೇಮಕಗೊಂಡವರ ಅವಧಿ ಎರಡೂವರೆ ವರ್ಷ. ಈ ತಿಂಗಳ 7ಕ್ಕೆ ಭಾರತ್ ಜೋಡೊ ಯಾತ್ರೆಗೆ 1 ವರ್ಷ ತುಂಬುತ್ತದೆ. ಇದರ ನೆನಪಿಗಾಗಿ ಪಾದಯಾತ್ರೆಯನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಬೇಕು ಎನ್ನುವ ಯೋಚನೆ ಇತ್ತು. ಬೆಂಗಳೂರಿನಲ್ಲಿ ಟ್ರಾಫಿಕ್ ಸಮಸ್ಯೆ ಆಗುತ್ತದೆ ಎನ್ನುವ ಕಾರಣಕ್ಕೆ ರಾಮನಗರದಲ್ಲಿ ಮಾಡುತ್ತಿದ್ದೇವೆ.

ಮುಖ್ಯಮಂತ್ರಿಗಳು ಅಂದು ನಮ್ಮ ಜೊತೆ ಹೆಜ್ಜೆ ಹಾಕಲಿದ್ದಾರೆ. ಅದೇ ದಿನ ಸಚಿವ ಸಂಪುಟ ಸಭೆ ಇರುವ ಕಾರಣ ಇತರೇ ಮಂತ್ರಿಗಳಿಗೆ ಸೆ.8 ರಂದು ಮಾಡಬಹುದು ಎಂದು ಸೂಚನೆ ನೀಡಿದ್ದೇವೆ. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಒಂದು ಗಂಟೆ ಕಾಲ ಸಂಜೆ 5 ರಿಂದ 6 ಗಂಟೆಯ ತನಕ ಈ ಕಾರ್ಯಕ್ರಮ ನಡೆಯಲಿದೆ ಎಂದರು.

ರಾಜ್ಯಪಾಲರ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ ಸೃಷ್ಟಿ: ತನಿಖೆ ಆರಂಭ

ಬೆಂಗಳೂರು, ಸೆ.5– ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರ ಫೋಟೋ ಮತ್ತು ಹೆಸರು ಬಳಸಿ ಸಾಮಾಜಿಕ ಜಾಲತಾಣದಲ್ಲಿ ನಕಲಿ ಖಾತೆ ತೆರೆಯಲಾಗಿದ್ದು, ಈ ಬಗ್ಗೆ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಅಪರಿಚಿತ ವ್ಯಕ್ತಿಗಳು ನಕಲಿ ಪ್ರೊಫೈಲ್ ಸೃಷ್ಟಿಸಿ ರಾಜ್ಯಪಾಲರ ಹೆಸರನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಪ್ರಭುಶಂಕರ್ ಆರ್. ಅವರು ಆಗಸ್ಟ್ 31 ರಂದು ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದಾರೆ. ದೂರಿನ ಆಧಾರದ ಮೇಲೆ, ಸೈಬರ್ ಕ್ರೈಂ ಪೊಲೀಸರು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿಯಲ್ಲಿ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿದ್ದು, ತನಿಖೆ ಆರಂಭಿಸಿದ್ದಾರೆ.

ಹಿಂದೆ ಶಿಕ್ಷಣ ಸನಾತನವಾದಿಗಳ ಸ್ವತ್ತಾಗಿತ್ತು...!



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ, 32 ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಪುರಸ್ಕರಿಸಿದರು. ತರುವಾಯ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಒಂದನೇ ಪುಟದಿಂದ

ಸನಾತನವಾದಿಗಳ ಆಳಾಗಿ ಕೆಲಸ ಮಾಡಬೇಕಾಗಿತ್ತು ಎಂದು ರಾಷ್ಟ್ರಕವಿ ಕುವೆಂಪು ಕೂಡ ಹೇಳಿದ್ದರು ಎಂದು ಡಾ.ಮಹದೇವಪ್ಪ ತಿಳಿಸಿದರು.

ಭಾರತ ಸ್ವಾತಂತ್ರ್ಯ ಗಳಿಸಿದ ನಂತರ ಸುಬ್ರಹ್ಮಣ್ಯಂ ನೇತೃತ್ವದಲ್ಲಿ 1964 ರಲ್ಲಿ ನೂತನ ಶಿಕ್ಷಣ ನೀತಿ ಜಾರಿಯಾಯಿತು. ಮತ್ತೆ 1984ರಲ್ಲಿ ಮತ್ತೊಂದು ಶಿಕ್ಷಣ ನೀತಿ ಜಾರಿಗೊಂಡಿತು. ಹೀಗೆ ಲಂಬದ್ಧವಾದ ಶಿಕ್ಷಣ ದೊರೆತ ಕಾರಣ ಈಗ ಭಾರತದಲ್ಲಿ ಸಾಕ್ಷರತೆ ಪ್ರಮಾಣ ಶೇಕಡ 75ರಷ್ಟಕ್ಕೆ ಬಂದು ತಲುಪಿದೆ. ಆದರೆ ಇನ್ನೂ ಕೂಡ 100ರಷ್ಟು ಸಾಕ್ಷರತೆ ಸಾಧಿಸಲು ಸಾಧ್ಯವಾಗಿಲ್ಲ. ಹಾಗೊಂದು ವೇಳೆ ಪೂರ್ಣ ಪ್ರಮಾಣದ ಸಾಕ್ಷರತೆ ಇದ್ದಿದ್ದರೆ ಐರೋಪ್ಯ ರಾಷ್ಟ್ರಗಳನ್ನು ಮೀರಿಸುವಂತೆ ಭಾರತ ಅಭಿವೃದ್ಧಿ ಆಗುತ್ತಿತ್ತು ಎಂದು ಡಾ.ಮಹದೇವಪ್ಪ ಹೇಳಿದರು.


ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆಯಾಗಿದೆ. ಪ್ರತಿಯೊಬ್ಬರಿಗೂ ಗುರುಗಳು ಇದ್ದೇ ಇರುತ್ತಾರೆ. ನಾವು ಕಲಿಯುತ್ತಿದ್ದ ಶಿಕ್ಷಣ ಪದ್ಧತಿಗಿಂತ ಈಗಿನ ಶಿಕ್ಷಣ ವ್ಯವಸ್ಥೆ ಭಿನ್ನವಾಗಿದೆ. ವಿಜ್ಞಾನ ಹಾಗೂ ತಂತ್ರಜ್ಞಾನ ಬೋಧನೆಯ ರೀತಿಯೂ ಬೇರೆಯಾಗಿದೆ ಎಂದರು. ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಬಹಳಷ್ಟು ಸಾಧನೆ ಮಾಡಿದೆ. ಆದರೆ ಮಾನವೀಯ ಸಂಬಂಧಗಳ ನಡುವೆ ಸಾಮರಸ್ಯ ಇಲ್ಲದಂತಾಗಿದೆ. ಇದರಿಂದ ಮೌಲ್ಯಗಳು ಅಧಃಪತನವಾಗುತ್ತಿದೆ. ನ್ಯಾಯ ಹಾಗೂ ಸಮಾನತೆ ರೂಪಿಸಬೇಕಾದ ಧರ್ಮದಲ್ಲಿ ಭೇದ ಭಾವಗಳಿವೆ. ಒಬ್ಬರು ಮತ್ತೊಬ್ಬರನ್ನು ಅನುಮಾನದಿಂದ ನೋಡುವ ಪರಿಸ್ಥಿತಿ ಇದೆ. ಅಸಮಾನತೆ ಹೆಚ್ಚಾಗಿ ಸಂಬಂಧಗಳಲ್ಲಿ ಅಂತರ ಹೆಚ್ಚಾಗುತ್ತಿದೆ ಎಂದು ಡಾ.ಮಹದೇವಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಆದರೆ ಜಾತಿ, ಧರ್ಮ, ಭೇದ–ಭಾವದಿಂದ ಸಮಾಜವನ್ನು ಮುಕ್ತ ಮಾಡಿ ಸಮಾನತೆ ತರುವ ಗುರುತರ ಜವಾಬ್ದಾರಿ ಶಿಕ್ಷಕರ ಮೇಲಿದೆ. ಸಮಾಜದ ಬದಲಾವಣೆಯ ಜವಾಬ್ದಾರಿ ಶಿಕ್ಷಕರ ಹೊಣೆಗಾರಿಕೆಯಾಗಿದೆ. ಇದು ಸಾಕಾರಗೊಳ್ಳಲು ಡಾ.ಅಂಬೇಡ್ಕರ್ ಹೇಳಿದಂತೆ ವೈಚಾರಿಕತೆ ಹಾಗೂ ವೈಜ್ಞಾನಿಕ ತಳಹದಿಯ ಮೇಲೆ ಶಿಕ್ಷಣ ನೀಡಬೇಕು. ಆಗ ಸಮೃದ್ಧಿಯಾದ ದೇಶವನ್ನು ಕಟ್ಟಬಹುದು ಎಂದು ಡಾ.ಮಹದೇವಪ್ಪ ಅಭಿಪ್ರಾಯಪಟ್ಟರು.

ಇದೇ ವೇಳೆ ಡಾ.ಮಹದೇವಪ್ಪ, 32 ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ತರುವಾಯ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಸಿ.ಎನ್. ಮಂಜೇಗೌಡ, ಮರಿತಿಬ್ಬೇಗೌಡ, ಟಿ.ಎಸ್. ಶ್ರೀವತ್ಸ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ವಿಭಾಗೀಯ ಕಾರ್ಯದರ್ಶಿ ಭಾರತಿ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ.ಸೋಮೇಗೌಡ, ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಬಿ.ಅರುಣಕುಮಾರ, ಡಿಡಿಪಿಐ ಹೆಚ್.ಕೆ.ಪಾಂಡು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೆ.ಗೋವಿಂದರಾಜು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಮಾಸಾಂತ್ಯಕ್ಕೆ ಸಾವರ್ಕರ್ ಸಾಹಸ ಕುರಿತ 'ಕರಿನೀರ ವೀರ' ನಾಟಕ ಪ್ರದರ್ಶನ

- ರಂಗಕರ್ಮಿ ಅಡ್ಡಂಡ ಸಿ.ಕಾರ್ಯಪ್ಪ ನಿರ್ದೇಶನ
- ಭಾರತೀಯ ರಂಗ ಘಟಕದ ಮೂಲಕ ದೇಶಭಕ್ತಿ ಸಾರುವ, ತ್ಯಾಗ–ಬಲಿದಾನ ಸಾಕ್ಷಿಯೂ ಆದ ನಾಟಕ ಪ್ರದರ್ಶನ



ಸ್ವಾತಂತ್ರ್ಯ ಹೋರಾಟಗಾರ ವೀರ್ ಸಾವರ್ಕರ್

■ ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಸೆ. 5–'ಟಿಪ್ಪು ನಿಜಕನಸುಗಳು' ನಾಟಕದ ಯಶಸ್ವಿ ಪ್ರದರ್ಶನದ ಮೂಲಕ ರಂಗಭೂಮಿ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ್ದ ರಂಗಾಯಣ ಮಾಜಿ ನಿರ್ದೇಶಕ, ರಂಗಕರ್ಮಿ ಅಡ್ಡಂಡ ಸಿ.ಕಾರ್ಯಪ್ಪ ಇದೀಗ ಸ್ವಾತಂತ್ರ್ಯ ಹೋರಾಟಗಾರ ವೀರ್ ಸಾವರ್ಕರ್ ಜೀವನಾಧಾರಿತ 'ಕರಿನೀರ ವೀರ' ನಾಟಕವನ್ನು ರಂಗ ವೇದಿಕೆಗೆ ತರಲು ಸಿದ್ಧತೆ ಮಾಡಿಕೊಂಡು, ಮತ್ತೊಂದು ಸಾಹಸಕ್ಕೆ ಕೈ ಹಾಕಿದ್ದಾರೆ. ಈ ನಾಟಕ ಸೆಪ್ಟೆಂಬರ್ ಕೊನೇ ವಾರದಲ್ಲಿ ಮೈಸೂರಲ್ಲಿ ಮೊದಲ ಪ್ರದರ್ಶನ ಕಾಣಲಿದೆ. ಬಳಿಕ ಅಕ್ಟೋಬರ್‌ನಿಂದ ರಾಜ್ಯಾದ್ಯಂತ ಪ್ರದರ್ಶನಗೊಳ್ಳಲಿದೆ.

ನೂತನ ರಂಗವೇದಿಕೆ: ರಾಷ್ಟ್ರೀಯ ಚಿಂತನೆ, ದೇಶಭಕ್ತಿ, ರಾಷ್ಟ್ರೀಯ ಕಲ್ಪನೆಯ ಬಗ್ಗೆ ನಾಟಕ ಪ್ರದರ್ಶಿಸುವ ಮೂಲಕ ಜನರಲ್ಲಿ ದೇಶಭಕ್ತಿ ಹೆಚ್ಚಿಸುವ ಸಲುವಾಗಿ 'ಭಾರತೀಯ ರಂಗ ಘಟಕ' ಸ್ಥಾಪಿಸಲಾಗಿದ್ದು, ವೇದಿಕೆಯಡಿ 'ಕರಿನೀರ ವೀರ' ಮೊದಲ ಪ್ರದರ್ಶನ ಕಾಣಲಿದೆ. ಈ ನಾಟಕ ಒಂದು ವರ್ಷದ ಯೋಜನೆಯಾಗಿದ್ದು, 15 ಕಲಾವಿದರು ಹಾಗೂ ಇಬ್ಬರು ತಾಂತ್ರಿಕ ಸಿಬ್ಬಂದಿ ತೊಡಗಿಸಿಕೊಂಡಿದ್ದಾರೆ.

ಸಾವರ್ಕರ್ ಪ್ರತಿಷ್ಠಾನ ಸಾಥ್: ಸಂಘ ಪರಿವಾರದ ಅಂಗಸಂಸ್ಥೆಯಾಗಿರುವ ಮೈಸೂರಿನ ಸಾವರ್ಕರ್ ಪ್ರತಿಷ್ಠಾನವು ರಂಗಕರ್ಮಿ ಅಡ್ಡಂಡ ಸಿ.ಕಾರ್ಯಪ್ಪ ನೇತೃತ್ವದ 'ಭಾರತೀಯ ರಂಗ ಘಟಕ'ಕ್ಕೆ ಸಾಥ್ ನೀಡಿ, ಸಾವರ್ಕರ್ ಜೀವನ ಚರಿತ್ರೆಯ 'ಕರಿನೀರ ವೀರ' ನಾಟಕ ಪ್ರದರ್ಶನಕ್ಕೆ ಒತ್ತಾಸೆಯಾಗಿದೆ. ಪ್ರತಿಷ್ಠಾನದ ಅಧ್ಯಕ್ಷೆ ಡಾ.ಯಶಸ್ವಿನಿ, ಖಜಾಂಚಿ ಸಂದೇಶ್, ಕಾರ್ಯದರ್ಶಿ ರಜತ್ ಹಾಗೂ ಶಿವಕುಮಾರ್ ನಾಟಕ ಪ್ರದರ್ಶನಕ್ಕೆ ಬೆನ್ನೆಲುಬಾಗಿದ್ದಾರೆ.

ಸಂಭಾವನೆ ನೀಡಿ ಕಲಾವಿದರ ಆಯ್ಕೆ: ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅಡ್ಡಂಡ ಸಿ.ಕಾರ್ಯಪ್ಪ, ಸಾವರ್ಕರ್ ಪ್ರತಿಷ್ಠಾನದ ಸಹಕಾರ ಹಾಗೂ ಸಂಘ ಪರಿವಾರದ ಬೆಂಬಲದಿಂದ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಸಾವರ್ಕರ್ ಜೀವನದ ಸತ್ಯ ಸಂಗತಿ ಒಳಗೊಂಡ ಕಥೆಯನ್ನು ನಾಟಕ ರೂಪದಲ್ಲಿ ಜನರ ಮುಂದಿಡಲು 'ಕರಿನೀರ ವೀರ' ನಾಟಕ ರಚಿಸಲಾಗಿದೆ. ಈ ನಾಟಕದಲ್ಲಿ ಬರುವ ಎಲ್ಲಾ ಪಾತ್ರಗಳಿಗೂ ಜೀವ ತುಂಬುವ ನಿಟ್ಟಿನಲ್ಲಿ ರಂಗಾಯಣ, ನೀನಾಸಂ, ಸಾಣೆಹಳ್ಳಿ, ನಟನ, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆ ವಿವಿಯಲ್ಲಿ ನಟನೆಯ ಬಗ್ಗೆ ಒಂದು ವರ್ಷದ ಡಿಪ್ಲೊಮಾ ಕೋರ್ಸ್ ಮಾಡಿರುವ 15 ಮಂದಿ ಯುವ ಕಲಾವಿದರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಕಲಾವಿದರಿಗೆ ಮಾಸಿಕ 15 ಸಾವಿರ ರೂ. ಸಂಭಾವನೆ, ಊಟ, ವಸತಿ ಸೌಲಭ್ಯ ನೀಡಿ, ಆ.1ರಿಂದ ಉದ್ದೇಶಿತ ಕಾರ್ಯ ಯೋಜನೆ ಆರಂಭಿಸಲಾಗಿದೆ. ತಾವು ನಾಟಕ ನಿರ್ದೇಶಕರಾಗಿದ್ದು, ಪತ್ನಿ ಅನಿತಾ ಕಾರ್ಯಪ್ಪ ಅವರು ವ್ಯವಸ್ಥಾಪಕಿ ಹಾಗೂ ಪಾತ್ರಧಾರಿ ಆಗಿಯೂ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಕಾರ್ಯಪ್ಪ ವಿವರಿಸಿದರು.

ರಾಜ್ಯದಲ್ಲಿ 75 ಪ್ರದರ್ಶನ: 'ಕರಿನೀರ ವೀರ' ನಾಟಕದ ಪೂರ್ವ ರಂಗ ವಿಭಾಗದಲ್ಲಿ ಕಲಿಕೆ, ತಾಲೀಮು ಬೋಗಾದಿಯ ಶ್ರೀ ಸಾಯಿ ಸರಸ್ವತಿ ವಿದ್ಯಾಕೇಂದ್ರದಲ್ಲಿ ನಡೆಯುತ್ತಿದೆ. ಸೆಪ್ಟೆಂಬರ್ ಕೊನೆ ವಾರದಲ್ಲಿ ಮೈಸೂರಲ್ಲಿ ನಾಟಕದ ಮೊದಲ ಪ್ರದರ್ಶನದ ಬಳಿಕ ಅಕ್ಟೋಬರ್‌ನಿಂದ ತಮ್ಮ ತಂಡದ ರಾಜ್ಯ ಪ್ರವಾಸ ಆರಂಭವಾಗಲಿದ್ದು, ರಾಜ್ಯದಾದ್ಯಂತ 75 ಪ್ರದರ್ಶನ ಆಯೋಜಿಸಲು ಉದ್ದೇಶಿಸಲಾಗಿದೆ. ಈಗಾಗಲೇ 10–20 ಸ್ಥಳಗಳಿಂದ ನಾಟಕ ಪ್ರದರ್ಶನಕ್ಕೆ ಆಹ್ವಾನ ಬಂದಿದೆ.

ಸಾವರ್ಕರ್ ಕುರಿತ ಪುಸ್ತಕ: 'ಟಿಪ್ಪು ನಿಜಕನಸುಗಳು' ನಾಟಕಕ್ಕೂ ಮೊದಲು ಈ ಸಂಬಂಧ ಪುಸ್ತಕ ಬಿಡುಗಡೆ ಮಾಡಿದಂತೆ 'ಕರಿನೀರ ವೀರ' ದೇಶದ ಸಾಕ್ಷಿ ಪ್ರಜ್ಞೆ ಸಾವರ್ಕರ್ ಹೆಸರಲ್ಲಿ ಪುಸ್ತಕ ಬರೆದಿದ್ದೇನೆ. ಈ ಪುಸ್ತಕ ರೋಹಿತ್ ಚಕ್ರತೀರ್ಥ ಅವರ ಪ್ರಕಾಶನ ಸಂಸ್ಥೆಯಲ್ಲಿ ಮುದ್ರಣಗೊಳ್ಳುತ್ತಿದೆ. ನಾಟಕಕ್ಕೂ 15 ದಿನ ಮೊದಲು ಸಾವರ್ಕರ್ ಪುಸ್ತಕವನ್ನು ಧಾರವಾಡದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರಿಂದ ಬಿಡುಗಡೆ ಮಾಡಿಸಬೇಕೆಂಬ ಉದ್ದೇಶವಿದೆ. ಬಳಿಕ ಮೈಸೂರಲ್ಲಿ ವಿಚಾರ ಸಂಕಿರಣ ಆಯೋಜಿಸಲಾಗುತ್ತದೆ. ಟಿಪ್ಪು ನಿಜಕನಸುಗಳು ವಿಚಾರ ಸಂಕಿರಣ ಹಾಗೂ ಪುಸ್ತಕ ಬಿಡುಗಡೆ ಮಾಡಿದಂತೆ ಸಾವರ್ಕರ್ ಪುಸ್ತಕವೂ ಬಿಡುಗಡೆಯಾಗಲಿದೆ ಎಂದು ತಿಳಿಸಿದರು.

ಉತ್ತಮ ಪ್ರತಿಕ್ರಿಯೆ: 'ಕರಿನೀರ ವೀರ' ನಾಟಕವನ್ನು ನಾನು ನಾಲ್ಕೈದು ಜನರನ್ನು ಸೇರಿಸಿ ಓದಿದೆ. ಈ ವೇಳೆ ಅಲ್ಲಿದ್ದ ಸಾಹಿತ್ಯಾಸಕ್ತರು, ರಂಗಾಸಕ್ತರು ನಾಟಕ ಮಾಡುವಂತೆ ಸಲಹೆ ನೀಡಿದರು. ಹೀಗಾಗಿ ಅದನ್ನು ಕಾರ್ಯರೂಪಕ್ಕೆ ತಂದಿರುವುದಾಗಿ ಕಾರ್ಯಪ್ಪ ಹೇಳಿದರು.



ರಂಗಾಯಣ ಮಾಜಿ ನಿರ್ದೇಶಕ, ರಂಗಕರ್ಮಿ ಅಡ್ಡಂಡ ಸಿ.ಕಾರ್ಯಪ್ಪ ಅವರೊಂದಿಗೆ 'ಕರಿನೀರ ವೀರ' ನಾಟಕದ ತಾಲೀಮಿನಲ್ಲಿ ಪಾತ್ರಧಾರಿಗಳು.

ರಂಗಭೂಮಿಯಲ್ಲಿ ಸಂಚಲನ: 'ಟಿಪ್ಪು ನಿಜಕನಸುಗಳು' ನಾಟಕ ಕನ್ನಡ ರಂಗಭೂಮಿ ಕ್ಷೇತ್ರದಲ್ಲಿ ಸಂಚಲನ ಉಂಟು ಮಾಡಿತು. ಕೆಲ ವಿವಾದಗಳು ಸೃಷ್ಟಿಯಾದರೂ ಅದನ್ನು ಬದಿಗೊತ್ತಿ, ನಾಟಕ ಯಶಸ್ವಿಯಾಗಿ ಪ್ರದರ್ಶನ ಕಂಡಿತು. ನಾಟಕ ವೀಕ್ಷಿಸಲು ರಾಜ್ಯದಾದ್ಯಂತ ಜನ ತಂಡೋಪತಂಡವಾಗಿ ಆಗಮಿಸಿದರು. ಅದು ಕನ್ನಡ ರಂಗಭೂಮಿಯ ಯಶಸ್ಸು. ನಾಟಕ ನೋಡಿ ಜನರಿಗೆ ಖುಷಿಯಾಗಬೇಕು. ಹುಚ್ಚೆದ್ದು ಜನ ನಾಟಕ ನೋಡಲು ಬರಬೇಕು. ಅಂತಹ ವಾತಾವರಣ ಸೃಷ್ಟಿಸಲು 'ಕರಿನೀರ ವೀರ' ನಾಟಕ ಸಿದ್ಧಪಡಿಸಲಾಗಿದೆ ಎಂದರು.

'ಕರಿನೀರ ವೀರ' ನಾಟಕ 2.30 ಗಂಟೆ ಅವಧಿಯದ್ದಾಗಿದ್ದು, 11 ದೃಶ್ಯಗಳನ್ನು ಒಳಗೊಂಡಿದೆ. ಸಾವರ್ಕರ್ ಮಹಾತ್ಮಗಾಂಧಿ, ಡಾ.ಅಂಬೇಡ್ಕರ್ ಅವರಿಗಿಂತಲೂ ಮೊದಲು ಅಸ್ಪೃಶ್ಯತಾ ನಿವಾರಣಾ ಅಭಿಯಾನವನ್ನು ಆರಂಭಿಸಿದ್ದು, ದಲಿತರನ್ನು ದೇವಾಲಯಕ್ಕೆ ಪ್ರವೇಶಿಸಲು ಅವಕಾಶ, ಸಹಭೋಜನ ಪದ್ಧತಿ ಮಾಡಿದ್ದರು. ಈ ನಾಟಕದಲ್ಲಿ ಅವುಗಳ ಅನಾವರಣಗೊಳ್ಳಲಿದೆ ಎಂದು ವಿವರಿಸಿದರು.

1 ಕೋಟಿ ರೂ. ಯೋಜನೆ: ಸಾವರ್ಕರ್ ನಾಟಕದ ಯೋಜನೆಗೆ ಅಂದಾಜು 1 ಕೋಟಿ ರೂ. ಖರ್ಚಾಗಲಿದೆ. ಶೂನ್ಯದಿಂದ ಈ ಯೋಜನೆ ಆರಂಭಿಸಿದ್ದೇವೆ. ಜನರ ಸಹಾಯದ ನಿರೀಕ್ಷೆಯಲ್ಲಿದ್ದೇವೆ. ನಾವು ಕೂಡ ನಾಟಕದಿಂದ ಹಣ ಸಂಪಾದಿಸುತ್ತೇವೆ. ಟಿಪ್ಪು ನಿಜಕನಸುಗಳು ನಾಟಕಕ್ಕೆ ಈ ಹಿಂದಿನ ಸರ್ಕಾರ ಐದು ಪೈಸೆ ನೆರವು ನೀಡಲಿಲ್ಲ. ಆದರೆ, ಜನರು ಟಿಕೆಟ್ ಖರೀದಿಸಿ ನೆರವು ನೀಡಿದರು. ಇದರಿಂದ 50 ಲಕ್ಷ ಸಂಗ್ರಹವಾಯಿತು. ಅದೇ ಮಾದರಿಯಲ್ಲಿ ಸಾವರ್ಕರ್ ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸುವ ಆಶಯವಿದೆ.

ನಮಗೆ ರಾಜ್ಯದಾದ್ಯಂತ ಸಂಘಟಕರು ಇದ್ದಾರೆ. ಸ್ವಯಂ ಸೇವಕರು ನಾಟಕ ಪ್ರದರ್ಶನ ಆಯೋಜಿಸುತ್ತಾರೆ. ಪರಿವಾರದ ಪ್ರಮುಖರು ನಿಗಾ ವಹಿಸುತ್ತಾರೆ. ಪರಿವಾರದವರು ನನಗೆ ಹಣ ಹಾಗೂ ಪ್ರದರ್ಶನದ ಆಯೋಜನೆ ಬಗ್ಗೆ ತಲೆ ಕೆಡಿಸಿಕೊಳ್ಳದೆ ನಾಟಕದ ಸೂಕ್ಷ್ಮ ವಿಚಾರಗಳ ಬಗ್ಗೆ ಆದ್ಯತೆ ನೀಡುವಂತೆ ಸೂಚಿಸಿದ್ದಾರೆ. ಸಂಘ ಪರಿವಾರದ ಬೆಂಬಲ, ಸಾವರ್ಕರ್ ಪ್ರತಿಷ್ಠಾನ ಹಾಗೂ ಇನ್ನಿತರ ಸಂಘಟನೆಗಳ ಬೆಂಬಲದಿಂದ ನಾಟಕ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ತಾಲೀಮಿಗೂ ಮೊದಲು ನಡೆಸಿದ 10 ದಿನಗಳ ಓರಿಯಂಟೇಷನ್ ಕಾರ್ಯಕ್ರಮದಲ್ಲಿ ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ ಕ್ಯಾಗೋಪಿನಾಥ್, ವಿವಿಧ ಕ್ಷೇತ್ರದ ಪ್ರತಿನಿಧಿಯಾಗಿ ಪುಟ್ಟಣ್ಣಯ್ಯ, ನಂದಕಿಶೋರ್, ಕೃಷ್ಣಮೂರ್ತಿ, ಗಾಯಕ ಹರ್ಷ, ಕಾರ್ತಿಕ್ ಉಪಮನ್ಯು ಸೇರಿದಂತೆ ಇನ್ನಿತರರು ಭೇಟಿ ನೀಡಿ, ನಮ್ಮ ನಾಟಕಕ್ಕೆ ಸಹಕಾರ ನೀಡಿದ್ದಾರೆ. ಇದು ನಮಗೆ ಇನ್ನಷ್ಟು ಚೈತನ್ಯ ತುಂಬಿದೆ ಎಂದರು.

ಈ ಹಿಂದೆ ನಾನು 'ಟಿಪ್ಪು ನಿಜಕನಸುಗಳು' ನಾಟಕದಲ್ಲಿ ಕೆಲಸ ಮಾಡಿದ್ದೆ. ಈಗ ಸಾವರ್ಕರ್ ನಾಟಕದಲ್ಲಿ ಅಭಿನಯಿಸುತ್ತಿದ್ದೇನೆ. ಇತಿಹಾಸ ಗರ್ಭದಲ್ಲಿ ಅಡಗಿರುವ ಸತ್ಯ ಸಂಗತಿ ಒಂದಲ್ಲ ಒಂದು ದಿನ ಹೊರಬರಬೇಕು. ಕಾಲೇಜು ಅವಧಿವರೆಗೂ ನಮಗೆ ಸಾವರ್ಕರ್ ಬಗ್ಗೆ ತಿಳಿದಿರಲಿಲ್ಲ. ಈಗ ಜನರಿಗೆ ಸತ್ಯ ಸಂಗತಿ ತಿಳಿಸುವ ಕೆಲಸ ಈ ನಾಟಕದಿಂದ ಆಗಲಿದೆ.

–ತೀರ್ಥೇಶ್, ಬಾಲ ಸಾವರ್ಕರ್ ಪಾತ್ರಧಾರಿ.

ಇದುವರೆಗೂ ಸಾವರ್ಕರ್ ಬಗ್ಗೆ ಜನರಿಗೆ ಸತ್ಯ ಸಂಗತಿ ತಿಳಿದಿಲ್ಲ. ಸತ್ಯ ಸಂಗತಿ ತಿಳಿಸುವ ಒಂದು ಅವಕಾಶ ಸಿಕ್ಕಿದ್ದಕ್ಕೆ ಸಂತೋಷವಾಗಿದೆ.

– ಮನೋಜ್ ಏಕಲವ್ಯ, ಸುಭಾಷ್ ಚಂದ್ರ ಬೋಸ್ ಪಾತ್ರಧಾರಿ.

ನಾನು ಈ ಹಿಂದೆ ಓದಿದ ಸಾವರ್ಕರ್ ಇತಿಹಾಸವೇ ಬೇರೆ. ನಾಟಕ ಓದಿದ ನಂತರ ತಿಳಿದ ವಿಚಾರವೇ ಬೇರೆ. ಸಾವರ್ಕರ್ ಪಾತ್ರ ನೋಡಿದಾಗ ನಾವು ಶಾಲಾ–ಕಾಲೇಜು ಅವಧಿಯಲ್ಲಿ ಓದಿದ ರೀತಿಯೇ ಭಿನ್ನ. ಸ್ವಾತಂತ್ರ್ಯ ಹೋರಾಟದಲ್ಲಿ ಸಾವರ್ಕರ್ ಕೊಡುಗೆ ಬಗ್ಗೆ ಎಲ್ಲಿಯೂ ಉಲ್ಲೇಖಿಸಿಲ್ಲ. ಆದರೆ ಈಗ ಎಲ್ಲವೂ ತಿಳಿಯುತ್ತಿದೆ. ಅದನ್ನು ನಾಟಕದ ಮೂಲಕ ಜನರಿಗೆ ತಿಳಿಸಲು ನಿರ್ಧರಿಸಿದ್ದೇವೆ.

–ಹರಿಸಿಂಗ್, ಸಾವರ್ಕರ್ ಪಾತ್ರಧಾರಿ.

ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಕುರಿತು

ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ವಿಚಾರಣೆ



6 ಪ್ರತ್ಯೇಕವಾಗಿದ್ದ ಕೊಡವ ಪ್ರದೇಶ 'ಕೂರ್ಗ್' 1956ರ ರಾಜ್ಯ ಮರು-ಸಂಘಟನೆ ಕಾಯಿದೆ ಜಾರಿಗೆ ಬಂದ ನಂತರ, ವಿಶಾಲ ಮೈಸೂರಿನೊಂದಿಗೆ (ಈಗಿನ ಕರ್ನಾಟಕ) ವಿಲೀನಗೊಂಡಿತ್ತು. ಈ ಅವೈಜ್ಞಾನಿಕ ರಾಜಕೀಯ ಪ್ರಮಾದದಲ್ಲಿ ಕೊಡವರು ತಮ್ಮ ಅಸ್ಮಿತೆ ಮತ್ತು ಅಸ್ತಿತ್ವವನ್ನು ಕಳೆದುಕೊಂಡಿದ್ದಾರೆ. ಕೊಡವರು ಸಂಖ್ಯಾತ್ಮಕವಾಗಿ ಚಿಕ್ಕ ಸೂಕ್ಷ್ಮ ಸಮುದಾಯವಾಗಿದ್ದು, ಸಂವಿಧಾನದ ಅಡಿಯಲ್ಲಿ ರಾಜಕೀಯ ಕ್ಷೇತ್ರದಲ್ಲಿ ಸ್ಥಾನವನ್ನು ಹುಡುಕುತ್ತಿದ್ದಾರೆ. ಇದಕ್ಕಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಶಾಂತಿಯುತ ಹೋರಾಟವನ್ನು ಮುಂದುವರೆಸಿದೆ. ಕಾನೂನು ಹೋರಾಟಕ್ಕೆ ಜಯ ಸಿಗಲಿದೆ.

-ಎನ್.ಯು. ನಾಚಪ್ಪ, ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ

ಮಡಿಕೇರಿ, ಸೆ.5- ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯ ಕುರಿತು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮುಂದಿಟ್ಟಿರುವ ಬೇಡಿಕೆಗೆ ಪೂರಕವಾಗಿ ಆಯೋಗವನ್ನು ರಚಿಸಬೇಕೆಂದು ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಯ ವಿಚಾರಣೆ ಇಂದು ಹೈಕೋರ್ಟ್‌ನಲ್ಲಿ ನಡೆಯಿತು.

ಕೇಂದ್ರ ಸರ್ಕಾರದ ಪರ ಹಾಜರಿದ್ದ ವಕೀಲರು ಆಕ್ಷೇಪಣೆ ಸಲ್ಲಿಸಲು ಸ್ವಲ್ಪ ಸಮಯಾವಕಾಶ ಕೋರಿದ ಹಿನ್ನೆಲೆಯಲ್ಲಿ ಕೋರ್ಟ್ ವಿಚಾರಣೆಯನ್ನು ಅ.4ಕ್ಕೆ ಮುಂದೂಡಿತು. ಆ.3ರಂದು ನಡೆದ ವಿಚಾರಣೆ ಸಂದರ್ಭ ಮೂವರು ಪ್ರತಿವಾದಿಗಳು 4 ವಾರಗಳಲ್ಲಿ ಉತ್ತರ ನೀಡುವಂತೆ ಕೋರ್ಟ್ ನಿರ್ದೇಶನ ನೀಡಿತ್ತು. ಇಂದು ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣಾ ದೀಕ್ಷಿತ್ ಅರ್ಜಿ ವಿಚಾರಣೆ ನಡೆಸಿದರು.

ಅರ್ಜಿದಾರರಾದ ಡಾ.ಸುಬ್ರಮಣಿಯನ್ ಸ್ವಾಮಿ ಅವರು ದೆಹಲಿಯಿಂದಲೇ ವರ್ಚುಲ್ ಮೂಲಕ ನ್ಯಾಯಾಲಯದ ಕಲಾಪಕ್ಕೆ ಹಾಜರಾಗಿದ್ದರು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಕೊಡವ ಪರ ವಕೀಲ ಕೀರನ್ ನಾರಾಯಣ್ ಅವರುಗಳು ಖುದ್ದು ಹಾಜರಾಗಿ ವಾದ ಮಂಡಿಸಿದರು. ಸಹಾಯಕ ಸಾಲಿಸಿಟರ್ ಜನರಲ್ ಶಾಂತಿ ಭೂಷಣ್ ಅವರು ಪ್ರತಿವಾದಿಗಳ ಒಕ್ಕೂಟದ ಸರ್ಕಾರದ ಪರವಾಗಿ ವಾದಿಸಿದರು.

ಈ ಪ್ರಕರಣದಲ್ಲಿ ಎನ್.ಯು.ನಾಚಪ್ಪ ಅವರು ಅರ್ಜಿದಾರ ಸಂಖ್ಯೆ-2 ಆಗಿದ್ದಾರೆ. ಕೇಂದ್ರ ಕಾನೂನು ಸಚಿವಾಲಯ, ಕೇಂದ್ರ ಗೃಹ ಸಚಿವಾಲಯ ಮತ್ತು ಕರ್ನಾಟಕ ರಾಜ್ಯವನ್ನು ಪ್ರತಿವಾದಿ ಸಂಖ್ಯೆ ಕ್ರಮವಾಗಿ 1, 2 ಮತ್ತು 3ಎಂದು ಉಲ್ಲೇಖಿಸಲಾಗಿದೆ. ಪ್ರಮುಖರಾದ ಶ್ರೇಯಾ ನಾಚಪ್ಪ, ಬೊಳ್ಳಚಂಡ ಶೃಂಗ, ಕಲಿಯಂಡ ಪ್ರಕಾಶ್, ಕಿರಿಯಮಾಡ ಶೆರಿನ್ ಹಾಗೂ ಪಾಲಂದಿರ ಜೋಯಪ್ಪ ಈ ಸಂದರ್ಭ ಹಾಜರಿದ್ದರು.

ಉಪ್ಪು ತಿಂದವರು ನೀರು ಕುಡಿಯಲೇ ಬೇಕು

ಬಿಜೆಪಿ ವಿರುದ್ಧ ಕೆಪಿಸಿಸಿ ಕಾರ್ಯದರ್ಶಿ ಸಲೀಂ ಅಹಮ್ಮದ್ ವಾಗ್ದಾಳಿ



ಮಡಿಕೇರಿ, ಸೆ.5- ರಾಜ್ಯವನ್ನಾಳಿದ ಈ ಹಿಂದಿನ ಬಿಜೆಪಿ ಸರ್ಕಾರ ನಡೆಸಿದ ಹಗರಣಗಳ ಕುರಿತು ಕಾಂಗ್ರೆಸ್ ಸರ್ಕಾರ ತನಿಖೆ ಆರಂಭಿಸಿದ್ದು, ಉಪ್ಪು ತಿಂದವರು ನೀರು ಕುಡಿಯಲೇಬೇಕು, ಶಿಕ್ಷೆ ಅನುಭವಿಸಲೇಬೇಕು ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್ ತಿಳಿಸಿದ್ದಾರೆ.

ನಗರದ ಕಾವೇರಿ ಹಾಲ್‌ನಲ್ಲಿ ನಡೆದ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ಘಟಕದ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ನಾ ಕಾವುಂಗ, ಕಿಸಿಕೊ ಕಾನೆ ನಹೀ ದೂಂಗಾ' ಎಂದು ಹೇಳುವ ಪ್ರಧಾನಮಂತ್ರಿಗಳು ಈ ಹಿಂದಿನ ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಮೌನ ವಹಿಸಿರುವುದು ಯಾಕೆ ಎಂದು ಪ್ರಶ್ನಿಸಿದರು.

ಬಿಜೆಪಿ ಆಡಳಿತದ ಅವಧಿಯಲ್ಲಿ ಕೋವಿಡ್ ಹಗರಣ, ಶೇ.40 ಕಮಿಷನ್ ದಂಧೆ ನಡೆದಿದೆ. ಇದನ್ನು ಖುದ್ದು ಗುತ್ತಿಗೆದಾರರ ಸಂಘವೇ ಬಹಿರಂಗ ಪಡಿಸಿತ್ತು. ಉಡುಪಿಯಲ್ಲಿ ಕಿರುಕುಳ ತಾಳಲಾರದೆ ಗುತ್ತಿಗೆದಾರ ಆತ್ಮಹತ್ಯೆಗೆ ಶರಣಾಗಿದ್ದರು. ಹೀಗೆ ಎಲ್ಲಾ ಹಗರಣಗಳ ಕುರಿತು ಕಾಂಗ್ರೆಸ್ ಸರ್ಕಾರ ತನಿಖೆಯನ್ನು ಆರಂಭಿಸಿದೆ. ಚುನಾವಣೆ ಸಂದರ್ಭ ತನಿಖೆ ನಡೆಸುವುದಾಗಿ ಭರವಸೆ ನೀಡಿದ್ದು, ಇದೀಗ ಸರ್ಕಾರ ನುಡಿದಂತೆ ನಡೆದಿದೆ ಎಂದರು.

ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಅಬ್ದುಲ್ ಜಬ್ಬಾರ್ ಮಾತನಾಡಿ, ಲೋಕಸಭಾ ಚುನಾವಣೆಗೆ ಎಲ್ಲರೂ ಸನ್ನದ್ಧರಾಗಬೇಕು. ಇದು ದೇಶದ ಪ್ರಶ್ನೆಯಾಗಿದ್ದು, ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಪಣ ತೊಡಬೇಕು. ಬಿಜೆಪಿ ಎಂಬ ಗಿಡ ಈ ದೇಶದಲ್ಲಿ ಇರಬಾರದು. ಬಿಜೆಪಿ ಆಡಳಿತದಿಂದ ಯಾರಿಗೂ ಅನುಕೂಲವಾಗಿಲ್ಲ, ಜನ ಸಾಮಾನ್ಯರು ಕಷ್ಟ ಪಡುತ್ತಿದ್ದಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಇಡೀ ದೇಶ ನೆಮ್ಮದಿ ಯಿಂದ ಇರಬಹುದು ಎಂದು ತಿಳಿಸಿದರು.

ಬೆಂಗಳೂರು ಶಾಂತಿನಗರದ ಶಾಸಕ ಎನ್.ಎ.ಹ್ಯಾರಿಸ್ ಮಾತನಾಡಿ, ರಾಜ್ಯ ಮತ್ತು ಕಾಂಗ್ರೆಸ್ ಪಕ್ಷದ ಮೇಲಿನ ಪ್ರೀತಿಯಿಂದ ಜನ ಅಧಿಕಾರ ನೀಡಿದ್ದಾರೆ. ದೇಶಕ್ಕಾಗಿ ತ್ಯಾಗ ಬಲಿದಾನ ಮಾಡಿದ ಕಾಂಗ್ರೆಸ್ ಪಕ್ಷ ಒಗ್ಗಟ್ಟಾಗಿ ದೇಶವನ್ನು ಕಟ್ಟಿದೆ. ಇದೇ ಒಗ್ಗಟ್ಟು ಪಕ್ಷದ ಬಲವರ್ಧನೆಯಲ್ಲೂ ಮುಂದುವರೆಯಬೇಕು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತಂದಂತೆ ಕೇಂದ್ರದಲ್ಲೂ ತರಬೇಕು ಎಂದು ಕರೆ ನೀಡಿದರು.

ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಹಿಂದಿನ ಬಿಜೆಪಿ ಸರ್ಕಾರ ಮಾಡಿದ ಭ್ರಷ್ಟಾಚಾರಗಳನ್ನು ಕಾಂಗ್ರೆಸ್ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ತಪ್ಪಿತಸ್ಥರಿಗೆ ಶಿಕ್ಷೆಯಾಗುವವರೆಗೆ ಬಿಡುವುದಿಲ್ಲ ವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಸರ್ಕಾರದಿಂದ ಸಾಮಾಜಿಕ ನ್ಯಾಯ ದೊರೆಯುತ್ತಿದೆ ಎಂದರು. ಕೋವಿಡ್ ಹಗರಣ, ಗುತ್ತಿಗೆ ಕಾಮಗಾರಿಯಲ್ಲಿ ಕಮಿಷನ್, ಪಿಎಸ್‌ಐ ನೇಮಕಾತಿ ಸೇರಿದಂತೆ ವಿವಿಧ ಭ್ರಷ್ಟಾಚಾರ ಪ್ರಕರಣಗಳ ತನಿಖೆಗೆ ಸರ್ಕಾರ ಸಮಿತಿಗಳನ್ನು ರಚಿಸಿದ್ದು, ಸುಲಭವಾಗಿ ಬಿಡುವುದಿಲ್ಲ ಎಂದು ಹೇಳಿದರು.

ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಮಾತನಾಡಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವಂತೆ ಕರೆ ನೀಡಿದರು.

ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ತಿತೀರ ಧರ್ಮಜ ಉತ್ತಪ್ಪ, ಕೆಪಿಸಿಸಿ ವಕ್ತಾರ ಲಕ್ಷ್ಮಣ್, ಮಾಜಿ ಸಚಿವ ಎಂ.ಸಿ.ನಾಣಯ್ಯ, ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ್ ಮಾಚಯ್ಯ, ಕೆಪಿಸಿಸಿ ಪ್ರಮುಖ ಟಿ.ಪಿ.ರಮೇಶ್, ಮಾಜಿ ಶಾಸಕ ಕೆ.ಎಂ.ಇಬ್ರಾಹಿಂ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.

ಅಧಿಕಾರ ಸ್ವೀಕಾರ: ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ಘಟಕದ ನೂತನ ಅಧ್ಯಕ್ಷರಾಗಿ ಪಿ.ಎ. ಹನೀಫ್ ಅವರು ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿದರು.

ನಾಳೆ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ. ದೇವಯ್ಯ ಅವರ ಪುಣ್ಯಸ್ಮರಣೆ

ಮಡಿಕೇರಿ, ಸೆ.5- ಭಾರತ-ಪಾಕಿಸ್ತಾನ ನಡುವೆ 1965ರ ಯುದ್ಧದಲ್ಲಿ ವೀರ ಮರಣ ಹೊಂದಿದ ಮಹಾವೀರ ಚಕ್ರ(ಮರಣೋತ್ತರ) ಪುರಸ್ಕೃತ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರ 58ನೇ ಪುಣ್ಯಸ್ಮರಣೆ ಸೆ.7 ರಂದು ಮಡಿಕೇರಿಯಲ್ಲಿ ನಡೆಯಲಿದೆ ಎಂದು ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ತಿಳಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೊಡವ ಮಕ್ಕಡ ಕೂಟ ಹಾಗೂ ಅಜ್ಜಮಾಡ ಒಕ್ಕ (ಕುಟುಂಬಸ್ಥರ) ಸಹಯೋಗದಲ್ಲಿ ಬೆಳಗ್ಗೆ 11 ಗಂಟೆಗೆ ಸ್ಕ್ವಾ.ಲೀ.ಅಜ್ಜಮಾಡ ಬಿ.ದೇವಯ್ಯ ವೃತ್ತದಲ್ಲಿ ಪುಷ್ಪಾರ್ಚನೆ ಮಾಡುವ ಮೂಲಕ ಪುಣ್ಯಸ್ಮರಣೆ ಆಚರಿಸಲಾಗುವುದು ಎಂದು ಹೇಳಿದ್ದಾರೆ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ, ಮಡಿಕೇರಿ ಶಾಸಕ ಡಾ.ಮಂಥರ್ ಗೌಡ, ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಏರ್ ಮಾರ್ಷಲ್ ಕೊಡಂದೇರ ನಂದಾ ಕಾರ್ಯಪ್ಪ, ಮಾಜಿ ಸಚಿವ ಮೇರಿಯಂಡ ಸಿ.ನಾಣಯ್ಯ, ನಗರಸಭೆ ಅಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ, ವಿಧಾನ ಪರಿಷತ್ ಮಾಜಿ ಸದಸ್ಯರುಗಳಾದ ಶಾಂತೆಯಂಡ ವೀಣಾ ಅಚ್ಚಯ್ಯ, ಸುನಿಲ್ ಸುಬ್ರಮಣಿ, ಜಿಲ್ಲಾಧಿಕಾರಿ ವೆಂಕಟ್‌ರಾಜ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಫೀಲ್ಡ್ ಮಾರ್ಷಲ್ ಕೆ.ಎಂ ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಫೋರಂನ ಅಧ್ಯಕ್ಷ ಕರ್ನಲ್ ಕಂಡ್ರತಂಡ ಸುಬ್ಬಯ್ಯ ಅವರುಗಳು ಭಾಗವಹಿಸಲಿದ್ದಾರೆ.

ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ದೊಡ್ಡದು

ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಡಾ.ಮಂಥರ್‌ಗೌಡ ಅಭಿಮತ



ಮಡಿಕೇರಿ, ಸೆ.5- ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ನೀಡಿ ಸಮಾಜದಲ್ಲಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ತರವಾಗಿದೆ. ಆ ನಿಟ್ಟಿನಲ್ಲಿ ಶಿಕ್ಷಕ ವೃತ್ತಿಗೆ ತನ್ನದೇ ಆದ ಗೌರವ ಸ್ಥಾನವಿದೆ ಎಂದು ಶಾಸಕ ಡಾ.ಮಂಥರ್ ಗೌಡ ತಿಳಿಸಿದ್ದಾರೆ.

ನಗರದ ಕೊಡಗು ಗೌಡ ಸಮಾಜದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಸಂಯುಕ್ತಾಶ್ರಯದಲ್ಲಿ ಮಂಗಳವಾರ ನಡೆದ ಶಿಕ್ಷಕರ ದಿನಾಚರಣೆ ಮತ್ತು ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಶಿಕ್ಷಕರ ಸೇವೆಯನ್ನು ಯಾರೂ ಸಹ ಮರೆಯುವುದಿಲ್ಲ. ಪುಸ್ತಕ ಮೂಲಕ ಪಾಠ ಮಾಡುವುದಕ್ಕೂ, ಮನಸ್ಸಿನ ಮೂಲಕ ಪಾಠ ಮಾಡುವುದಕ್ಕೂ ಬಹಳ ವ್ಯತ್ಯಾಸವಿದೆ. ಆ ನಿಟ್ಟಿನಲ್ಲಿ ಮಕ್ಕಳ ಜ್ಞಾನಾರ್ಜನೆ ಹೆಚ್ಚಿಸುವಲ್ಲಿ ಶಿಕ್ಷಕರ ಸೇವೆ ಮಹತ್ವದ್ದಾಗಿದೆ ಎಂದರು. ಶಿಕ್ಷಕರು ಹಲವು ಮೂಲ ಸೌಲಭ್ಯಗಳ ಕೊರತೆಯ ನಡುವೆಯೂ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕಲಿಸಲು ಪ್ರಯತ್ನಿಸುತ್ತಾರೆ. ಮಕ್ಕಳನ್ನು ಸರಿದಾರಿಗೆ ತರಲು ಸದಾ ಯೋಚಿಸುತ್ತಾರೆ ಎಂದರು.

ವೈದ್ಯಕೀಯ ವಿಭಾಗದಲ್ಲಿ ನಾನು ಸಹ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ್ದೇನೆ. ಆ ನಿಟ್ಟಿನಲ್ಲಿ ಶಿಕ್ಷಕರ ಜವಾಬ್ದಾರಿ ಮತ್ತು ಹೊಣೆಗಾರಿಕೆ ಹೆಚ್ಚಿನದ್ದಾಗಿದೆ. ಎಲ್ಲಾ ರೀತಿಯಲ್ಲಿ ಶಾಲೆಯ ಅಭಿವೃದ್ಧಿಗೆ ಸಹಕರಿಸಲಾಗುವುದು ಎಂದು ಶಾಸಕರು ಹೇಳಿದರು.

ಸರ್ಕಾರಿ ಶಾಲೆಯಲ್ಲಿ ಓದಿದವರು ಒಳ್ಳೆಯ ವಿದ್ಯಾರ್ಥಿಗಳಾಗಿ ಹೊರಹೊಮ್ಮಿ ವಿಜ್ಞಾನ, ತಂತ್ರಜ್ಞಾನ ಹೀಗೆ ವಿವಿಧ ಕ್ಷೇತ್ರದಲ್ಲಿ ತಮ್ಮದೇ ಆದ ಹೆಸರು ಮಾಡಿದ್ದಾರೆ ಎಂದು ಶಾಸಕರು ಹೇಳಿದರು. ಕೊಡಗು ಜಿಲ್ಲೆ ಶೈಕ್ಷಣಿಕವಾಗಿ ಮುಂದೆ ಇದೆ. ಆ ನಿಟ್ಟಿನಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ದಲ್ಲಿಯೂ ಸಹ ಇನ್ನಷ್ಟು ಉನ್ನತ ಸ್ಥಾನ ಪಡೆಯುವಂತಾಗಬೇಕು ಎಂದು ಮಂಥರ್‌ಗೌಡ ಹೇಳಿದರು.

ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಅವರು ಮಾತನಾಡಿ ಶಿಕ್ಷಕರು ಮಕ್ಕಳಿಗೆ ದಾರಿದೀಪವಾಗಿದ್ದಾರೆ. ಮಕ್ಕಳಿಗೆ ತಾಳ್ಮೆ, ಸಹನೆ ಕಲಿಸಿ, ಅಕ್ಷರ ಅಭ್ಯಾಸ ಮಾಡಿಸುತ್ತಾರೆ ಎಂದು ಹೇಳಿದರು. ಜಿಪಂ ಸಿಇಓ ವರ್ಣಿತ್ ನೇಗಿ ಅವರು ಮಾತನಾಡಿ ಶಿಕ್ಷಕರೇ ದೇವರಾಗಿದ್ದು, ಶಿಕ್ಷಕರನ್ನು ಸದಾ ಗೌರವಿಸುತ್ತೇವೆ. ಎಲ್ಲಾ ಮಕ್ಕಳನ್ನು ಪ್ರೀತಿ, ಗೌರವದಿಂದ ಕಾಣುತ್ತಾರೆ ಎಂದರು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸಹಕಾರ್ಯದರ್ಶಿ ಎಚ್.ಎಸ್. ಚೇತನ್ ಅವರು ಮಾತನಾಡಿ, ಶಿಕ್ಷಕರ ದಿನಾಚರಣೆ ಸಂಘಟನೆಗೆ ಮುಂದಿನ ದಿನಗಳಲ್ಲಿ ಧತ್ತಿನಿಧಿ ಸ್ಥಾಪಿಸಲಾಗುವುದು ಎಂದರು. ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಶಿಕ್ಷಕರ ಸಮಸ್ಯೆಯನ್ನು ಪರಿಹರಿಸಲು ಶಿಕ್ಷಕರ ಸಂಘವು ನಿರಂತರ ಪ್ರಯತ್ನ ನಡೆಸುತ್ತಿದೆ ಎಂದು ಹೇಳಿದರು.

ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ಹಾಗೆಯೇ ನಿವೃತ್ತ ಶಿಕ್ಷಕರನ್ನು ಗೌರವಿಸಲಾಯಿತು.

ಲಿಲ್ಲಿ ಮೋರಸ್ ನಿಧನ



ವಿರಾಜಪೇಟೆ, ಸೆ.5- ವಿರಾಜಪೇಟೆಯ ಅರಸು ನಗರದ ನಿವಾಸಿ ಲಿಲ್ಲಿ ಮೋರಸ್ (92) ಸೋಮವಾರ ಕುಶಾಲನಗರದಲ್ಲಿರುವ ತಮ್ಮ ಪುತ್ರನ ನಿವಾಸದಲ್ಲಿ ನಿಧನರಾಗಿದ್ದಾರೆ. ಅದೇ ದಿನ ಮೃತದೇಹವನ್ನು ಅರಸು ನಗರಕ್ಕೆ ತಂದು ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಮರುದಿನ ವಿರಾಜಪೇಟೆ ಸಂತ ಅನ್ನಮ್ಮ ದೇವಾಲಯದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಮೃತರು ಓರ್ವ ಪುತ್ರ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅಪಾರ

ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಅಭಿಪ್ರಾಯ



ಚಾಮರಾಜನಗರ, ಸೆ.5- ಪ್ರಸ್ತುತ ಮೌಲ್ಯಾಧಾರಿತ, ಗುಣಮಟ್ಟದ ಶಿಕ್ಷಣ ಅಗತ್ಯವಿದ್ದು, ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅಪಾರ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಪಂ ಹಾಗೂ ಶಾಲಾ ಶಿಕ್ಷಣ ಇಲಾಖೆಯಿಂದ ಆಯೋಜಿಸಿದ್ದ ಜಿಲ್ಲಾ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಿಕ್ಷಣದ ಗುಣಮಟ್ಟ, ಮೌಲ್ಯ ಇನ್ನೂ ಹೆಚ್ಚಾಗಬೇಕಿದೆ. ಶಿಲೆ ಕೆತ್ತಿ ಸುಂದರ ಮೂರ್ತಿಯಾಗಿಸುವ ಶಿಲ್ಪಿಯಂತೆ ಮಕ್ಕಳಿಗೆ ಶಿಕ್ಷಣ ನೀಡಿ ಅವರನ್ನು ಉತ್ತಮ ಪ್ರಜೆಯಾಗಿ ರೂಪುಗೊಳಿಸುವ ಶಿಕ್ಷರ ಜವಾಬ್ದಾರಿ ಅತ್ಯಂತ ಮಹತ್ವವಾಗಿದೆ. ಆರ್ಥಿಕ, ಸಾಮಾಜಿಕವಾಗಿ ಸ್ವಾವಲಂಬಿ ಬದುಕು ನಡೆಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಮೂಲಕ ಅಭಿವೃದ್ಧಿಯಲ್ಲಿ ಭಾಗಿಯಾಗುವ ಶಿಕ್ಷಕರ ಪಾತ್ರ ಬಹುದೊಡ್ಡದು ಎಂದರು.

ಶಿಕ್ಷಕರು ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸಬೇಕು. ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಆದರ್ಶ ಎಲ್ಲರಿಗೂ ಮಾದರಿಯಾಗಿದೆ. ರಾಧಾಕೃಷ್ಣನ್ ಅವರನ್ನು ವಿದ್ಯಾರ್ಥಿಗಳು ಮೈಸೂರಿನ ರೈಲು ನಿಲ್ದಾಣದವರೆಗೆ ಸಾರೋಟಿನಲ್ಲಿ ಮೆರವಣಿಗೆಯಲ್ಲಿ ಕರೆದೊಯ್ದು ಬೀಳ್ಕೊಡುಗೆ ನೀಡಿದ ಅವಿಸ್ಮರಣೀಯ ಸಂದರ್ಭ ಅಭಿಮಾನ ಪಡುವಂತಾಗಿದೆ. ಶಿಕ್ಷರು ಹಾಗೂ ವಿದ್ಯಾರ್ಥಿಗಳ ಉತ್ತಮ ಬಾಂಧವ್ಯಕ್ಕೆ ಸಾಕ್ಷಿ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿ, ಡಾ.ರಾಧಾಕೃಷ್ಣನ್ ಹಾಗೂ ಸಾವಿತ್ರಿಬಾಯಿ ಫುಲೆ ಅವರು ಶಿಕ್ಷಣಕ್ಕೆ ನೀಡಿದ ಕೊಡುಗೆಯನ್ನು ಎಲ್ಲರೂ ಸ್ಮರಿಸಬೇಕು. ಕರ್ತವ್ಯ ನಿರತ ಶಿಕ್ಷಕರೆಲ್ಲರೂ ಉತ್ತಮ ಶಿಕ್ಷಕರೇ ಆಗಿದ್ದಾರೆ ಎಂದರು.

ಮುಖ್ಯ ಭಾಷಣಕಾರ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಮಾತನಾಡಿ, ಡಾ.ರಾಧಕೃಷ್ಣನ್ ಜನ್ಮದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಲಾಗುತ್ತಿದೆ. ಸಾವಿತ್ರಿಬಾಯಿ ಫುಲೆ ಅವರನ್ನು ಸಹ ಸ್ಮರಿಸಲಾಗುತ್ತಿದೆ. ರಾಧಾಕೃಷ್ಣನ್ ಅವರು ಅತ್ಯುನ್ನತ ಹುದ್ದೆ ಅಲಂಕರಿಸಿದ್ದರೂ, ಅವರಿಗೆ ಶಿಕ್ಷಕ ವೃತ್ತಿ ಹೆಚ್ಚು ಪ್ರೀತಿಗೆ ಪಾತ್ರವಾಗಿತ್ತು. ಶಿಕ್ಷಣಕ್ಕೆ ಮಾತೃಶಕ್ತಿಯಾಗಿರುವ ಸಾವಿತ್ರಿಬಾಯಿ ಫುಲೆ ಅವರನ್ನು ಬ್ರಿಟಿಷ್ ಸರ್ಕಾರ ಮೊದಲ ಮಹಿಳಾ ಶಿಕ್ಷಕಿ ಎಂದು ಘೋಷಿಸಿದೆ ಎಂದರು.

ಇದೇ ವೇಳೆ ಜಿಲ್ಲಾ ಅತ್ಯುತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಿವೃತ್ತ ಶಿಕ್ಷಕರು ಹಾಗೂ ಅವರ ಕುಟುಂಬದವರಿಗೆ ಗೌರವ ಸಮರ್ಪಿಸಲಾಯಿತು.

ಈ ವೇಳೆ ನಗರಸಭಾ ಸದಸ್ಯ ಮಹೇಶ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಪ್ರಾಂಶುಪಾಲ ಎಂ.ಕಾಶಿನಾಥ್, ಬಿಇಓ ಡಿ.ಸೋಮಣ್ಣೇಗೌಡ, ಡಿವೈಪಿಸಿ ಲಕ್ಷ್ಮಿಪತಿ, ನಾಗೇಂದ್ರ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವೆಂಕಟೇಶ್, ರಾಜ್ಯ ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಪಿ. ಮಹದೇವಸ್ವಾಮಿ, ಶಿಕ್ಷಕರ ಸಂಘಟನೆ ಪದಾಧಿಕಾರಿಗಳಾದ ಮಾದಪ್ಪ ಮಹಾಲಿಂಗಸ್ವಾಮಿ, ಮಹದೇವಸ್ವಾಮಿ, ಎ.ಶಿವಣ್ಣ, ವೀರಭದ್ರಸ್ವಾಮಿ, ಭರತ್ ಭೂಷಣ್, ಎನ್.ಕಿರಣ್‌ರಾಜು, ನೇಮಿರಾಜು, ನರೇಂದ್ರನಾಥ್, ಮಂಜುನಾಥ್, ಎಂ.ಡಿ. ಮಹದೇವ್ ಇತರರಿದ್ದರು.

ಕಾರ್ಯಕ್ರಮಕ್ಕೂ ಮುನ್ನಾ ಜಿಲ್ಲಾಡಳಿತ ಭವನದ ಮುಂಭಾಗದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿದರು. ನಂತರ ಸರ್ಕಾರಿ ಪೇಟೆ ಪ್ರೈಮರಿ ಶಾಲೆ ಆವರಣದಲ್ಲಿ ಡಾ.ಎಸ್. ರಾಧಾಕೃಷ್ಣನ್ ಮತ್ತು ಸಾವಿತ್ರಿಬಾಯಿ ಫುಲೆ ಭಾವಚಿತ್ರದ ಮೆರವಣಿಗೆಗೆ ರಾಮಚಂದ್ರರಾಜೇ ಅರಸ್ ಚಾಲನೆ ನೀಡಿದರು.

ತ.ನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ

ಕಣ್ಣಿಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ



ಚಾಮರಾಜನಗರ, ಸೆ.5- ಕೆಆರ್‌ಎಸ್‌ನಿಂದ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಕಣ್ಣಿಗೆ ಕಪ್ಪುಪಟ್ಟಿ ಧರಿಸಿ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಕಣ್ಣಿಗೆ ಕಪ್ಪುಪಟ್ಟಿ ಧರಿಸಿ ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ ತಮಿಳುನಾಡು, ಕರ್ನಾಟಕ ಸರ್ಕಾರ, ಕಾವೇರಿ ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸ ಗೌಡ ಮಾತನಾಡಿ, ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವ ಕ್ರಮ ವಿರೋಧಿಸಿ ರಾಜ್ಯಾದ್ಯಂತ ಕನ್ನಡಪರ ಸಂಘಟನೆಗಳು ಹೋರಾಟ ಮಾಡುತ್ತಿದ್ದರೂ ಸರ್ಕಾರಕ್ಕೆ ಕಣ್ಣಿಲ್ಲ. ಕಾವೇರಿ ನಿರ್ವಹಣಾ ಮಂಡಳಿಯೂ ಕುರುಡಾಗಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಕನ್ನಡಪರ ಸಂಘಟನೆಗಳ ಒಕ್ಕೂಟ ಅಧ್ಯಕ್ಷ ಶಾ. ಮುರಳಿ, ರಾಜು, ನಿಜಧ್ವನಿ ಗೋವಿಂದರಾಜು, ಚಾ.ವೆಂ. ರಾಜ್‌ಗೋಪಾಲ್, ಮಹೇಶ್‌ಗೌಡ, ರವಿಚಂದ್ರ ಪ್ರಸಾದ್ ಕಹಳೆ, ನಂಜುಂಡ ಸ್ವಾಮಿ, ಚಾ.ಹ. ರಾಮು, ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಚಾ.ರಾ.ಕುಮಾರ್, ಲಿಂಗರಾಜು, ನಾಗೇಶ್ ಭಾಗವಹಿಸಿದ್ದರು.

1.34 ಕೋಟಿ ಮೌಲ್ಯದ ವಸ್ತುಗಳ ಹಸ್ತಾಂತರ



ಚಾಮರಾಜನಗರ, ಸೆ.5- ಜಿಲ್ಲೆಯಲ್ಲಿ ನಡೆದ ಕಳ್ಳತನ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಚಿನ್ನ, ಬೆಳ್ಳಿ ಸೇರಿದಂತೆ 1.34 ಕೋಟಿ ಮೌಲ್ಯದ ವಸ್ತುಗಳನ್ನು ಜಿಲ್ಲಾ ಪೊಲೀಸರು ವಾರಸುದಾರರಿಗೆ ಹಿಂತಿರುಗಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸ್ವತ್ತುಗಳ ಪ್ರದರ್ಶನ ಹಾಗೂ ವಾರಸುದಾರರಿಗೆ ಹಿಂದಿರುಗಿಸುವ (ಪ್ರಾಪರ್ಟಿ ರಿಟರ್ನ್) ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ನೇತೃತ್ವದಲ್ಲಿ ವಿವಿಧ ಠಾಣೆಗಳ ಪೊಲೀಸರು ವಶಪಡಿಸಿಕೊಂಡ ವಸ್ತುಗಳನ್ನು ಕಳೆದುಕೊಂಡವರಿಗೆ ಹಿಂತಿರುಗಿಸಲಾಯಿತು.

ಎಸ್‌ಪಿ ಪದ್ಮಿನಿ ಸಾಹು ಮಾತನಾಡಿ, ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ 70 ಕಳವು ಪ್ರಕರಣಗಳ ಪೈಕಿ 44 ಪ್ರಕರಣಗಳನ್ನು ಬೇಧಿಸಲಾಗಿದ್ದು, 1,34,46,261 ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. 44 ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯ ಅನುಮತಿ ಪಡೆದು ವಾರಸುದಾರರಿಗೆ ವಸ್ತುಗಳನ್ನು ವಾಪಸ್ ಕೊಡಲಾಗಿದೆ ಎಂದರು.

20 ಪ್ರಕರಣಗಳಲ್ಲಿ 1,05,70,500 ರೂ. ಮೌಲ್ಯದ 1 ಕೆಜಿ 957.5 ಗ್ರಾಂ ಚಿನ್ನಾಭರಣ ಹಾಗೂ 3,93,260 ರೂ. ಮೌಲ್ಯದ 5 ಕೆಜಿ 618 ಗ್ರಾಂ ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಅಲ್ಲದೇ 9 ಪ್ರಕರಣಗಳಲ್ಲಿ 3.20 ಲಕ್ಷ ಮೌಲ್ಯದ 9 ಮೋಟಾರ್ ಸೈಕಲ್(2 ವೀಲ್ಹರ್), 2 ಪ್ರಕರಣಗಳಲ್ಲಿ 7.65 ಲಕ್ಷ ಮೌಲ್ಯದ 5 ಮೋಟಾರ್ ವಾಹನಗಳು, 4 ಪ್ರಕರಣಗಳಲ್ಲಿ 10,20,501 ರೂ. ವಶಪಡಿಸಿಕೊಳ್ಳಲಾಗಿತ್ತು ಎಂದರು.

ಈ ಸಂದರ್ಭ ಎಎಸ್ಪಿ ಉದೇಶ್, ಕೊಳ್ಳೇಗಾಲ ಡಿವೈಎಸ್‌ಪಿ ಸೋಮೇಗೌಡ ಸೇರಿದಂತೆ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳ ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ ಹಾಜರಿದ್ದರು.

ಪ್ರೇಮಕುಮಾರಿ ನಿಧನ




ಚಾಮರಾಜನಗರ, ಸೆ.5- ನಗರದ ನಿವಾಸಿ ದಿ.ಬ್ರಹ್ಮಸೂರಯ್ಯ ಅವರ ಪತ್ನಿ ಪ್ರೇಮಕುಮಾರಿ (84) ಮಂಗಳವಾರ ನಿಧನರಾದರು. ಮೃತರು ಬಿಕೆಎಸ್‌ಎಸ್ ಬ್ಯಾಂಕ್ ವ್ಯವಸ್ಥಾಪಕ ಸಿ.ಬಿ.ಸತೀಶ್ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 9 ಗಂಟೆಗೆ ನಂಜನಗೂಡು ರಸ್ತೆಯಲ್ಲಿರುವ ಆರ್ಯವೈಶ್ಯ ಚಿರಶಾಂತಿ ಧಾಮದಲ್ಲಿ ನಡೆಯಲಿದೆ.

ಶಿಕ್ಷಕರ ಸಮಸ್ಯೆಗೆ ಧ್ವನಿಯಾಗುವೆ

ಕೊಳ್ಳೇಗಾಲ, ಸೆ.5- ಶಿಕ್ಷಕರ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ಮಾಡುತ್ತೇನೆ ಎಂದು ಶಾಸಕ ಮಂಜುನಾಥ್ ತಿಳಿಸಿದರು.

ಪಟ್ಟಣದ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದುದು. ಲಕ್ಷಾಂತರ ವಿದ್ಯಾರ್ಥಿಗಳ ಬದುಕು ಕಟ್ಟಿಕೊಡುವಲ್ಲಿ ಹಾಗೂ ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅಪಾರ. ಶಿಕ್ಷಕರಿಲ್ಲದ ಸಮಾಜ ಊಹಿಸಲು ಅಸಾಧ್ಯ. ಹೀಗಾಗಿ ಸೆ.5 ಶಿಕ್ಷಕರ ಪಾಲಿನ ಹೆಮ್ಮೆಯ ದಿನ ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಎ.ಆರ್.ಕೃಷ್ಣಮೂರ್ತಿ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿ ಅವರನ್ನು ಭವ್ಯ ಭಾರತದ ಪ್ರಜೆಗಳನ್ನಾಗಿ ಮಾಡುವ ನಿಟ್ಟಿನಲ್ಲಿ ಶಿಕ್ಷಕರ ಶ್ರಮ ಶ್ರೇಷ್ಠವಾದದು ಎಂದ ಅವರು, ಶಿಕ್ಷಕರ ಬೇಡಿಕೆ ಈಡೇರಿಸಲು ಕ್ರಮ ವಹಿಸುವ ಜೊತೆಗೆ ಗುರು ಭವನದ ಅಭಿವೃದ್ಧಿಗೆ ಮುಂದಾಗುವೆ. ನಾನು ಶಾಸಕನಾಗಲು ಶಿಕ್ಷಕರ ಸಹಕಾರ ಪ್ರಮುಖ ಎಂದರು.

ಕಾರ್ಯಕ್ರಮದಲ್ಲಿ ನಟ ಪ್ರಥಮ್, ಬಿಇಓ ಮಂಜುಳಾ, ತಹಸೀಲ್ದಾರ್ ಮಂಜುಳಾ ನಗರಸಭೆ ಮಾಜಿ ಅಧ್ಯಕ್ಷರಾದ ರಮೇಶ್, ಶಾಂತರಾಜು, ಬ್ಲಾಕ್ ಅಧ್ಯಕ್ಷ ತೋಟೇಶ್, ಸುಶೀಲ, ಮಂಜುನಾಥ್, ಹರ್ಷ, ಬಸ್ತಿಪುರ ಸ್ವಾಮಿ, ವಿವಿಧ ಶಿಕ್ಷಕ ಸಂಘಟನೆಗಳ ಪದಾಧಿಕಾರಿಗಳಾದ ಶ್ರೀಧರ್, ವಾಸು, ಬುಕಾನಿ, ನಂದೀಶ್, ಕಲೀಂ ಷರೀಫ್, ಸಿದ್ದರಾಜು, ಅಲೆಗ್ಸಾಂಡರ್, ಹೂವಮ್ಮ ಶಿವರಾಜು, ಸಿದ್ದಲಿಂಗಸ್ವಾಮಿ, ಶಾಂತರಾಜು ಇನ್ನಿತರರಿದ್ದರು.



ಮಕ್ಕಳ ಕಲಿಕೆಗೆ ಸರ್ಕಾರದಿಂದ ಅಗತ್ಯ ಸೌಲಭ್ಯ



ಗುಂಡ್ಲುಪೇಟೆ, ಸೆ.5- ನೂತನ ಶಿಕ್ಷಣ ನೀತಿಯಿಂದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಲಿಸುವ ಪದ್ಧತಿ ಬದಲಾಗಬೇಕಾಗಿದ್ದು, ಇದಕ್ಕೆ ಪೂರಕವಾಗಿ ಸರ್ಕಾರ ಅಗತ್ಯ ಸೌಲಭ್ಯ ಕಲ್ಪಿಸುತ್ತಿದೆ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು.

ಪಟ್ಟಣದ ಗುರು ಭವನದಲ್ಲಿ ಮಂಗಳವಾರ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಶಿಕ್ಷಕರ ಸಂಘದಿಂದ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬೇರೆ ಬೇರೆ ಹಿನ್ನೆಲೆ ಹಾಗೂ ಮನೋಭಾವದ ಎಲ್ಲಾ ಮಕ್ಕಳ ಸಮಗ್ರ ನಿರ್ವಹಣೆ ಮಾಡಬೇಕಾದ ಶಿಕ್ಷಕರ ಹುದ್ದೆ ಜವಾಬ್ದಾರಿಯುತವಾದದು. ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಪ್ರಮಾಣದಲ್ಲಿ ಶಿಕ್ಷಕರನ್ನು ನಿಯೋಜನೆ ಮಾಡದ ಪರಿಣಾಮ ಶಿಕ್ಷಕರ ಮೇಲೆ ಒತ್ತಡ ಬೀಳುತ್ತಿದ್ದು, ಇದರಿಂದ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತಿದೆ. ಇತ್ತೀಚೆಗೆ ನಡೆದ ವರ್ಗಾವಣೆಯಿಂದ ಸಮಸ್ಯೆ ಇನ್ನೂ ಹೆಚ್ಚಾಗಿದೆ. ಇದನ್ನು ತಪ್ಪಿಸಲು ಸರ್ಕಾರ ಸ್ಮಾರ್ಟ್ ಕ್ಲಾಸ್, ಗ್ರಂಥಾಲಯ ಸೌಲಭ್ಯ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ನೆರವು ಪಡೆಯಲಾಗುವುದು. ಸರ್ಕಾರ ಶಾಲೆಗಳ ಕೊಠಡಿ ನಿರ್ಮಾಣ ಹಾಗೂ ದುರಸ್ತಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದರು. ತಾಲೂಕಿನಲ್ಲಿ ಅತಿ ಹೆಚ್ಚು ಮೊರಾರ್ಜಿ ವಸತಿ ಶಾಲೆಗಳಿದ್ದರೂ, ಯಡವನಹಳ್ಳಿ ಮೊರಾರ್ಜಿ ವಸತಿ ಶಾಲೆಯಲ್ಲಿ 250 ಮಕ್ಕಳ ಸ್ಥಳದಲ್ಲಿ 450 ವಿದ್ಯಾರ್ಥಿಗಳಿರುವುದರಿಂದ ಗರಗನಹಳ್ಳಿಯಲ್ಲಿ ಮತ್ತೊಂದು ಶಾಲೆ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು. ಶಿಕ್ಷಕರ ಸಮಸ್ಯೆ ಪರಿಹರಿಸಲು ಸರ್ಕಾರದ ಮೇಲೆ ಒತ್ತಡ ಹಾಕಲಾಗುವುದು ಎಂದರು.

ಮೈಸೂರು ಡಯಟ್ ಹಿರಿಯ ಉಪನ್ಯಾಸಕ ಎಸ್.ಪಿ.ನಾಗರಾಜು ಮಾತನಾಡಿ, ಶಿಕ್ಷಕರ ತ್ಯಾಗದಿಂದಾಗಿ ವಿದ್ಯಾರ್ಥಿಗಳು ಉನ್ನತ ಸ್ಥಾನಕ್ಕೇರುವಂತಾಗಿದೆ. ಶಿಕ್ಷಕರು ಆಧುನಿಕ ಯುಗದಲ್ಲಿ ಬದಲಾಗುತ್ತಿರುವ ಕಾಲಕ್ಕನುಗುಣವಾಗಿ ಅಪ್ಡೇಟ್ ಆಗುತ್ತಿರಬೇಕು ಎಂದರು.

ಬಿಇಓ ರಾಜಶೇಖರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಂಭೋ ಹರ ಶಂಭೋ ಹಾಡಿಗೆ ಊಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಅನಿತಾ ಭರತನಾಟ್ಯ ಮಾಡುವ ಮೂಲಕ ಎಲ್ಲರ ಮೆಚ್ಚುಗೆ ಗಳಿಸಿದರು. ಸ್ವಯಂ ಸೇವಾ ಸಂಸ್ಥೆ ವತಿಯಿಂದ ವಿಕಲಚೇತನರಿಗೆ ನಾನಾ ಸವಲತ್ತುಗಳನ್ನು ವಿತರಿಸಲಾಯಿತು. ನಿವೃತ್ತರಾದ ಶಿಕ್ಷಕರನ್ನು ಗೌರವಿಸಿ ಸನ್ಮಾನಿಸಲಾಯಿತು. ಈ ವೇಳೆ ಪುರಸಭೆ ಸದಸ್ಯರಾದ ಕುಮಾರ್, ಹೀನಾ ಕೌಸರ್, ಅಣ್ಣಯ್ಯ ಸ್ವಾಮಿ, ಆರ್.ಜಯರಾಂ, ಹೆಚ್.ಎಂ.ಮಹೇಶ್, ಹೆಚ್.ಎಸ್.ನಂಜಪ್ಪ, ಜಿ.ಮಡಿವಾಳಪ್ಪ, ಬಿ.ಎಂ.ಮುನಿರಾಜು, ಶಿಕ್ಷಕರ ಸಂಘದ ಪದಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತರರಿದ್ದರು.

'ವೃಕ್ಷ ರಕ್ಷಾ ಬಂಧನ' ಕಾರ್ಯಕ್ರಮದಡಿ ವಿದ್ಯಾರ್ಥಿಗಳಿಗೆ ವೃಕ್ಷಗಳ ಸಂರಕ್ಷಣೆ ಬಗ್ಗೆ ಅರಿವು



ಮೈಸೂರು,ಸೆ.5(ಪಿಎಂ)–ಮೈಸೂರಿನ ಬೋಗಾದಿ ಮುಖ್ಯರಸ್ತೆಯಲ್ಲಿರುವ ಪ್ರತಿ ಎಲೈಟ್ ಪಬ್ಲಿಕ್ ಶಾಲೆ ಆವರಣದಲ್ಲಿ ಜಿಎಸ್‌ಎಸ್ ಫೌಂಡೇಷನ್ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ 'ವೃಕ್ಷ ರಕ್ಷಾ ಬಂಧನ' ವಿನೂತನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವೃಕ್ಷಗಳ ಸಂರಕ್ಷಣೆ ಕುರಿತು ಅರಿವು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಅಪ್ಪಾದೇಶ್ ಮೈಸೂರು ಕಾರ್ಯದರ್ಶಿ ಜಿ.ಎಸ್.ಗಣೇಶ್ ಮಾತನಾಡಿ, ರಕ್ಷಾ ಬಂಧನದ ಮಹತ್ವ ಮತ್ತು ಹಿನ್ನೆಲೆಯನ್ನು ತಿಳಿಸಿದರು. ಅಲ್ಲದೆ, ಇತಿಹಾಸದಲ್ಲಿ ದಾಖಲಾಗಿರುವ ರಾಜಸ್ಥಾನದ ಜೋಧಪುರದಲ್ಲಿ ನಡೆದ ವೃಕ್ಷಗಳ ಹನನ ವಿರೋಧಿ ಹೋರಾಟ ಹಾಗೂ ಮಾತಾ ಅಮೃತಾದೇವಿ ಮತ್ತು ಅವರ ಸಂಗಡಿಗರು ಹುತಾತ್ಮರಾದ ಬಗ್ಗೆ ವಿವರಿಸಿದರು. ಅಲ್ಲದೆ, ವೃಕ್ಷ ರಕ್ಷಣೆ ಹಾಗೂ ಪರಿಸರ ರಕ್ಷಣೆಯಲ್ಲಿ ಮಕ್ಕಳ ಪಾತ್ರದ ಬಗ್ಗೆ ಹೇಳಿದರು. ಜಿಎಸ್‌ಎಸ್ ಫೌಂಡೇಷನ್ ಸಂಸ್ಥಾಪಕ ಡಿ.ಶ್ರೀಹರಿ ಮಾತನಾಡಿ, ಪಂಚಭೂತಗಳಾದ ವಾಯು, ನೀರು, ಅಗ್ನಿ, ಭೂಮಿ ಹಾಗೂ ಆಕಾಶಗಳ ಮಹತ್ವವನ್ನು ಪರಿಚಯಿಸಿದರು. ಅಲ್ಲದೆ, ವಾಯುವಿನ ಮಹತ್ವ, ವಾಯುವಿನ ಆರ್ಥಿಕ ಮೌಲ್ಯದ ಬಗ್ಗೆ ಸವಿವರವಾಗಿ ತಿಳಿಸಿದರು. ಇಂದು ನಾವು ವೃಕ್ಷಗಳನ್ನು ಪೋಷಣೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ತೊಂದರೆ ಅನುಭವಿಸುವವರು ನಾವೇ ಎಂದರು.

ಇದೇ ವೇಳೆ ಎಲ್ಲಾ ಮಕ್ಕಳಿಗೆ ಸಸಿಗಳನ್ನು ವಿತರಿಸಿ, ರಕ್ಷೆಯನ್ನು ಕಟ್ಟಲಾಯಿತು. ಕಾರ್ಯಕ್ರಮದಲ್ಲಿ ಶಾಲೆ ಸಂಸ್ಥಾಪಕ ವಿ.ವೆಂಕಟೇಶ್, ಸಹ ಸಂಸ್ಥಾಪಕ ಜಯಶ್ರೀ, ಆಡಳಿತ ಮಂಡಳಿ ಕಾರ್ಯದರ್ಶಿ ಕಾರ್ತಿಕ್ ವಿ.ಕಶ್ಯಪ್, ಪ್ರಾಂಶುಪಾಲೆ ವಿ.ಚಿತ್ರ, ಜಿಎಸ್‌ಎಸ್ ಫೌಂಡೇಷನ್ ರೂಪಶ್ರೀ ಮತ್ತಿತರರು ಹಾಜರಿದ್ದರು.


ಶತಮಾನದ ಹಿಂದೆಯೇ ತಾತಯ್ಯನವರು ಕಡ್ಡಾಯ ಶಿಕ್ಷಣಕ್ಕೆ ಮುನ್ನುಡಿ ಬರೆದರು

● ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಸ್ಮರಣೆ ● ತಾತಯ್ಯನವರ ಕೊಡುಗೆ ಅವಿಸ್ಮರಣೀಯ

ಮೈಸೂರು, ಸೆ.5(ಎಸ್‌ಬಿಡಿ)– ಮೈಸೂರು ಸಂಸ್ಥಾನದ ರಾಜಗುರು ಮಗ್ಗೆ ವೆಂಕಟಕೃಷ್ಣಯ್ಯ (ತಾತಯ್ಯನವರು) ಶತಮಾನದ ಹಿಂದೆಯೇ ಕಡ್ಡಾಯ ಶಿಕ್ಷಣಕ್ಕೆ ಮುನ್ನುಡಿ ಬರೆದರು ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಮೈಸೂರು ನಗರ ಪಾಲಿಕೆ ವತಿಯಿಂದ ನಗರ ಬಸ್ ನಿಲ್ದಾಣದ ಬಳಿಯ ತಾತಯ್ಯ ಉದ್ಯಾನದಲ್ಲಿ ಆಚರಿಸಲಾದ ತಾತಯ್ಯನವರ 179ನೇ ಜಯಂತಿ ಕಾರ್ಯಕ್ರಮದಲ್ಲಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಶಾಸಕ ಶ್ರೀವತ್ಸ ದೇಶಾದ್ಯಂತ ಇಂದು ಶಿಕ್ಷಕರ ದಿನವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಜೊತೆಗೆ ಮೈಸೂರು ಸಂಸ್ಥಾನದಲ್ಲಿ ಪ್ರತಿಯೊಬ್ಬರಿಗೂ ಶಿಕ್ಷಣ ದೊರಕಬೇಕೆಂಬ ಯೋಜನೆ ರೂಪಿಸುವ ಮೂಲಕ ಕಡ್ಡಾಯ ಶಿಕ್ಷಣಕ್ಕೆ ಮುನ್ನುಡಿ ಬರೆದ ವೆಂಕಟಕೃಷ್ಣಯ್ಯನವರನ್ನು ಸ್ಮರಿಸಬೇಕಿದೆ ಎಂದರು.

ತಾತಯ್ಯ ಎಂದೇ ಪ್ರಸಿದ್ಧರಾಗಿದ್ದ ವೆಂಕಟಕೃಷ್ಣಯ್ಯನವರು ಸಮಾಜಕ್ಕೆ ನೀಡಿರುವ ಕೊಡುಗೆ ಅವಿಸ್ಮರಣೀಯ. ಶಿಕ್ಷಣ, ಪತ್ರಿಕೋದ್ಯಮ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ಅವಿರತ ಶ್ರಮಿಸಿದ್ದಾರೆ. ತಾತಯ್ಯನವರ ಸಾಧನೆ ಅರಿತಿದ್ದ ಮಹಾತ್ಮ ಗಾಂಧೀಜಿ ಮೈಸೂರು ಭೇಟಿ ಸಂದರ್ಭದಲ್ಲಿ



ತಾತಯ್ಯ ಅವರನ್ನು ವೃದ್ಧ ಪಿತಾಮಹ ಎಂದು ಬಣ್ಣಿಸಿದ್ದರು. ಶಿಕ್ಷಕರಾಗಿದ್ದ ತಾತಯ್ಯ, ಸುಬ್ಬರಾಯನಕೆರೆ ಸಮೀಪ ನಿರ್ಮಿಸಿದ ಅನಾಥಾಲಯ, ದಾನ ನೀಡಿದ ಬಾಲಬೋಧಿನಿ ಶಾಲೆ ಸಾವಿರಾರು ಮಂದಿಗೆ ದಾರಿದೀಪವಾಗಿದೆ. ಇಲ್ಲಿ ಆಸರೆ ಮತ್ತು ಶಿಕ್ಷಣ ಪಡೆದವರು ವಿಶ್ವದೆಲ್ಲೆಡೆ ಅತ್ಯುನ್ನತ ಸ್ಥಾನಗಳಲ್ಲಿದ್ದಾರೆ ಎಂದು ತಿಳಿಸಿದರು.

ಮೇಯರ್ ಶಿವಕುಮಾರ್ ಮಾತನಾಡಿ, ತಾತಯ್ಯನವರು ಸರ್ ಎಂ.ವಿಶ್ವೇಶ್ವರಯ್ಯನವರಿಗೂ ಮಾರ್ಗದರ್ಶನ ನೀಡಿದ್ದರು. ಶತಮಾನದ ಹಿಂದೆಯೇ ಮೈಸೂರಿನಲ್ಲಿ ಶಿಕ್ಷಣ, ಸಹಕಾರ, ವೈದ್ಯಕೀಯ, ಪತ್ರಿಕೋದ್ಯಮ, ಕೈಗಾರಿಕೆ, ಹೀಗೆ ಹಲವು ಕ್ಷೇತ್ರಗಳ ಅಭಿವೃದ್ಧಿಗೆ ಶ್ರಮಿಸಿದರು. ಕಾರ್ಖಾನೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಿದ್ದರು. ಅವರ ಮಾರ್ಗದರ್ಶನದಿಂದ ಅನೇಕ ಬಡವರು ಬದುಕು ಕಟ್ಟಿಕೊಂಡಿದ್ದಾರೆ. ತಾತಯ್ಯ ಅವರ ಸೇವೆ, ಸಾಧನೆ, ಆದರ್ಶಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ಅಗತ್ಯವಿದೆ. ಈ ಮೂಲಕ ಅವರಲ್ಲಿ ಸೇವಾಮನೋಭಾವ ಮೂಡಿಸಲು ಸಾಧ್ಯವಿದೆ ಎಂದು ಅಭಿಪ್ರಾಯಿಸಿದರು.

ತಾತಯ್ಯ ಅನಾಥಾಲಯ ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಸುಂದರೇಶ್ ಮಾತನಾಡಿ, ತಾತಯ್ಯ ಉದ್ಯಾನದಲ್ಲಿ ವಾಚನಾಲಯ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಕಲಿಕಾ ಪುಸ್ತಕ ಭಂಡಾರ ಕಲ್ಪಿಸಿಕೊಡಬೇಕು ಎಂದು ನಗರ ಪಾಲಿಕೆಗೆ ಮನವಿ ಮಾಡಿದರು. ಮುಂದಿನ ವರ್ಷದಿಂದ ಜಿಲ್ಲಾಡಳಿತ ಹಾಗೂ ನಗರ ಪಾಲಿಕೆ ಸಹಯೋಗದಲ್ಲಿ ಪುರಭವನದಲ್ಲಿ ತಾತಯ್ಯನವರ ಜಯಂತಿ ಆಚರಿಸಿ, ಸಾಧಕರಿಗೆ 'ತಾತಯ್ಯ ಪ್ರಶಸ್ತಿ' ಪ್ರದಾನ ಮಾಡಬೇಕು ಎಂದು ಯುವ ಮುಖಂಡ ಅಜಯ್ ಶಾಸ್ತ್ರಿ ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಬಿಜೆಪಿ ಹಿಂದುಳಿದ ವರ್ಗದ ನಗರ ಘಟಕದ ಅಧ್ಯಕ್ಷ ಜೋಗಿ ಮಂಜು, ಮುಖಂಡರಾದ ಸಚಿನ್, ಚರಣ್, ವಿಘ್ನೇಶ್ವರ ಭಟ್, ಸುದರ್ಶನ್, ಶ್ರೀನಿವಾಸ್, ಲಕ್ಷ್ಮಿ, ಪಾಪಣ್ಣಿ, ಗೋಪಾಲ್ ಕೃಷ್ಣ ವಿಜಯ್, ಸಚಿನ್, ಚರಣ್, ಪ್ರವೀಣ್, ವಿನೋದ್, ಸುಕನ್ಯಾ ಚಂದ್ರಕಲಾ ಮತ್ತಿತರಿದ್ದರು.

ಕರ್ನಾಟಕ ರಾಜ್ಯ ರೈತ ಸಂಘ ಪ್ರತಿಭಟನೆ



ಮೈಸೂರು, ಸೆ.5(ಜಿಎ)–ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ದಾರ್ಥ ಬಡಾವಣೆಯಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ವಿವಿಧ ಬೇಡಿಕೆಗಳಿಗಾಗಿ ಪ್ರತಿಭಟನೆ ಮಾಡಿದ ಕರ್ನಾಟಕ ರಾಜ್ಯ ರೈತ ಸಂಘವು ತಮ್ಮ ಹಕ್ಕೊತ್ತಾಯ ಪತ್ರವನ್ನು ಪ್ರಧಾನ ಮಂತ್ರಿ ಮತ್ತು ಮುಖ್ಯಮಂತ್ರಿಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಿತು.

ರಾಜ್ಯ ಮತ್ತೆ ಬರಗಾಲಕ್ಕೆ ತುತ್ತಾಗಿದ್ದು, ಈಗಾಗಲೇ ರಾಜ್ಯ ಸರ್ಕಾರ 130 ತಾಲೂಕುಗಳನ್ನು ಬರ ಪ್ರದೇಶವೆಂದು ಘೋಷಿಸಲು ಆಲೋಚನೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯದ ಬರವನ್ನು ಎದುರಿಸಲು ಹೆಚ್ಚು ಅನುದಾನವನ್ನು ತುರ್ತಾಗಿ ಬಿಡುಗಡೆ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಕಾವೇರಿ ಜಲ ವಿವಾದ ತೀರ್ಪಿನಲ್ಲಿ ನ್ಯಾಯ ಮಂಡಲಿಯಾಗಲಿ ಅಥವಾ ಸರ್ವೋಚ್ಚ ನ್ಯಾಯಾಲಯವಾಗಲಿ ಸಂಕಷ್ಟ ಸೂತ್ರಕ್ಕೆ ಸ್ಪಷ್ಟವಾದ ಮಾನದಂಡವನ್ನು ರೂಪಿಸಿರುವುದಿಲ್ಲ. ಈ ಕಾರಣದಿಂದಾಗಿ ಮಳೆ ಕೊರತೆ ಸಂದರ್ಭದಲ್ಲಿ ವಿವಾದವು ಹೆಚ್ಚಾಗುತ್ತಿದೆ. ಆದ್ದರಿಂದ ಕೇಂದ್ರ ಸರ್ಕಾರವು ಈ ಸಂಬಂಧ ಸೂಕ್ತ ಸಂಕಷ್ಟ ಸೂತ್ರವನ್ನು ರೂಪಿಸಲು ಮುಂದಾಗಬೇಕಿದೆ ಎಂದು ಒತ್ತಾಯಿಸಿದರು.

ರಾಜ್ಯದ 15 ಜಿಲ್ಲೆಗಳಲ್ಲಿ ತೆಂಗು ಬೆಳೆಯುತ್ತಿದ್ದು, ಕೊಬ್ಬರಿ ಬೆಲೆ ಕುಸಿತದಿಂದ ರೈತರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಕ್ವಿಂಟಾಲ್ ಕೊಬ್ಬರಿಗೆ 20 ಸಾವಿರ ರೂ. ನಿಗದಿ ಮಾಡುವ ಮೂಲಕ ತೆಂಗು ಬೆಳೆಗಾರರನ್ನು ರಕ್ಷಿಸಬೇಕಾಗಿದೆ ಎಂದರು.

ಈಗಾಗಲೇ ರಾಜ್ಯದಲ್ಲಿ 130 ತಾಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರ, ಕೂಡಲೇ ಘೋಷಣೆ ಮಾಡಬೇಕು. ಬರವನ್ನು ಎದುರಿಸಲು ಸಜ್ಜಾಗಬೇಕಿದ್ದು, ಅದರೊಟ್ಟಿಗೆ ಬೆಳೆ ನಷ್ಟಕ್ಕೆ ವೈಜ್ಞಾನಿಕ ಪರಿಹಾರ ನೀಡಬೇಕೆಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಕೃಷಿ ಸಾಲ ವಸೂಲಾತಿಯನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು. ಪಂಪ್‌ಸೆಟ್‌ಗಳಿಗೆ 3 ಫೇಸ್ ವಿದ್ಯುತ್ ಅನ್ನು ಕನಿಷ್ಠ 7 ಗಂಟೆ ಕಾಲ ಸರಬರಾಜು ಮಾಡಬೇಕು. ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಿ, ಕಾನೂನು ಹೋರಾಟಕ್ಕೆ ಮುಂದಾಗಿ ರಾಜ್ಯದ ರೈತರನ್ನು ರಕ್ಷಿಸಿ ಎಂದು ಒತ್ತಾಯಿಸಿದ್ದಾರೆ.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಬಡಗಲಪುರ ನಾಗೇಂದ್ರ, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜ್, ರೈತ ಮುಖಂಡ ಪ್ರಸನ್ನ ಎನ್.ಗೌಡ, ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ಪ್ರಭಾಕರ್, ಮರಂಕಯ್ಯ, ಮಹದೇವ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ತಮಿಳುನಾಡಿಗೆ ಕಾವೇರಿ ನೀರು: ಪ್ರತಿಭಟನೆ



ಮೈಸೂರು, ಸೆ.5(ಜಿಎ)–ರಾಜ್ಯ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸುತ್ತಿರುವುದನ್ನು ಖಂಡಿಸಿ, ಜಯ ಕರ್ನಾಟಕ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ಮೈಸೂರಿನ ಸಿದ್ದಾರ್ಥ ಬಡಾವಣೆಯಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಖಾಲಿ ಬಿಂದಿಗೆಯೊಂದಿಗೆ ರಾಜ್ಯ ಸರ್ಕಾರದ ವಿರುದ್ಧ ವಿವಿಧ ಘೋಷಣೆ ಕೂಗಿ ಜಯ ಕರ್ನಾಟಕ ಸಂಘಟನೆ ಪದಾಧಿಕಾರಿಗಳು ಪ್ರತಿಭಟಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಕಾವೇರಿ ಜಲಾನಯನ ಪ್ರದೇಶದಲ್ಲಿ ವಾಡಿಕೆಯಷ್ಟು ಮಳೆಯಾಗದ ಕಾರಣ ಜಲಾಶಯ ಭರ್ತಿಯಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ರೈತರ ಪರವಾಗಿ ಮೇಲ್ಮನವಿ ಸಲ್ಲಿಸುವ ಮೂಲಕ ನೈಜ ಪರಿಸ್ಥಿತಿ ಮನದಟ್ಟು ಮಾಡುವ ಅವಕಾಶವಿದ್ದರೂ ರೈತರೇ ಸುಪ್ರಿಂಕೋರ್ಟ್‌ಗೆ ಹೋಗಿ ಎಂದು ಉಪ ಮುಖ್ಯಮಂತ್ರಿ ಉಡಾಫೆ ಹೇಳಿಕೆ ನೀಡುತ್ತಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್ ತೀರ್ಪು ಬರುವವರೆಗೂ 5 ಸಾವಿರ ಕ್ಯುಸೆಕ್ ನೀರನ್ನು ಹರಿಸುವಂತೆ ಕಾವೇರಿ ಪ್ರಾಧಿಕಾರವು ತಿಳಿಸಿರುವುದು ಅವೈಜ್ಞಾನಿಕವಾಗಿದ್ದು, ಇಂತಹ ತೀರ್ಮಾನದಿಂದ ರೈತ ಮೇಲೆ ದುಷ್ಪರಿಣಾಮ ಬೀರುವುದಲ್ಲದೆ ರಾಜ್ಯದ ಜನತೆಗೆ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುವ ಲಕ್ಷಣಗಳಿರುವುದರಿಂದ, ರಾಜ್ಯ ಸರ್ಕಾರ ಕೋರ್ಟ್‌ನಿಂದ ತೀರ್ಪು ಬರುವವರೆಗೂ ತಮಿಳುನಾಡಿಗೆ ನೀರು ಹರಿಸಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಶ್ರೀಧರ್‌ನಾಯಕ, ಸಂಘಟನಾ ಕಾರ್ಯದರ್ಶಿ ವಿಜಯಗೌಡ, ಜಿಲ್ಲಾ ಉಪಾಧ್ಯಕ್ಷ ಕಾಂತರಾಜು, ಮಂಜುನಾಥ್, ಲಿಂಗರಾಜು, ಸುರೇಶ್, ರಾಜು, ರಂಗಸ್ವಾಮಿ, ಆಶಾ, ವರಲಕ್ಷ್ಮಿ ಮತ್ತು ರೂಪ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು.

ನನ್ನ ವಿರೋಧಿಗಳು ಸಹ ನನ್ನ ಗುರುಗಳು: ರಾಹುಲ್ ಗಾಂಧಿ

ನವದೆಹಲಿ, ಸೆ.5– ನನ್ನ ವಿರೋಧಿಗಳನ್ನು ಕೂಡ ಶಿಕ್ಷಕರು ಎಂದು ಪರಿಗಣಿಸುತ್ತೇನೆ ಎಂದಿದ್ದಾರೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ. ಸಮಾಜದಲ್ಲಿ ಸಮಾನತೆಯ ಜ್ಞಾನವನ್ನು ನಮಗೆ ನೀಡಿದ ಮಹಾತ್ಮಾ ಗಾಂಧಿ, ಗೌತಮ ಬುದ್ಧ, ಶ್ರೀ ನಾರಾಯಣ ಗುರುಗಳಂತಹ ಮಹಾನ್ ವ್ಯಕ್ತಿಗಳನ್ನು ನಾನು ನನ್ನ ಗುರುಗಳು ಎಂದು ಪರಿಗಣಿಸುತ್ತೇನೆ ಎಂದು ರಾಹುಲ್ ಗಾಂಧಿ ಫೇಸ್ ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.

ಪ್ರಧಾನಿ ಮೋದಿ ನಿರ್ಣಯ ಮಂಡನೆ ಸಾಧ್ಯತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು INDIA ವನ್ನು 'ಭಾರತ್'



ಎಂದು ಮರುನಾಮಕರಣ ಮಾಡುವ ನಿರ್ಣಯ ಮಂಡಿಸುವ ಸಾಧ್ಯತೆಯಿದೆ. ಸೆಪ್ಟೆಂಬರ್ 18 ರಿಂದ 22 ರವರೆಗೆ ಐದು ದಿನಗಳ ವಿಶೇಷ ಸಂಸತ್ ಅಧಿವೇಶನ ನಡೆಯಲಿದೆ. ಈ ಅವಧಿಯಲ್ಲಿ ಹೊಸ ಸಂಸತ್ ಭವನದಲ್ಲಿ ನಿರ್ಣಯವನ್ನು ಪ್ರಧಾನಿ ಮಂಡಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ವಿಶೇಷ ಸಂಸತ್ ಅಧಿವೇಶನದಲ್ಲಿ ಪ್ರಶ್ನೋತ್ತರ ಸಮಯ, ಶೂನ್ಯ ಸಮಯ ಮತ್ತು ಖಾಸಗಿ ಸದಸ್ಯರ ವ್ಯವಹಾರ ಇರುವುದಿಲ್ಲ. ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ನಡೆಯುವ ಅಧಿವೇಶನಗಳಿಗೆ ಇದನ್ನು ನಿರ್ವಹಿಸಲಾಗುತ್ತದೆ.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ನಿಟ್ಟಿನಲ್ಲಿ ವಿರೋಧ ಪಕ್ಷಗಳು ರಚಿಸಿಕೊಂಡಿರುವ ಮೈತ್ರಿಕೂಟಕ್ಕೆ INDIA ಎಂದು ಹೆಸರಿಟ್ಟಿರುವುದರಿಂದ, ಇದು ಜನರಲ್ಲಿ ಅನಗತ್ಯ ಗೊಂದಲ ಮೂಡಿಸುತ್ತಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ದೇಶದ ಹೆಸರನ್ನು ಭಾರತ್ ಎಂದು ಮರುನಾಮಕರಣ ಮಾಡಲು ಪ್ರಧಾನಿ ಮುಂದಾಗಿದ್ದಾರೆ ಎನ್ನಲಾಗಿದೆ.

ನಮ್ಮ ದೇಶಕ್ಕೆ ಇಂಡಿಯಾ ಒಪ್ಪಿತ ಹೆಸರು

ಬೆಂಗಳೂರು, ಸೆ.5– 'ಇಂಡಿಯಾ' ಎಂಬುದು ದೇಶಕ್ಕೆ ಒಪ್ಪಿತ ಪದವಾಗಿದ್ದು,



ಅದನ್ನು 'ಭಾರತ್' ಎಂದು ಬದಲಾಯಿಸುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಹೇಳಿದ್ದಾರೆ.

'ಇಂಡಿಯಾ' ಪದವನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ ಮತ್ತು ಅದನ್ನು 'ಭಾರತದ ಸಂವಿಧಾನ' ಎಂದು ಕರೆಯಲಾಗುತ್ತದೆ ಎಂದು ತಿಳಿಸಿದರು. ಜಿ–20 ಔತಣಕೂಟದ ಆಹ್ವಾನ ಪತ್ರಿಕೆಯಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ಬರೆಯಲಾಗಿದೆ. ಈ ಆಹ್ವಾನ ಪತ್ರಿಕೆ ವೈರಲ್ ಆದ ನಂತರ ಭುಗಿಲೆದ್ದ ವಿವಾದದ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ, ನಮ್ಮ ಸಂವಿಧಾನದಲ್ಲಿ 'ಇಂಡಿಯಾ' ಎಂದು ಸಂಯೋಜಿಸಲಾಗಿದೆ. 'ಇಂಡಿಯಾ' ಎಂಬುದು ನಮ್ಮ ದೇಶಕ್ಕೆ ಒಪ್ಪಿತ ಹೆಸರು ಎಂದರು. ಇಂಡಿಯಾ ಹೆಸರನ್ನು ಭಾರತ್ ಮಾಡುವ ಅವಶ್ಯಕತೆ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ. ದೇಶದ ಹೆಸರನ್ನು 'ಇಂಡಿಯಾ'ದಿಂದ 'ಭಾರತ್' ಎಂದು ಬದಲಾಯಿಸಲು ಸರ್ಕಾರ ಪ್ರಯತ್ನಿಸುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿರುವ ನಡುವೆಯೇ 'ದಿ ಪ್ರೆಸಿಡೆಂಟ್ ಆಫ್ ಭಾರತ್' ಹೆಸರಿನಲ್ಲಿ ನೀಡಲಾದ ಜಿ–20 ಔತಣಕೂಟದ ಆಹ್ವಾನ ಪತ್ರಿಕೆ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ.

ಒಂದನೇ ಪುಟದಿಂದ

'ಪ್ರೆಸಿಡೆಂಟ್ ಆಫ್ ಭಾರತ್'

ದೇಶದ ಹೆಸರು ಮರು ನಾಮಕರಣ ಮಾಡುವ ವಿವಾದದ ಸಮಯದಲ್ಲಿ ಅಮಿತಾಬ್ ಟ್ವೀಟ್ ಮಾಡಿರುವುದರಿಂದ ಬಿಗ್ 'ಬಿ' ಭಾರತದ ಹೆಸರು ಬದಲಾವಣೆಯ ಪರವಾಗಿ ತಮ್ಮ ಬೆಂಬಲ ಪ್ರದರ್ಶಿಸಿದ್ದಾರೆ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ. ಅವರ ಅಭಿಮಾನಿಗಳು ಅವರನ್ನು ಬೆಂಬಲಿಸಿದ್ದಾರೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ದೇಶದ ನಾಗರಿಕತೆಯು ಅಮೃತ ಕಾಲದ ಕಡೆಗೆ ಧೈರ್ಯದಿಂದ ಮುನ್ನಡೆಯುತ್ತಿರುವುದಕ್ಕೆ ನನಗೆ ಸಂತೋಷ ಮತ್ತು ಹೆಮ್ಮೆಯಿದೆ ಎಂದು ಟ್ವೀಟ್ ಮಾಡಿ, ಗಣರಾಜ್ಯ ಭಾರತ–ನಮ್ಮ ನಾಗರಿಕತೆಯು ಅಮೃತ ಕಾಲದ ಕಡೆಗೆ ಧೈರ್ಯದಿಂದ ಮುನ್ನಡೆಯುತ್ತಿರುವುದಕ್ಕೆ ಸಂತೋಷ ಮತ್ತು ಹೆಮ್ಮೆಯಿದೆ ಎಂದು ಬರೆದುಕೊಂಡಿದ್ದಾರೆ. ಬಿಜೆಪಿ ರಾಜ್ಯಸಭಾ ಸಂಸದ ಹರನಾಥ್ ಸಿಂಗ್ ಯಾದವ್ ಕೂಡ 'ಇಂಡಿಯಾ' ಬದಲಿಗೆ 'ಭಾರತ' ಪದವನ್ನು ಬಳಸಬೇಕೆಂದು ಇಡೀ ದೇಶ ಒತ್ತಾಯಿಸುತ್ತಿದೆ ಎಂದು ಹೇಳಿದ್ದಾರೆ. ಇಂಡಿಯಾ ಎಂಬ ಪದವು ಬ್ರಿಟಿಷರು ನಮಗೆ ನೀಡಿದ ನಿಂದನೆಯಾಗಿದೆ ಆದರೆ 'ಭಾರತ್' ಪದವು ನಮ್ಮ ಸಂಸ್ಕೃತಿಯ ಸಂಕೇತವಾಗಿದೆ. ನಮ್ಮ ಸಂವಿಧಾನದಲ್ಲಿ ಬದಲಾವಣೆಯಾಗಬೇಕು. ಅದಕ್ಕೆ 'ಭಾರತ್' ಎಂಬ ಪದವನ್ನು ಸೇರಿಸಬೇಕು ಎಂದು ನಾನು ಬಯಸುತ್ತೇನೆ ಎಂದು ಹೇಳಿದ್ದಾರೆ.

ವರ್ಷಕ್ಕೆ 3 ಪರೀಕ್ಷೆ

ಈ ಪರೀಕ್ಷೆಗಳ ವೇಳಾಪಟ್ಟಿಯನ್ನು ಇಲಾಖೆ ಬಿಡುಗಡೆ ಮಾಡಲಿದೆ. ಹೊಸ ನಿಯಮಾವಳಿ ಪ್ರಕಾರ ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾದರೂ ಮುಂದಿನ ತರಗತಿಗಳಿಗೆ ಹೋಗಲು ಅವಕಾಶ ಮಾಡಿಕೊಡಲಾಗುವುದು.

ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಪಡೆದ ಅಂಕಗಳನ್ನು ತೇರ್ಗಡೆಗೆ ಅಗತ್ಯವಿರುವ ಒಟ್ಟು ಕನಿಷ್ಠ ಅಂಕಗಳೆಂದು ಪರಿಗಣಿಸಲಾಗುತ್ತಿದೆ.

ವಿಶ್ವಮಾನವರ ಮಾಡುವುದು ಶಿಕ್ಷಣದ ಗುರಿ: ಇದೇ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿದ್ಯೆ ಕಲಿಸುವುದಷ್ಟೆ ಶಿಕ್ಷಣದ ಉದ್ದೇಶ ಅಲ್ಲ, ಮಕ್ಕಳನ್ನು ವಿಶ್ವಮಾನವರನ್ನಾಗಿ ರೂಪಿಸುವುದೂ ಶಿಕ್ಷಣದ ಗುರಿ ಎಂದರು.

ರೈತರು, ಸೈನಿಕರು, ಶಿಕ್ಷಕರು ಆದರ್ಶ ಸಮಾಜದ ಆಧಾರ ಸ್ತಂಭಗಳು. ಇವರು ಸಮಾಜದ, ದೇಶದ ಭವಿಷ್ಯ ರೂಪಿಸುವ ಕಾಯಕ ಜೀವಿಗಳು. ಡಿಗ್ರಿ ಪಡೆದು, ಡಾಕ್ಟರೇಟ್ ಪಡೆದರೂ ಅವರಲ್ಲಿ ವೈಜ್ಞಾನಿಕ ಮನೋಭಾವ, ವೈಚಾರಿಕತೆ ಬೆಳೆಯದಿದ್ದರೆ, ತಲೆಯೊಳಗೆ ಮೌಢ್ಯ ತುಂಬಿಕೊಂಡಿದ್ದರೆ ಅವರನ್ನು ಸುಶಿಕ್ಷಿತರು ಎಂದು ಕರೆಯಲು ಸಾಧ್ಯವಿಲ್ಲ, ಡಿಗ್ರಿ ಪಡೆದವರೇ ಹೆಚ್ಚೆಚ್ಚು ಜಾತಿವಾದಿಗಳಾದರೆ ಶಿಕ್ಷಣ ಏಕೆ ಪಡೆಯಬೇಕು ಎಂದರು. ಸಂವಿಧಾನ ಎಲ್ಲರಿಗೂ ಶಿಕ್ಷಣದ ಅವಕಾಶವನ್ನು ಒದಗಿಸಿತು. ಸ್ವಾತಂತ್ರ್ಯ ಬಂದು 76 ವರ್ಷವಾದರೂ ಶೇ. 100 ಸಾಕ್ಷರತೆ ಸಾಧ್ಯವಾಗಿಲ್ಲ. ಶಿಕ್ಷಣದಿಂದ ವಂಚಿತರಾದವರು ಅಸಮಾನತೆಗೆ ಬಲಿಯಾಗುತ್ತಾರೆ. ಸ್ವಾತಂತ್ರ್ಯ ಹೋರಾಟಗಾರರ ಕನಸು ನನಸಾಗಬೇಕಾದರೆ ಎಲ್ಲರಿಗೂ ವೈಜ್ಞಾನಿಕ, ವೈಚಾರಿಕ ಶಿಕ್ಷಣ ದೊರೆತು ದೇಶ ಪ್ರಗತಿ ಪಥದಲ್ಲಿ ಮುನ್ನಡೆಯಬೇಕು ಎಂದರು. ಈ ಸಂದರ್ಭದಲ್ಲಿ 43 ಮಂದಿ ಶಿಕ್ಷಕರುಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.




ಮೈಸೂರಿನ ವಿಜಯನಗರ 3ನೇ ಹಂತದ ಎಸ್‌ಬಿಐ ಶಾಖೆಯಲ್ಲಿ ಮಂಗಳವಾರ ಶಿಕ್ಷಕರ ದಿನ ಆಚರಿಸಲಾಯಿತು. ಶಾಖಾ ವ್ಯವಸ್ಥಾಪಕ ಪ್ರದೀಪ್ ಕಶ್ಯಪ್, ನಿವೃತ್ತ ತಹಸೀಲ್ದಾರ್ ಡಾ.ವಿ.ರಂಗನಾಥ್, ನಿವೃತ್ತ ಪ್ರಾಂಶುಪಾಲ ಪ್ರೊ.ಶ್ರೀನಿವಾಸ ಮತ್ತಿತರರು ಭಾಗವಹಿಸಿದ್ದರು.

ಹೆಬ್ಬಾಳಿನಲ್ಲಿ ಪಿಓಪಿ ಗಣಪತಿ ವಿಗ್ರಹಗಳ ವಶಪಡಿಸಿಕೊಂಡ ಪಾಲಿಕೆ







ಮೈಸೂರು, ಸೆ.5(ಆರ್‌ಕೆ)–ನಿಷೇಧಿಸಿದ್ದರೂ ಮಾರಾಟ ಮಾಡುತ್ತಿದ್ದ ಪಿಓಪಿ ಗಣಪತಿ ವಿಗ್ರಹಗಳನ್ನು ಮೈಸೂರು ಮಹಾನಗರ ಪಾಲಿಕೆ ಆರೋಗ್ಯ ವಿಭಾಗದ ಅಧಿಕಾರಿಗಳು ಹೆಬ್ಬಾಳಿನಲ್ಲಿ ಇಂದು ವಶಪಡಿಸಿಕೊಂಡರು.

ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಹೆಬ್ಬಾಳಿನ ಪೊಲೀಸ್ ಠಾಣೆ ಪಕ್ಕದ ಖಾಲಿ ಜಾಗದಲ್ಲಿ ಮಾರಾಟಕ್ಕಿರಿಸಿದ್ದ ಪಿಓಪಿ ಗಣಪತಿ ವಿಗ್ರಹಗಳನ್ನು ವಶಕ್ಕೆ ಪಡೆದ ಅಧಿಕಾರಿಗಳು, ಪಾಲಿಕೆ ವಾಹನದಲ್ಲಿ ಕೊಂಡೊಯ್ದರು. ಹೆಬ್ಬಾಳು ಠಾಣೆ ಪೊಲೀಸರ ಭದ್ರತೆ ಪಡೆದು ಕಾರ್ಯಾಚರಣೆ ನಡೆಸಿದ ಪಾಲಿಕೆ ಆರೋಗ್ಯಾಧಿಕಾರಿ ಡಾ. ವೆಂಕಟೇಶ ಹಾಗೂ ಹೆಲ್ತ್ ಇನ್ಸ್‌ಪೆಕ್ಟರ್ ವಿರುದ್ಧ ಹರಿಹಾಯ್ದ ಮಾರಾಟಗಾರರು, ತಾವು ಪೇಪರ್‌ನಿಂದ ತಯಾರಿಸಿದ ವಿಗ್ರಹಗಳನ್ನಷ್ಟೇ ಮಾರುತ್ತಿದ್ದೇವೆ ಎಂದು ವಾದಿಸಿದರು. ನೀರಿನಲ್ಲಿ ಕರಗಬಲ್ಲ ಗಣೇಶನ ವಿಗ್ರಹಕ್ಕಷ್ಟೇ ಅನುಮತಿ ನೀಡಲಾಗಿದೆ. ಪರಿಸರ ಹಾಳು ಮಾಡುವ ಇತರ ವಿಗ್ರಹ ತಯಾರಿಕೆ, ಮಾರಾಟ ಹಾಗೂ ಪ್ರತಿಷ್ಠಾಪಿಸಬಾರದೆಂದು ಆದೇಶವಿರುವ ಕಾರಣ ತಾವು ಜಪ್ತಿ ಮಾಡುತ್ತಿದ್ದೇವೆಂದು ಅಧಿಕಾರಿಗಳು ಮನವರಿಕೆ ಮಾಡಿದರಾದರೂ ಕೆಲವರು ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಸ್ಥಳದಲ್ಲಿ ಗೊಂದಲದ ವಾತಾವರಣ ಉಂಟಾಗಿತ್ತು. ಕಡೆಗೆ ಪೊಲೀಸರು ಮಧ್ಯ ಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರು.

ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆ ನಿರ್ವಹಣೆಯ

ಲಲಿತಾ ಪ್ರೌಢಶಾಲೆಯಲ್ಲಿ ಶಿಕ್ಷಕರ ದಿನಾಚರಣೆ



ಮೈಸೂರು, ಸೆ.5(ಎಸ್‌ಬಿಡಿ)– ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆ ನಿರ್ವಹಣೆಯ ಮೈಸೂರು ಯಾದವಗಿರಿಯಲ್ಲಿರುವ 'ಲಲಿತಾ ಪ್ರೌಢಶಾಲೆ'ಯಲ್ಲಿ ಮಂಗಳವಾರ ಶಿಕ್ಷಕರ ದಿನ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷೆಯೂ ಆದ ನೈರುತ್ಯ ರೈಲ್ವೆ ಮೈಸೂರು ವಿಭಾಗೀಯ ವ್ಯವಸ್ಥಾಪಕಿ ಶಿಲ್ಪಿ ಅಗರ್ವಾಲ್ ಮಾತನಾಡಿ, ಉತ್ತಮ ಸಮಾಜ ರೂಪಿಸುವಲ್ಲಿ ಶಿಕ್ಷಕರು ಪ್ರಧಾನ ಪಾತ್ರ ವಹಿಸುತ್ತಾರೆ. ಶಿಕ್ಷಕ ವೃಂದ ಮಕ್ಕಳ ಭವಿಷ್ಯಕ್ಕಾಗಿ ಅಸಾಧಾರಣ ಸೇವೆ ನೀಡುತ್ತಿದೆ ಎಂದು ಪ್ರಶಂಸಿಸಿದರು.

ಪಾಠದ ಜೊತೆಗೆ ಸೂಕ್ತ ಮಾರ್ಗದರ್ಶನ ನೀಡಿ ಯುವ ಮನಸ್ಸುಗಳನ್ನು ಪ್ರೋತ್ಸಾಹಿಸುವ ಮೂಲಕ ರಾಷ್ಟ್ರದ ಭವಿಷ್ಯವನ್ನು ಗಟ್ಟಿಗೊಳಿಸಲು ಶಿಕ್ಷಕ ವೃಂದ ಮುಡಿಪಾಗಿದೆ. ಮುಂದಿನ ಪ್ರಜೆಗಳಿಗೆ ದಾರಿದೀಪವಾಗಿರುವ ಶಿಕ್ಷಕರ ಸೇವೆ ಅಮೂಲ್ಯವಾದುದು. ಶಿಕ್ಷಕರು ಕುತೂಹಲ ಸೃಷ್ಟಿಸುವ, ಜ್ಞಾನವನ್ನು ಪಸರಿಸುವ ಸಾಮಾಜಿಕ ಸೇನಾನಿಗಳಿದ್ದಂತೆ. ಮುಂದಿನ ಪೀಳಿಗೆಗೆ ಉಜ್ವಲ ಭವಿಷ್ಯ ನಿರ್ಮಿಸುವ ಹೊಣೆಗಾರಿಕೆ ಶಿಕ್ಷಕರ ಮೇಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರನ್ನು ಅಭಿನಂದಿಸಿ, ಗೌರವಿಸಲಾಯಿತು. ಇದೇ ವೇಳೆ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು. ಸಂಸ್ಥೆಯ ಕಾರ್ಯಕಾರಿ ಸದಸ್ಯರು ಉಪಸ್ಥಿತರಿದ್ದರು.

ಸೆ. 24, ಕೊಡಗು ಸಹಕಾರ ಸಂಘದ ವಾರ್ಷಿಕ ಮಹಾಸಭೆ

ಮೈಸೂರು: ಮೈಸೂರಿನ ಕೊಡಗು ಸಹಕಾರ ಸಂಘದ ವಾರ್ಷಿಕ ಮಹಾ ಸಭೆ ಸೆಪ್ಟೆಂಬರ್ 24 (ಭಾನುವಾರ) ಬೆಳಗ್ಗೆ 10.30ಕ್ಕೆ ಮೈಸೂರಿನ ಜಯಲಕ್ಷ್ಮೀಪುರಂನ ಸಂಘದ ಆವರಣದಲ್ಲಿ ನಡೆಯಲಿದೆ. ಸಂಘದ ಅಧ್ಯಕ್ಷರಾದ ಎ.ಸಿ. ನಂಜಮ್ಮ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಐದು ಗ್ಯಾರಂಟಿಯ ಪರಿಣಾಮಗಳ ಬಗ್ಗೆ ಮೈಗ್ರಾಪದಲ್ಲಿ ಗಂಭೀರ ಚರ್ಚೆ

ಮೈಸೂರು, ಸೆ.5(ಎಸ್‌ಪಿಎನ್)– ರಾಜ್ಯ ಸರ್ಕಾರ ಘೋಷಿಸಿರುವ ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಶಕ್ತಿ ಸೇರಿದಂತೆ ನಾನಾ ಯೋಜನೆಗಳಿಗೆ ವಾರ್ಷಿಕ ಸಾವಿರಾರು ಕೋಟಿ ವ್ಯಯವಾಗುತ್ತಿದೆ. ಇದರಿಂದ ಮುಂದಿನ ದಿನಗಳಲ್ಲಿ ತೆರಿಗೆದಾರರ ಮೇಲೆ ಮತ್ತಷ್ಟು ಹೊರೆಬೀಳುವ ಲಕ್ಷಣಗಳು ಗೋಚರಿಸುತ್ತಿವೆ ಎಂದು ಮೈಗ್ರಾಪ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಮೈಸೂರು ಯಾದವಗಿರಿಯ ಮೈಸೂರು ಗ್ರಾಹಕರ ಪರಿಷತ್ತು ಕಚೇರಿಯಲ್ಲಿ 'ಐದು ಗ್ಯಾರಂಟಿ ಉಚಿತ ಯೋಜನೆಗಳ ಅನುಷ್ಠಾನದಿಂದ ತೆರಿಗೆದಾರರ ಮೇಲಾಗುವ ಪರಿಣಾಮ' ಕುರಿತು ಮೈಗ್ರಾಪ ಸಭೆಯಲ್ಲಿ ಕೆಪಿಟಿಸಿಎಲ್ ನಿವೃತ್ತ ನೌಕರರು ಹಾಗೂ ಗುತ್ತಿಗೆದಾರರು, ಮೈಗ್ರಾಪ ಸದಸ್ಯರೊಂದಿಗೆ ನಡೆದ ಸಭೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು.

ಪ್ರಸ್ತುತ ರಾಜ್ಯ ಸರ್ಕಾರ ಅಸ್ತಿತ್ವಕ್ಕೆ ಬಂದು ನೂರು ದಿನಗಳು ಪೂರೈಸಿದೆ. ಈ ಅವಧಿಯಲ್ಲಿ ಯಾವುದೇ ಅಭಿವೃದ್ಧಿ ಯೋಜನೆಗಳಿಗೆ ಇಲ್ಲಿಯವರೆಗೂ ಚಾಲನೆ ದೊರೆತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿಲ್ಲ. ಮುಂದೆ ರಾಜ್ಯದಲ್ಲಿ ಆತಂಕದ ದಿನಗಳನ್ನು ಕಾಣಲಿದ್ದೇವೆ ಎಂಬ ಮಾತುಗಳು ಸದಸ್ಯರಿಂದ ಕೇಳಿಬಂದವು.

ಮೈಗ್ರಾಪ ಸದಸ್ಯರಾದ ಬಾಮಿ ವಿ.ಶಣೈ ಮಾತನಾಡಿ, ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗೃಹಜ್ಯೋತಿ, ಗೃಹಲಕ್ಷ್ಮಿ ಸೇರಿದಂತೆ ಇತರೆ ಉಚಿತ ಯೋಜನೆಗಳ ಅನುಷ್ಠಾನದಿಂದ ರಾಜ್ಯದ ಬೊಕ್ಕಸಕ್ಕೆ ಹೊರೆಯಾಗಲಿದೆ. ಪ್ರತಿ ಮನೆಗೂ 200 ಯುನಿಟ್‌ವರೆಗೂ ಉಚಿತ ವಿದ್ಯುತ್ ಜಾರಿಗೆಗೊಳಿಸಿರುವುದು ಸರಿಯಷ್ಟೇ. ಆದರೆ, 200 ಯುನಿಟ್‌ಗೂ ಹೆಚ್ಚು ವಿದ್ಯುತ್ ಉಪಯೋಗಿಸುವ ಗ್ರಾಹಕರಿಗೆ ಮುಂದಿನ ದಿನಗಳಲ್ಲಿ ಕ್ವಾಲಿಟಿ ವಿದ್ಯುತ್ ಸರಬರಾಜು ಆಗುತ್ತದೆಯೇ? ಇಲ್ಲವೇ? ಎಂಬ ಅನುಮಾನ ಸಭೆಯಲ್ಲಿದ್ದ ಸದಸ್ಯರಿಂದ ವ್ಯಕ್ತವಾಯಿತು.

ರಾಜ್ಯದ ಎಲ್ಲಾ ಮನೆಗಳಿಗೂ ಉಚಿತ ವಿದ್ಯುತ್ ಘೋಷಣೆಯಾಗಿದೆ. ಇದರ ನಿರ್ವಹಣೆ ಮಾಡುತ್ತಿರುವ ಸೆಸ್ಕಾಂ ಸೇರಿದಂತೆ ಇತರೆ ನಾಲ್ಕು ನಿಗಮಗಳ ನಿರ್ವಹಣೆ, ಬೇರೆಬೇರೆ ರಾಜ್ಯದಿಂದ ವಿದ್ಯುತ್ ಖರೀದಿಗೆ ಹಣಕಾಸಿನ ಪರಿಸ್ಥಿತಿ, ವಿದ್ಯುತ್ ಉತ್ಪಾದನೆಗೆ ಬೇಕಾದ ಕಲ್ಲಿದ್ದಲು ಸಂಗ್ರಹಣೆ, ಕಚ್ಚಾ ಸಾಮಗ್ರಿಗಳ ಖರೀದಿ, ನೌಕರರ ಸಂಬಳ, ಪಿಂಚಣಿ ಸೇರಿದಂತೆ ಇತರೆ ಖರ್ಚು–ವೆಚ್ಚಕ್ಕೂ ತೊಂದರೆಯಾಗುವ ಕುರಿತು ಸಭೆಯಲ್ಲಿ ಹಾಜರಿದ್ದ ಸದಸ್ಯರೊಬ್ಬರು ಉದಾಹರಣೆ ಸಮೇತ ತಿಳಿಸಿದರು.

ಈಗಾಗಲೇ ಸರ್ಕಾರದ ಗ್ಯಾರಂಟಿ ಅನುಷ್ಠಾನಗೊಂಡಿವೆ ಇದರಲ್ಲಿ ಒಂದೊಂದು ಯೋಜನೆ ಅನುಷ್ಠಾನಕ್ಕೂ ತಿಂಗಳಿಗೆ ನೂರಾರು ಕೋಟಿ ಬೇಕಾಗುತ್ತದೆ. ಶಕ್ತಿ ಯೋಜನೆಗೆ ಜುಲೈ ತಿಂಗಳಲ್ಲಿ ಸಾರಿಗೆ ನಿಗಮಗಳಿಗೆ ನೂರಾರು ಕೋಟಿ ಬಿಡುಗಡೆಗೊಂಡಿದೆ. ಮುಂದೆ ಮತ್ತಷ್ಟು ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಬೇಕಾಗುತ್ತದೆ. ಬಿಳಿ ಆನೆಯಂತಿರುವ ಈ ಐದು ಯೋಜನೆಗಳು ಮುಂದುವರೆದರೆ ರಾಜ್ಯದ ಆರ್ಥಿಕ ಪರಿಸ್ಥಿತಿ, ಇದರಿಂದ ತೆರಿಗೆ ಪಾವತಿದಾರರ ಮೇಲಾಗುವ ಪರಿಣಾಮದ ಬಗ್ಗೆ ಮೈಗ್ರಾಪ ಸದಸ್ಯರೊಬ್ಬರು ಎಳೆಎಳೆಯಾಗಿ ವಿವರಿಸಿದರು.

ಸ್ವಲ್ಪ ದಿನ ಕಾಯಬೇಕು: ಉಚಿತ ಯೋಜನೆಗಳ ಜಾರಿಯಿಂದ ಸಾರ್ವಜನಿಕರ ಮೇಲಾಗುವ ಸಾಧಕ–ಬಾಧಕಗಳನ್ನು ನೋಡಿಕೊಂಡು ಮುಂದಿನ ಹೋರಾಟ ರೂಪಿಸಬೇಕು. ಗ್ಯಾರಂಟಿ ಯೋಜನೆಯಿಂದ ತೆರಿಗೆದಾರರ ಮೇಲೆ ಯಾವ ಬಗೆಯ ತೊಂದರೆಗಳು ಎದುರಾಗಲಿವೆ ಎಂಬುದರ ಕುರಿತು ಅಧ್ಯಯನ ನಡೆಸಿ, ಸರ್ಕಾರಕ್ಕೆ ವರದಿ ನೀಡುವ ಕೆಲಸವಾಗಬೇಕು ಎಂದು ಸದಸ್ಯರೊಬ್ಬರು ಸಭೆಗೆ ತಿಳಿಸಿದರು.

ಈ ವೇಳೆ ಸದಸ್ಯರಾದ ಕೆಪಿಸಿಟಿಎಲ್ ನಿವೃತ್ತ ಇಂಜಿನಿಯರ್ ಸುಧೀಂದ್ರ, ಮೈಗ್ರಾಪ ಸದಸ್ಯರಾದ ಅಶ್ವತ್ಥನಾರಾಯಣ, ರವಿಪಾಳ್ಯ, ಶ್ರೀಧರ್, ಉದ್ಯಮಿ ಶ್ರೀಶೈಲ ರಾಮಣ್ಣ ಸೇರಿದಂತೆ ಇತರರಿದ್ದರು.

ಇಂದು ಮುದ್ದು ರಾಧೆ, ಮುದ್ದು ಕೃಷ್ಣ ವೇಷಭೂಷಣ ಸ್ಪರ್ಧೆ

ಮೈಸೂರು, ಸೆ5–ವಿನ್ಯಾಸ ತಂಡ ಮತ್ತು ರೋಟರಿ ಕ್ಲಬ್ ಆಫ್ ಮೈಸೂರು ಸೌತ್–ಈಸ್ಟ್ ವತಿಯಿಂದ ತುಂಟ ಕೃಷ್ಣ, ಮುದ್ದು ರಾಧೆ ವೇಷಭೂಷಣ ಸ್ಪರ್ಧೆಯನ್ನು ನಾಳೆ ಬುಧವಾರ (ಸೆ.6) ಆಯೋಜಿಸಲಾಗಿದೆ. ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಅಂದು ಮಧ್ಯಾಹ್ನ 2.30 ರಿಂದ 5:30ರವರೆಗೂ 6 ವರ್ಷದ ಒಳಗಿನ ಮಕ್ಕಳಿಗಾಗಿ ತುಂಟ ಕೃಷ್ಣ, ಹೆಣ್ಣುಮಕ್ಕಳಿಗಾಗಿ ಮುದ್ದು ರಾಧೆ ವೇಷಭೂಷಣ ಸ್ಪರ್ಧೆ ನಡೆಯಲಿದೆ. ಸ್ಪರ್ಧಿಗಳಿಗೆ ಎರಡು ನಿಮಿಷದ ಸಮಯಾವಕಾಶ ನೀಡಲಾಗುವುದು.

ಭಾಗವಹಿಸುವ ಎಲ್ಲಾ ಸ್ಪರ್ಧಿಗಳಿಗೂ ಅಭಿನಂದನಾ ಪತ್ರ ಹಾಗೂ ನೆನಪಿನ ಕಾಣಿಕೆ ದೊರೆಯಲಿದೆ. ಸ್ಥಳದಲ್ಲೇ ನೋಂದಾಯಿಸಿಕೊಳ್ಳಬಹುದು. ನೋಂದಣಿ ಶುಲ್ಕ ರೂ.200 ಇರುತ್ತದೆ, ಮೊದಲನೇ ಬಹುಮಾನ 2222 , ದ್ವಿತೀಯ ಬಹುಮಾನ 1111, ತೃತೀಯ ಬಹುಮಾನ 555 ರೂ. ನಗದು ಹಾಗೂ ಪ್ರಶಸ್ತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 6363351833 ಸಂಪರ್ಕಿಸಬಹುದು.

ನಾಳೆ ರಕ್ಷಾಬಂಧನ ಪಾವನ ಪರ್ವ; ಶ್ರೀ ಕೃಷ್ಣ ಜನ್ಮಾಷ್ಟಮಿ

ಮೈಸೂರು, ಸೆ.5– ಮೈಸೂರಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ಜಯಲಕ್ಷ್ಮೀಪುರಂ 1ನೇ ಮುಖ್ಯರಸ್ತೆ (ರಾಘವೇಂದ್ರ ಸ್ವಾಮಿ ಮಠದ ರಸ್ತೆ) ಯಲ್ಲಿ ಸೆ.7ರಂದು ಗುರುವಾರ ಸಂಜೆ 6 ಗಂಟೆಗೆ ರಕ್ಷಾಬಂಧನ ಪಾವನ ಪರ್ವ ಹಾಗೂ ಶ್ರೀ ಕೃಷ್ಣ ಜನ್ಮಾಷ್ಟಮಿ ಮಹೋತ್ಸವದ ಸಂಭ್ರಮಾಚರಣೆಯನ್ನು ಆಯೋಜಿಸಲಾಗಿದೆ. ಮುಖ್ಯ ಅತಿಥಿಯಾಗಿ ಮಾಜಿ ಶಾಸಕ ವಾಸು ಆಗಮಿಸಲಿದ್ದಾರೆ. ಲಿಂಗದೇವರಕೊಪ್ಪಲು 'ಜ್ಞಾನಸರೋವರ ರಿಟ್ರೀಟ್ ಸೆಂಟರ್'ನ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಶಾರದಾಜಿ ಪ್ರವಚನ ನಡೆಸಿಕೊಡಲಿದ್ದಾರೆಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ದಾನ–ಧರ್ಮದ ಬಗ್ಗೆ ಪ್ರಚಾರ ಮಾಡುವುದು ಒಳಿತಲ್ಲ

ವಿದ್ವಾನ್ ಪವಮಾನಾಚಾರ್ಯ ಕಲ್ಲಾಪೂರ್ ಅಭಿಮತ



ಮೈಸೂರು, ಸೆ.5(ಎಸ್‌ಪಿಎನ್)– ದೇಶದ ಉದ್ಧಾರಕ್ಕಾಗಿ ಅಥವಾ ಸಾರ್ವಜನಿಕರ ಏಳಿಗೆಗಾಗಿ ನೀಡುವ ದೇಣಿಗೆಯನ್ನು ಸಾರ್ವಜನಿಕವಾಗಿ ಹಲವು ಬಾರಿ ಹೇಳಿಹೇಳಿ ನೀಡಬಾರದು. ಬದಲಾಗಿ, ಯಾರಿಗೂ ತಿಳಿಯದಂತೆ ನೀಡುವುದೇ ಶ್ರೇಷ್ಠದಾನ ಎಂದು ವಿದ್ವಾನ್ ಪವಮಾನಾಚಾರ್ಯ ಕಲ್ಲಾಪೂರ್ ಅಭಿಪ್ರಾಯಪಟ್ಟರು.

ಮೈಸೂರು ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿನ ಟಿ.ಕೆ.ಬಡಾವಣೆಯ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿ ವತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ 'ಬಲಿ ಚಕ್ರವರ್ತಿ' ಪ್ರವಚನ ಮಾಲೆಯಲ್ಲಿ ತಿಳಿಸಿದರು.

ಭಕ್ತ ಪ್ರಹ್ಲಾದನ ಮೊಮ್ಮಗ ಹಾಗೂ ವಿರೋಚನನ ಮಗನಾದ ಬಲಿ ಚಕ್ರವರ್ತಿ ಮೂರು ಲೋಕಗಳನ್ನು ಗೆದ್ದು ರಾಜ್ಯಭಾರ ಮಾಡುತ್ತಿದ್ದನು. ಆತ ಅಸುರನಾಗಿದ್ದರೂ ಮಹಾದಾನಿಯಾಗಿದ್ದನು. ರಾಜಗುರು ಶುಕ್ಲಚಾರ್ಯ ನೇತೃತ್ವದಲ್ಲಿ ಅಶ್ವಮೇಧ ಯಾಗವನ್ನು ಮಾಡುವಾಗ ಮಹಾವಿಷ್ಣುವು ತನ್ನ ಭಕ್ತನಲ್ಲಿ ವಾಮನ ಅವತಾರ ತಾಳಿ ಮೂರು ಹೆಜ್ಜೆ ದಾನವಾಗಿ ಪಡೆಯುವ ಪ್ರಸಂಗವನ್ನು ವಿವರಿಸಿ, ಯಾರಾದರೂ ಧಾರ್ಮಿಕ, ಶುಭ ಕಾರ್ಯಗಳಿಗೆ ದಾನ ಮಾಡುವಾಗ ಯಾರಿಗೂ ತಿಳಿಯದಂತೆ ದಾನ ಮಾಡುವುದು ಸೂಕ್ತ ಎಂದರು.

ಸರ್ಕಾರ ದೇಶದ ಅಭಿವೃದ್ಧಿಗಾಗಿ ಬೇರೆಬೇರೆ ರೂಪದಲ್ಲಿ ತೆರಿಗೆ ವಿಧಿಸುತ್ತದೆ. ಈ ತೆರಿಗೆಯನ್ನು ಸಾರ್ವಜನಿಕರ ಮನಸ್ಸಿಗೆ ಘಾಸಿಯಾಗದಂತೆ ಸಂಗ್ರಹಿಸುತ್ತದೆ. ಇದರಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಆಡಳಿತ ನಡೆಸುವವರು ತೆರಿಗೆದಾರರ ವಿರೋಧ ಎದುರಿಸಬೇಕಾಗುತ್ತದೆ ಎಂದರು.

ನಂತರ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಶ್ರೀಮದ್ ರಾಮಾಯಣ ಕುರಿತು ಪ್ರವಚನ ನೀಡಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಹಿಂದೂ ಧರ್ಮದ ಉಳಿವಿಗೆ ಹಬ್ಬಗಳ ಬಗ್ಗೆ ಮುಂದಿನ ಪೀಳಿಗೆಗೂ ಪರಿಚಯಿಸಬೇಕು

ಬ್ರಾಹ್ಮಣ ಮಹಾಸಭಾದ ಜಿಲ್ಲಾಧ್ಯಕ್ಷ ಡಿ.ಟಿ.ಪ್ರಕಾಶ್ ಅಭಿಮತ



ಮೈಸೂರು, ಸೆ.5(ಎಸ್‌ಪಿಎನ್)– ಹಿಂದೂ ಧರ್ಮ ಉಳಿಯಲು ಭಾರತೀಯ ಪರಂಪರೆಗಳಲ್ಲಿ ಆಚರಿಸುವ ಹಬ್ಬಗಳನ್ನು ಪ್ರತಿಯೊಬ್ಬ ಮಹಿಳೆಯು ತಮ್ಮ ತಮ್ಮ ಮನೆಗಳಲ್ಲಿ ಆಚರಿಸಿ, ಇಂದಿನ ಯುವ ಪೀಳಿಗೆಗೆ ಪರಿಚಯಿಸುವುದು ಅಗತ್ಯ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ತಿಳಿಸಿದರು.

ಮೈಸೂರು ಶ್ರೀ ಕೃಷ್ಣಧಾಮದಲ್ಲಿ ಕೆಎಂಪಿಕೆ ಟ್ರಸ್ಟ್ ವತಿಯಿಂದ ಶ್ರೀ ವರಮಹಾಲಕ್ಷ್ಮೀ ಹಬ್ಬದ ಅಂಗವಾಗಿ ವರಮಹಾಲಕ್ಷ್ಮೀ ವ್ರತ ಆಚರಿಸುವ ಫೋಟೋ ಸ್ಪರ್ಧೆಯಲ್ಲಿ ಭಾಗವಹಿಸಿದ್ದ 250ಕ್ಕೂ ಹೆಚ್ಚು ಸ್ಪರ್ಧಾಳುಗಳಿಗೆ ಬಹುಮಾನ ವಿತರಣೆ ಮಾಡಿ, ಮಾತನಾಡಿದರು.

ಮಕ್ಕಳಿಗೆ ಆಸ್ತಿಯನ್ನು ಮಾಡದೇ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕು. ಮಾತ್ರವಲ್ಲದೆ, ನಮ್ಮ ಧರ್ಮದ, ಸಂಸ್ಕೃತಿ ಬಗ್ಗೆ ಜಾಗೃತಿ ಮೂಡಿಸಬೇಕು. ಮಕ್ಕಳಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಿ, ಈ ಮೂಲಕ ಹಿಂದೂ ಧರ್ಮದ ಉಳಿವಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ವರಮಹಾಲಕ್ಷ್ಮೀ ಫೋಟೋ ಸ್ಪರ್ಧೆಯಲ್ಲಿ ವಿಜೇತರಾದ ಶ್ರುತಿ ಹರೀಶ್, ಎಂ.ಎಸ್.ಸುಮಾ, ಚಂಚಲ, ಅಶ್ವಿನಿ ದಿನೇಶ್, ವರ್ಷ ಪ್ರದೀಪ್, ಎಲ್.ಅಶ್ವಿತಾ, ಶಿಲ್ಪ ಸುದೀಪ್, ದೀಪಿಕಾ, ಮಾನಸ, ಸೌಮ್ಯಶ್ರೀ, ಮಂಜುನಾಥ, ಸುಶ್ಮಿತಾ ನವೀನ್, ಇಂದ್ರಾಣಿ ಅವರಿಗೆ ಬಹುಮಾನ ವಿತರಿಸಲಾಯಿತು. ಆನಂತರ ಎಲ್ಲಾ ಸ್ಪರ್ಧಾಳುಗಳಿಗೆ ನೆನಪಿನ ಕಾಣಿಕೆ ಹಾಗೂ ಪ್ರಮಾಣ ಪತ್ರ ವಿತರಿಸಲಾಯಿತು. ಈ ವೇಳೆ ಕೆಎಸ್‌ಓಯು ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ.ಆರ್.ಹೆಚ್.ಪವಿತ್ರ, ಹೋಟೆಲ್ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿಶಾಸ್ತ್ರಿ, ಉದ್ಯಮಿ ಸುಬ್ರಮಣ್ಯ ತಂತ್ರಿ, ಕೃಷ್ಣದಾಸ ಪುರಾಣಿಕ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮ ನಂದೀಶ್, ನಾಗಮಣಿ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕಿ ಜ್ಯೋತಿ ರೇಚಣ್ಣ, ಸವಿತಾ ಘಾಟ್ಕೆ, ರೇಖಾ ಶ್ರೀನಿವಾಸ್, ದೀಪ, ಅಶ್ವಿನಿ ಗೌಡ, ಗೌರಿ ಶ್ರೀನಾಥ್, ರೂಪ, ನಾಗಶ್ರೀ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಸಂಘಟನ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಸುಚೇಂದ್ರ, ಚಕ್ರಪಾಣಿ ಹಾಗೂ ಇನ್ನಿತರರು ಹಾಜರಿದ್ದರು.

ಎರಡು ಪ್ರತ್ಯೇಕ ಅಪಘಾತಗಳಲ್ಲಿ ಯುವಕರಿಬ್ಬರ ಸಾವು

ಮೈಸೂರು, ಸೆ. 5 (ಆರ್‌ಕೆ) – ಮೈಸೂರಿನಲ್ಲಿ ಕಳೆದ ರಾತ್ರಿ ಮತ್ತು ಇಂದು ಬೆಳಗ್ಗೆ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಯುವಕರಿಬ್ಬರು ಸಾವನ್ನಪ್ಪಿದ್ದು, ಮತ್ತಿಬ್ಬರು ಗಾಯಗೊಂಡಿದ್ದಾರೆ.

ಮೈಸೂರಿನ ಕುವೆಂಪುನಗರದ ನಾಗರಾಜು (25) ಹಾಗೂ ಇಲವಾಲದ ಭಾರ್ಗವ (21) ದುರ್ಮರಣಕ್ಕೀಡಾದರೆ, ಗಾಯಗೊಂಡಿರುವ ಪುನೀತ್ ಮತ್ತು ಗುರುಪ್ರಸಾದ್ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಮೈಸೂರಿನ ದಟ್ಟಗಳ್ಳಿಯಿಂದ ರಾಯಲ್ ಎನ್‌ಫೀಲ್ಡ್ ಬೈಕಿನಲ್ಲಿ ಗುರುಪ್ರಸಾದ್‌ನನ್ನು ಕೂರಿಸಿಕೊಂಡು ಕುವೆಂಪು ನಗರ ಕಡೆಗೆ ಬರುತ್ತಿದ್ದ ಭಾರ್ಗವ, ಸೋಮವಾರ ರಾತ್ರಿ 10.45ರ ಸಮಯದಲ್ಲಿ ರಾಮಕೃಷ್ಣನಗರದ ಕವಿತಾ ಬೇಕರಿ ಜಂಕ್ಷನ್ ಬಳಿ ರಸ್ತೆ ಹಂಪ್ ಜಿಗಿದಾಗ ನಿಯಂತ್ರಣ ತಪ್ಪಿ ಬಿದ್ದರು.

ಪರಿಣಾಮ ಬೈಕ್ ಓಡಿಸುತ್ತಿದ್ದ ಭಾರ್ಗವ ಫುಟ್‌ಪಾತ್‌ಗೆ ಬಡಿದಿದ್ದರಿಂದ ತಲೆಗೆ ತೀವ್ರ ಗಾಯಗಳಾಗಿ ರಕ್ತಸ್ರಾವದಿಂದ ಸಾವನ್ನಪ್ಪಿದ್ದಾನೆ. ಗಾಯಗೊಂಡ ಹಿಂಬದಿ ಸವಾರ ಗುರುಪ್ರಸಾದ್‌ನನ್ನು ಕಾಮಾಕ್ಷಿ ಆಸ್ಪತ್ರೆಗೆ ದಾಖಲಿಸಲಾಯಿತು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಕೆ.ಆರ್. ಸಂಚಾರ ಠಾಣೆ ಪೊಲೀಸರು, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡರು.

ಮತ್ತೊಂದು ಪ್ರಕರಣದಲ್ಲಿ ಇಲವಾಲ ಕಡೆಯಿಂದ ಹೀರೋ ಹೋಂಡಾ ಸ್ಪ್ಲೆಂಡರ್ ಬೈಕಿನಲ್ಲಿ ರಿಂಗ್ ರೋಡ್ ಮೂಲಕ ಬಂದ ಪುನೀತ್ ಮತ್ತು ನಾಗರಾಜು, ಆರ್‌ಟಿ ನಗರ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗುತ್ತಿದ್ದಾಗ ಶ್ರೀರಾಂಪುರ ಜಂಕ್ಷನ್ ಕಡೆಯಿಂದ ಬಂದ ಲಾರಿ ಇಂದು ಬೆಳಗ್ಗೆ ಬೈಕಿಗೆ ಡಿಕ್ಕಿ ಹೊಡೆದಿದೆ.

ಈ ವೇಳೆ ಬೈಕ್ ಹಿಂಬದಿ ಸವಾರ ನಾಗರಾಜು ಸ್ಥಳದಲ್ಲೇ ಮೃತಪಟ್ಟಿದ್ದು, ಚಾಲನೆ ಮಾಡುತ್ತಿದ್ದ ಪುನೀತ್‌ಗೆ ಸಣ್ಣಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಅಪಘಾತದ ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಆಗಮಿಸಿದ ಕೆ.ಆರ್. ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಮೊಹಮದ್ ಇರ್ಷಾದ್, ಸಬ್ ಇನ್‌ಸ್ಪೆಕ್ಟರ್ ಮದನ್ ಹಾಗೂ ಸಿಬ್ಬಂದಿ ಮಹಜರು ನಡೆಸಿ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು.

ಎರಡೂ ದೇಹಗಳ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ಒಪ್ಪಿಸಲಾಯಿತು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಲಾರಿ ಹಾಗೂ ಚಾಲಕನನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಹಿಂದೂ ಧರ್ಮೀಯರಲ್ಲಿ ಕ್ಷಮೆ ಯಾಚಿಸಬೇಕು

ಮೈಸೂರು, ಸೆ. 5– ವಿಶ್ವದ ಅತ್ಯಂತ ಶ್ರೇಷ್ಠ ಮತ್ತು ಜಗತ್ತಿನ ಆದಿ ಧರ್ಮವೆಂದು ಪರಿಗಣಿತ ಸನಾತನ ಹಿಂದೂ ಧರ್ಮದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಉದಯ ನಿಧಿ ಸ್ಟಾಲಿನ್ ಸಮಸ್ತ ಹಿಂದೂ ಧರ್ಮೀಯರಲ್ಲಿ ಕ್ಷಮೆ ಯಾಚಿಸಬೇಕು. ಮಾತ್ರವಲ್ಲದೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಹೇಮಾ ನಂದೀಶ್ ಆಗ್ರಹಪಡಿಸಿದ್ದಾರೆ.

ಸನಾತನ ಹಿಂದೂ ಧರ್ಮವು ಕ್ರೈಸ್ತ ಮತ್ತು ಇಸ್ಲಾಂ ಮತ ಧರ್ಮೀಯರನ್ನು ಆದರದಿಂದ ಕಂಡು ಅವರಿಗೂ ನಮ್ಮ ನೆಲದಲ್ಲಿ ಆಶ್ರಯ ನೀಡಿದೆ. ಸನಾತನ ಧರ್ಮ ಸರ್ವಧರ್ಮೀಯರನ್ನು ಸಹೋದರರಂತೆ ಕಾಣುವ ವಿಶ್ವಶ್ರೇಷ್ಠ ಧರ್ಮ. ಇಂತಹ ಪವಿತ್ರ ಧರ್ಮವನ್ನು ನಿಂದಿಸಿರುವ ಉದಯ್ ಸ್ಟಾಲಿನ್ ಮೇಲೆ ಪೊಲೀಸರು ಮತ್ತು ನ್ಯಾಯಾಲಯ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲು ಮಾಡಿಕೊಂಡು, ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಚಿತ್ರಕಲಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ



ಮೈಸೂರು, ಸೆ. 5–ದೈಹಿಕ ಆರೋಗ್ಯಕ್ಕೆ ಮಾನಸಿಕ ಆರೋಗ್ಯವೂ ಮುಖ್ಯ ಎಂದು ಹಿಪ್ನೋಥೆರಪಿಸ್ಟ್ ರಾಮಚಂದ್ರ ನಾಯಕ್ ಹೇಳಿದರು. ಅಂತರದೃಷ್ಟಿ ಬ್ರೈನ್ ಅಕಾಡೆಮಿ, ಪರಮಹಂಸ ಯೋಗ ಮಹಾವಿದ್ಯಾಲಯ ಹಾಗೂ ಮೈಸೂರು ಯೋಗ ಒಕ್ಕೂಟದ ಆಶ್ರಯದಲ್ಲಿ ಏರ್ಪಡಿಸಿದ್ದ ಪ್ರಕೃತಿ ಕುರಿತ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ದೇಹದ ಆರೋಗ್ಯ ಚೆನ್ನಾಗಿದ್ದರೆ ಸಾಮಾಜಿಕ ಆರೋಗ್ಯವೂ ಚೆನ್ನಾಗಿರುತ್ತದೆ. ಎಲ್ಲಕ್ಕೂ ಮಾನಸಿಕ ಸದೃಢತೆ ಮುಖ್ಯ ಎಂದರು.

ಪ್ರತಿಯೊಬ್ಬರೂ ಬದುಕಲು ಹೃದಯ ಹಾಗೂ ಮೆದುಳು ಮುಖ್ಯ ಎಂದು ತಿಳಿದಿರುತ್ತಾರೆ. ಆದರೆ ಶ್ವಾಸಕೋಶವೂ ಮುಖ್ಯ. ಉಸಿರಾಟ ಇಲ್ಲದಿದ್ದರೆ ಯಾವುದೇ ಮನುಷ್ಯ ಬದುಕುಳಿಯಲಾರ. ಒಂದು ನಿಮಿಷಕ್ಕೆ ಎಷ್ಟು ಬಾರಿ ಉಸಿರಾಡುತ್ತಾನೆ ಎಂಬುದರ ಮೇಲೆಯೂ ಆರೋಗ್ಯ ನಿರ್ಧಾರವಾಗುತ್ತದೆ ಎಂದು ಅವರು ಹೇಳಿದರು. ಮೆದುಳಿನಲ್ಲಿ ಎಡ, ಬಲ, ಹಿಂದೆ, ಮುಂದೆ– ಹೀಗೆ ನಾಲ್ಕು ಭಾಗ ಇರುತ್ತದೆ. ಯಾರಲ್ಲಿ ಕೇಂದ್ರ ಭಾಗ ಎಚ್ಚರ ಹಾಗೂ ಸುಪ್ತ ಸ್ಥಿತಿಯಲ್ಲಿ ಇರುತ್ತದೆಯೋ ಅವರು ಉಚ್ಛ್ರಾಯ ಸ್ಥಿತಿ ತಲುಪುತ್ತಾರೆ ಎಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪರಮಹಂಸ ಯೋಗ ವಿದ್ಯಾಲಯದ ಅಧ್ಯಕ್ಷ ಶಿವಪ್ರಕಾಶ್ ಮಾತನಾಡಿ, ಅಂತರ ದೃಷ್ಟಿಯಿಂದ ಮಕ್ಕಳಲ್ಲಿ ಸಂವೇದನಾಶೀಲ ಕೌಶಲ್ಯಗಳು ಅಭಿವೃದ್ಧಿಯಾಗುತ್ತವೆ. ಏಕಾಗ್ರತೆ, ಸೃಜನಶೀಲತೆ, ಭಾವನಾತ್ಮಕ ಸ್ಥಿರತೆ, ಸ್ಮರಣಾ ಶಕ್ತಿ ವೃದ್ಧಿಸುತ್ತದೆ ಎಂದರು.

ಆದ್ದರಿಂದ ಮಕ್ಕಳು ಮಾತ್ರವಲ್ಲದೇ ದೊಡ್ಡವರು ಕೂಡ ಯೋಗ, ಪ್ರಾಣಾಯಾಮ, ಧ್ಯಾನ, ಮುದ್ರೆಯ ಪ್ರಯೋಜನ ಪಡೆಯುವಂತೆ ಅವರು ಕೋರಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಹುಮಾನ ವಿತರಿಸಿದರು. ಶ್ರೀ ವಿವೇಕ ಬಾಲೋದ್ಯಾನ ಶಾಲೆಯ ನಿರ್ದೇಶಕ ಎಂ.ಎಸ್.ನಾಗೇಶ್, ಚಿತ್ರಕಲಾವಿದ ಶೇಷಾದ್ರಿ ಮುಖ್ಯ ಅತಿಥಿಗಳಾಗಿದ್ದರು.

ವಿದ್ಯಾರ್ಥಿಗಳಾದ ಸ್ವಾತಿ, ದಕ್ಷ ಅಂತರ್ ದೃಷ್ಟಿ ಪ್ರದರ್ಶಿಸಿದರು. ಆಶಾ ಯೋಗೇಶ್ ಕಾರ್ಯಕ್ರಮ ನಿರೂಪಿಸಿದರು.

ಮೈಸೂರಲ್ಲಿ ಖದೀಮರು, ಪುಂಡರ ಹಾವಳಿ: ಜನರಲ್ಲಿ ಆತಂಕ

ಹಗಲು–ರಾತ್ರಿ ಒಂಟಿಯಾಗಿ ಓಡಾಡುವುದೇ ದುಸ್ತರ

- ಮಾರಕಾಸ್ತ್ರಗಳ ತೋರಿ ದೋಚುವುದು
- ಎಲ್ಲೆಂದರಲ್ಲಿ ವ್ಹೀಲಿಂಗ್, ರೀಲ್ಸ್ ಮಾಡುವುದು
- ಪೊಲೀಸರ ಭಯವಿಲ್ಲದಂತೆ ರಾತ್ರಿ ವೇಳೆ ವೃತ್ತಗಳಲ್ಲಿ ಸ್ವೇಚ್ಛಾಚಾರದ ದುರ್ವರ್ತನೆ











–ಮಿತ್ರ

ಮೈಸೂರು, ಸೆ.5– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ದಿನೇ ದಿನೇ ಪುಂಡರು ಹಾಗೂ ಖದೀಮರ ಹಾವಳಿ ಹೆಚ್ಚಾಗುತ್ತಿದ್ದು, ನಗರ ನಿವಾಸಿಗಳು ಹಾಗೂ ಪ್ರವಾಸಿಗರು ಆತಂಕಪಡುವಂತಹ ಸನ್ನಿವೇಶ ನಿರ್ಮಾಣವಾಗಿದೆ.

ಮನೆಗಳವು ಪ್ರಕರಣಗಳ ಜೊತೆಗೆ ಸರಗಳವು, ವಾಹನ ಕಳವು ಹಾಗೂ ಸುಲಿಗೆ ಪ್ರಕರಣಗಳು ಎಗ್ಗಿಲ್ಲದೆ ನಡೆಯುತ್ತಿದ್ದು, ಪೊಲೀಸರ ಭಯವೇ ಇಲ್ಲದಂತೆ ಪುಂಡರು ಅಟ್ಟಹಾಸ ಮೆರೆಯುತ್ತಿದ್ದಾರೆ. ವಾಹನ ದಟ್ಟಣೆ ಹೆಚ್ಚಾಗಿರುವ ರಸ್ತೆಗಳಲ್ಲೇ ವ್ಹೀಲಿಂಗ್ ಮಾಡುವುದು, ರೀಲ್ಸ್ ಶೂಟಿಂಗ್ ಮಾಡುವ ಮೂಲಕ ವಾಹನ ಚಾಲಕರಲ್ಲಿ ಭೀತಿಯನ್ನುಂಟು ಮಾಡುತ್ತಿದ್ದಾರೆ. ಅದರಲ್ಲೂ ರಾತ್ರಿ ವೇಳೆಯಂತೂ ಖದೀಮರು ಹಾಗೂ ಪುಂಡರ ಹಾವಳಿಗೆ ಕಡಿವಾಣ ಹಾಕುವವರೇ ಇಲ್ಲದಂತಾಗಿದೆ.

ಪುಂಡರ ಅಟ್ಟಹಾಸ: ವಾಹನ ಹಾಗೂ ಮೊಬೈಲ್ ಕಳವು ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿದ್ದರೂ, ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ಸರಿಯಾಗಿ ದಾಖಲಾಗುತ್ತಿಲ್ಲ. ವಾಹನ ಕಳವಾದ ದಿನ ಅಥವಾ ಮಾರನೇ ದಿನ ಠಾಣೆಯಲ್ಲಿ ಪ್ರಕರಣ ದಾಖಲಾಗಬೇಕು. ವಾಹನ ಕಳೆದುಕೊಂಡವರು ತಮ್ಮ ವಾಹನ ಸಿಗಬಹುದು ಎಂಬ ವಿಶ್ವಾಸದಿಂದ ಅಥವಾ ಕಳವಾಗಿರುವ ತಮ್ಮ ವಾಹನವನ್ನು ಖದೀಮರು ದುಷ್ಕೃತ್ಯಕ್ಕೆ ಬಳಸಿದರೆ, ಅದು ತಮ್ಮ ತಲೆಗೆ ಬರುತ್ತದೆ ಎಂಬ ಆತಂಕದಿಂದ ವಾಹನ ಕಳುವಾದ ದಿನ ಅಥವಾ ಮಾರನೇ ದಿನ ಠಾಣೆಗೆ ಬಂದು ದೂರು ಸಲ್ಲಿಸುವುದು ಸಹಜ ಕ್ರಿಯೆ. ವಿಚಿತ್ರವೆಂದರೆ ಮೈಸೂರು ನಗರದಲ್ಲಿ ಯಾವುದೇ ವಾಹನ ಕಳವಾದರು ಕನಿಷ್ಠ ಒಂದು ವಾರದ ನಂತರ ಠಾಣೆಯಲ್ಲಿ ಕೇಸ್ ದಾಖಲಾಗುತ್ತಿದೆ. ಈ ವಿಳಂಬಕ್ಕೆ ವಾಹನವನ್ನು ಹುಡುಕುತ್ತಿದ್ದುದ್ದಾಗಿ ಅಥವಾ ಅನಿವಾರ್ಯ ಕೆಲಸವಿದ್ದರಿಂದ ತಡವಾಗಿ ದೂರು ಸಲ್ಲಿಸುತ್ತಿರುವುದಾಗಿ ಉಲ್ಲೇಖಿಸಲಾಗುತ್ತಿದೆ.

ನಿಜಕ್ಕೂ ವಾಹನ ಕಳೆದುಕೊಂಡವರು ವಿಳಂಬವಾಗಿ ದೂರು ಸಲ್ಲಿಸುತ್ತಿದ್ದಾರೆಯೇ ಅಥವಾ ಪೊಲೀಸರೇ ವಿಳಂಬವಾಗಿ ದೂರು ದಾಖಲು ಮಾಡಿಕೊಳ್ಳುತ್ತಿದ್ದಾರೆಯೇ ಎಂಬುದು ಯಕ್ಷಪ್ರಶ್ನೆಯಾಗಿದೆ. ಕಾರಣವೇನೆಂದರೆ ಮೈಸೂರು ನಗರದಲ್ಲಿ ಕಳವಾಗುವ ಬಹುತೇಕ ಎಲ್ಲಾ ವಾಹನಗಳ ಮಾಲೀಕರು ಕನಿಷ್ಠ ಒಂದು ವಾರದ ನಂತರ ದೂರು ಸಲ್ಲಿಸುತ್ತಿದ್ದಾರೆ. ಕೆಲವು ಪ್ರಕರಣಗಳಲ್ಲಿ ಒಂದು ಅಥವಾ ಎರಡು ತಿಂಗಳ ನಂತರ ದೂರುಗಳು ದಾಖಲಾಗುತ್ತಿವೆ. ಇದರ ಹಿಂದಿನ ರಹಸ್ಯ ಏನೆಂಬುದಂತೂ ಅರ್ಥವಾಗುತ್ತಿಲ್ಲ.

ಮೊಬೈಲ್ ಕಳವು ಮಾಮೂಲು: ಇನ್ನು ಮೊಬೈಲ್ ಕಳವಿನ ಪ್ರಕರಣಗಳದ್ದೂ ಇದೇ ಕಥೆ. ಮೊಬೈಲ್‌ಗಳಲ್ಲಿ ಹಲವಾರು ದಾಖಲೆಗಳು ಸಂಗ್ರಹವಾಗಿರುತ್ತವೆ. ಮೊಬೈಲ್ ಕಳೆದು ಹೋದರೆ ಅದರಲ್ಲಿ ಸಂಗ್ರಹವಾಗಿರುವ ಬ್ಯಾಂಕ್ ಖಾತೆ ವಿವರ ಖದೀಮನ ಪಾಲಾಗಿ ಹಣ ಕಳೆದುಕೊಳ್ಳಬೇಕಾಗು ತ್ತದೆ. ಒಂದು ವೇಳೆ ಕದ್ದ ಮೊಬೈಲ್ ಅನ್ನು ಖದೀಮ ದುಷ್ಕೃತ್ಯಕ್ಕೆ ಬಳಸಿಕೊಂಡರೆ ಅದರ ಮಾಲೀಕ ತಲೆ ಕೊಡಬೇಕಾಗುತ್ತದೆ. ಇದು ಸಹಜವಾಗಿಯೇ ಎಲ್ಲರಿಗೂ ತಿಳಿದಿರುವ ವಿಷಯ. ಆಗಿದ್ದರೂ ಮೊಬೈಲ್ ಕಳವು ಪ್ರಕರಣಗಳು ದಾಖಲಾಗಲೂ ವಿಳಂಬವಾಗುತ್ತಿರುವುದರ ಹಿಂದಿನ ಕಾರಣವೇನು ಎಂಬುದು ಕೂಡ ಅರ್ಥವಾಗುತ್ತಿಲ್ಲ.

ಮೊಬೈಲ್ ಕಳವು ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿರುವುದು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆಜು–ಬಾಜಿನಲ್ಲೇ ಎಂಬುದು ವಿಶೇಷ. ಜನದಟ್ಟಣೆ ಹೆಚ್ಚಾಗಿರುವ ಈ ಪ್ರದೇಶದಲ್ಲಿ ಮೊಬೈಲ್‌ನಲ್ಲಿ ಮಾತನಾಡಿಕೊಂಡು ಹೋಗುತ್ತಿದ್ದರೆ, ಅವರ ಕೈಯಿಂದ ರಾಜಾರೋಷವಾಗಿ ಖದೀಮರು ಮೊಬೈಲ್ ಕಿತ್ತುಕೊಂಡು ಪರಾರಿಯಾಗುತ್ತಿದ್ದಾರೆ. ಬಸ್ ಹತ್ತುವಾಗ ಮೊಬೈಲ್ ಹಾಗೂ ಸರಗಳವು ನಡೆಯುತ್ತಿದೆ. ಈ ಬಸ್ ನಿಲ್ದಾಣದ ರಸ್ತೆಯಲ್ಲಂತೂ ಇಬ್ಬರು ಖದೀಮರು ನಡೆದುಕೊಂಡು ಹೋಗುತ್ತಿರುವವರಿಗೆ ಉದ್ದೇಶಪೂರ್ವಕವಾಗಿ ಡಿಕ್ಕಿ ಹೊಡೆದು ಅವರ ಜೇಬಲ್ಲಿರುವ ಮೊಬೈಲ್ ಕಿತ್ತುಕೊಂಡು ಓಡುತ್ತಾರೆ. ಇಂತಹ ಪ್ರಕರಣಗಳು ರಾಜಾರೋಷವಾಗಿ ನಡೆಯುತ್ತಿದ್ದರೂ ಪೊಲೀಸರು ಹೆಚ್ಚಿನ ನಿಗಾ ವಹಿಸಿಲ್ಲ. ಜೊತೆಗೆ ಸಾರ್ವಜನಿಕರು ಕೂಡ ತಮ್ಮ ಕಣ್ಣೆದುರಿಗೆ ಇಂತಹ ಪ್ರಕರಣ ನಡೆದರೂ ತಮಗೂ ಅದಕ್ಕೂ ಸಂಬಂಧವಿಲ್ಲವೆಂಬಂತೆ ಮೂಕಪ್ರೇಕ್ಷಕರಾಗುವುದು ಅಥವಾ ಮೊಬೈಲ್ ಕಳೆದುಕೊಂಡವರಿಗೆ ಸಾಂತ್ವನ ಹೇಳಿ, ಪೊಲೀಸರಿಗೆ ದೂರು ಕೊಡುವಂತೆ ಸಲಹೆ ನೀಡುವುದು ಸರ್ವೇ ಸಾಮಾನ್ಯವಾಗಿದೆ.

ವ್ಯಾಪಕ ಸುಲಿಗೆ: ರಾತ್ರಿ ವೇಳೆ ನಿರ್ಭೀತಿಯಿಂದ ಓಡಾಡುವುದಕ್ಕೆ ಹಿಂಜರಿಯುವಂತಹ ಪರಿಸ್ಥಿತಿ ಮೈಸೂರಿನಲ್ಲಿ ನಿರ್ಮಾಣವಾಗಿದೆ. ಇತ್ತೀಚೆಗೆ ವರ್ತಕರೊಬ್ಬರ ಮೊಪೆಡ್ ತಡೆದ ಖದೀಮರು ಅವರ ಬಳಿ ಇದ್ದ ಹಣ ತುಂಬಿದ್ದ ಬ್ಯಾಗ್ ಕಿತ್ತುಕೊಂಡು ಪರಾರಿಯಾದ ಘಟನೆ ಜಗನ್ಮೋಹನ ಪ್ಯಾಲೆಸ್ ಬಳಿಯೇ ನಡೆದಿತ್ತು. ಮತ್ತೊಂದು ಪ್ರಕರಣದಲ್ಲಿ ವಾಹನ ಹಾಗೂ ಜನಸಂಚಾರ ಹೆಚ್ಚಾಗಿರುವ ಜೆಎಲ್‌ಬಿ ರಸ್ತೆಯ ರಾಮಸ್ವಾಮಿ ವೃತ್ತದ ಬಳಿ ವ್ಯಕ್ತಿಯೋರ್ವರ ವಾಚ್ ಅನ್ನು ಖದೀಮ ಕಿತ್ತುಕೊಂಡು ಓಡಿದ್ದ. ಇದನ್ನು ಕಂಡ ಕೆಲ ಸಾರ್ವಜನಿಕರು ವಾಚ್ ಕಳೆದುಕೊಂಡವರಿಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವಂತೆ ಸಲಹೆ ನೀಡಿದಾಗ ಆ ವ್ಯಕ್ತಿ ಬೇಸರದಿಂದಲೇ ಕಂಪ್ಲೇಂಟೂ ಬೇಡ ಏನೂ ಬೇಡ ಎಂದು ತನ್ನಷ್ಟಕ್ಕೆ ತಾನೇ ಹೋದ ಸನ್ನಿವೇಶ ನಡೆದಿದೆ.

ಇನ್ನು ರೈಲ್ವೇ ಸ್ಟೇಷನ್‌ನಿಂದ ಹೊರ ಬರುವವರನ್ನು ಸುಲಿಗೆ ಮಾಡುವ ಕೃತ್ಯ ನಿಲ್ದಾಣದ ಆಜು–ಬಾಜಿನ ಜೆಎಲ್‌ಬಿ ರಸ್ತೆ ಮತ್ತು ಇರ್ವಿನ್ ರಸ್ತೆಯಲ್ಲಿ ಪದೇ ಪದೇ ನಡೆಯುತ್ತಿದೆ. ಹಣ ಅಥವಾ ವಸ್ತು ಕಳೆದುಕೊಂಡವರು ಪರಸ್ಥಳದವರು ಹೆಚ್ಚಾಗಿದ್ದು, ಅವರು ದೊಡ್ಡ ಮೊತ್ತದ ಹಣ ಅಥವಾ ಚಿನ್ನಾಭರಣ ಕಳೆದುಕೊಂಡಾಗ ಮಾತ್ರ ಪೊಲೀಸರಿಗೆ ದೂರು ನೀಡುತ್ತಾರೆ. ಇಲ್ಲದಿದ್ದರೆ ಸುಮ್ಮನೆ ಹೋಗುತ್ತಾರೆ. ಇದು ಖದೀಮರಿಗೆ ವರದಾನವಾಗಿ ಪರಿಣಮಿಸಿದೆ.

ಸರ್ಕಲ್‌ನಲ್ಲಿ ರಾಜಾರೋಷವಾಗಿ ರೀಲ್ಸ್...!: ಜೆಎಲ್‌ಬಿ ರಸ್ತೆಯ ದಾಸಪ್ಪ ಸರ್ಕಲ್‌ನನ್ನು ರಾತ್ರಿವೇಳೆ ಹಾದು ಹೋಗಲು ವಾಹನ ಸವಾರರು ಭಯಪಡುವಂತಹ ಸನ್ನಿವೇಶಗಳು ಆಗಿಂದಾಗ್ಗೆ ನಡೆಯುತ್ತವೆ. ಇಲ್ಲಿ ಖದೀಮರ ಕಾಟಕ್ಕಿಂತ ಪುಂಡರ ಹಾವಳಿಯೇ ಹೆಚ್ಚು. ಸರ್ಕಲ್‌ನಲ್ಲಿ ರಸ್ತೆ ಮಧ್ಯೆ ನಿಂತು ರೀಲ್ಸ್ ಶೂಟಿಂಗ್ ಮಾಡುವ ಪುಂಡರು ವಾಹನ ಸವಾರರಿಗೆ ಘಾತುಕರಾಗಿ ಪರಿಣಮಿಸಿದ್ದಾರೆ. ವಾಹನ ಚಾಲಕರು ರೀಲ್ಸ್ ಶೂಟಿಂಗ್ ಮಾಡುವ ಪುಂಡರನ್ನು ಕಂಡು ಭಯ ಪಡುವಂತಹ ವಾತಾವರಣ ನಿರ್ಮಾಣವಾಗಿದೆ. ಸರಿರಾತ್ರಿಯೂ ದಾಸಪ್ಪ ಸರ್ಕಲ್‌ನಲ್ಲಿ ಪುಂಡರ ಗುಂಪು ನಿಂತಿರುತ್ತದೆ. ಇವರ ಉದ್ದೇಶ ಏನು ಎಂಬುದೇ ಅರ್ಥವಾಗುತ್ತಿಲ್ಲ. ಈ ರಸ್ತೆಯಲ್ಲಿ ಪೊಲೀಸರ ವಾಹನ ರಾತ್ರಿ ವೇಳೆ ಆಗಿಂದಾಗ್ಗೆ ಓಡಾಡುತ್ತಿದೆಯಾದರೂ ಪುಂಡರ ಹಾವಳಿಯಂತೂ ತಪ್ಪಿಲ್ಲ. ಜೆಎಲ್‌ಬಿ ರಸ್ತೆ ಮಾತ್ರವಲ್ಲದೇ, ಲಲಿತ್ ಮಹಲ್ ರಸ್ತೆ, ಹುಣಸೂರು ರಸ್ತೆ, ಬನ್ನಿಮಂಟಪದ ನೆಲ್ಸನ್ ಮಂಡೇಲಾ ರಸ್ತೆ ಸೇರಿದಂತೆ ಅನೇಕ ರಸ್ತೆಗಳಲ್ಲಿ ವಾಹನದಟ್ಟಣೆ ನಡುವೆಯೇ ಪುಂಡರು ವ್ಹೀಲಿಂಗ್ ಮಾಡುವ ಮೂಲಕ ಭಯದ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ. ಈ ದೃಶ್ಯವನ್ನು ಯಾರಾದರೂ ಮೊಬೈಲ್‌ನಲ್ಲಿ ಸೆರೆ ಹಿಡಿದು ರವಾನಿಸಿದರೆ ಅಂತಹ ಪ್ರಕರಣಗಳಲ್ಲಿ ಮಾತ್ರ ಪೊಲೀಸರು ಕ್ರಮ ಕೈಗೊಳ್ಳುತ್ತಿದ್ದಾರೆ ಎಂಬ ಆರೋಪ ಸಾರ್ವಜನಿಕರದ್ದು. ಇನ್ನುಳಿದಂತೆ ವ್ಹೀಲಿಂಗ್ ಹಾವಳಿಯಂತೂ ಮೈಸೂರಿನ ಎಲ್ಲಾ ಪ್ರಮುಖ ರಸ್ತೆಗಳಲ್ಲೂ ಎಲ್ಲೆ ಮೀರಿದ್ದು, ವಾಹನ ಸವಾರರು ಆತಂಕದಿಂದಲೇ ವಾಹನ ಚಾಲನೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮೈಸೂರು ನಗರದ ಪೊಲೀಸರು ಇಂತಹ ಕೃತ್ಯಗಳಿಗೆ ಕಡಿವಾಣ ಹಾಕುವ ಮೂಲಕ ಸಾರ್ವಜನಿಕರಿಗೆ ನೆಮ್ಮದಿ ನೀಡಬೇಕಾಗಿದೆ.

ಸೈಬರ್ ಕ್ರೈಂ: ಆನ್‌ಲೈನ್ ಮೂಲಕ ಸುಲಿಗೆ ಮಾಡುವ ಪ್ರಕರಣಗಳು ಪ್ರತಿದಿನ ನಡೆಯುತ್ತಲೇ ಇವೆ. ಎಲ್ಲೋ ದೂರದ ಊರು ಅಥವಾ ದೇಶದಲ್ಲಿ ಕುಳಿತಿರುವ ವಂಚಕ ಅನಾಯಾಸವಾಗಿ ಕುಳಿತಲ್ಲಿಂದಲೇ ಲಕ್ಷಾಂತರ ರೂ. ದೋಚುತ್ತಿರುತ್ತಾನೆ. ಸೈಬರ್ ಕ್ರೈಂಗೆ ಬಲಿಯಾಗುತ್ತಿರುವವರು ವಿದ್ಯಾವಂತರೇ ಎಂಬುದು ವಿಷಾದಕರ. ಇತ್ತೀಚೆಗಂತೂ ಪಾರ್ಟ್ ಟೈಂ ಜಾಬ್ ಹೆಸರಿನಲ್ಲಿ ನಡೆಯುತ್ತಿರುವ ಆನ್ ಲೈನ್ ವಂಚನೆಗಳೇ ಹೆಚ್ಚು. ವಿಚಿತ್ರವೆಂದರೆ ಒಳ್ಳೆಯ ಉದ್ಯೋಗದಲ್ಲಿರುವವರು ಕೂಡ ಇದಕ್ಕೆ ಬಲಿಯಾಗಿ ಲಕ್ಷಾಂತರ ರೂ. ಕಳೆದುಕೊಳ್ಳುತ್ತಿದ್ದಾರೆ. ಯಾವುದೋ ಯೂಟ್ಯೂಬ್‌ಗೆ ಒಂದು ಲೈಕ್ ಒತ್ತಿ ಬಿಟ್ಟರೇ ಸಾಕು, ನೀವು ಕಟ್ಟಿದ ಹಣಕ್ಕೆ ಕಮಿಷನ್ ಸಿಗುತ್ತದೆ ಎಂಬ ಆಮಿಷಕ್ಕೆ ವಿದ್ಯಾವಂತ ಬುದ್ಧಿವಂತರು ಬಲಿಯಾಗುತ್ತಿದ್ದಾರೆ. ಆರಂಭದಲ್ಲಿ ಅವರಿಗೆ ಸಿಗುವ 500 ಅಥವಾ 1000 ರೂ.ಗಳ ಕಮಿಷನ್ ನಂಬಿ ಲಕ್ಷಾಂತರ ರೂ. ವರ್ಗಾವಣೆ ಮಾಡಿ ಹಣ ಕಳೆದುಕೊಳ್ಳುತ್ತಿದ್ದಾರೆ. ಅವರು ಕಳೆದುಕೊಂಡ ಹಣ ಮತ್ತೆ ಸಿಗುವ ಗ್ಯಾರಂಟಿಯೇ ಇಲ್ಲ. ಈ ವಂಚಕರ ಮತ್ತೊಂದು ವರಸೆ ಎಂದರೇ ಮೊಬೈಲ್‌ಗಳಿಗೆ ವಿದ್ಯುತ್ ಬಿಲ್ ಬಾಕಿ ಕಟ್ಟಿ, ಇಲ್ಲದಿದ್ದರೆ ಡಿಸ್‌ಕನೆಕ್ಟ್ ಆಗುತ್ತದೆ ಎಂದು ಸಂದೇಶ ರವಾನಿಸುವುದು. ಅದನ್ನು ನೋಡಿದ ವಿದ್ಯಾವಂತರು ತಕ್ಷಣವೇ ತಮಗೆ ಸಂದೇಶ ಬಂದ ಸಂಖ್ಯೆಯನ್ನು ಸಂಪರ್ಕಿಸುತ್ತಾರೆ. ವಂಚಕ ಹೇಳಿದ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ತಮ್ಮ ಬ್ಯಾಂಕ್ ಖಾತೆಯ ಎಲ್ಲಾ ವಿವರಗಳನ್ನು ನಮೂದಿಸುತ್ತಾರೆ. ಮರುಕ್ಷಣವೇ ಅವರ ಖಾತೆಯಲ್ಲಿದ್ದ ಹಣ ಮಂಗಮಾಯವಾಗಿ ಬಿಡುತ್ತದೆ. ಇಲ್ಲಿ ಕುಳಿತಲ್ಲಿಂದಲೇ ಮೊಬೈಲ್ ಮೂಲಕ ವಿದ್ಯುತ್ ಬಿಲ್ ಕಟ್ಟಿ ಬಿಡುತ್ತೇನೆ ಎಂಬ ಭಾವನೆಯೇ ಹಣ ಕಳೆದುಕೊಳ್ಳಲು ದಾರಿಯಾಗುತ್ತಿದೆ. ವಸ್ತುಸ್ಥಿತಿ ಎಂದರೇ ಮೊಬೈಲ್ ಮೂಲಕ ವಿದ್ಯುತ್ ಬಿಲ್ ಪಾವತಿಸುವ ಸೌಲಭ್ಯವನ್ನು ವಿದ್ಯುತ್ ಇಲಾಖೆಯೇ ಕಲ್ಪಿಸಿದೆ. ನಮ್ಮಲ್ಲಿರುವ ಫೋನ್ ಪೇ ಅಥವಾ ಗೂಗಲ್ ಪೇನಲ್ಲಿ ಈ ಸೌಲಭ್ಯವಿದೆ. ಆದರೂ ಕೂಡ ವಿದ್ಯಾವಂತರು ವಂಚನೆಗೊಳಗಾಗುತ್ತಿರುವುದು ವಿಪರ್ಯಾಸವೇ ಸರಿ. ಸೈಬರ್ ಕ್ರೈಂ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ವಿದ್ಯಾವಂತರು ಅತೀ ಬುದ್ಧಿವಂತಿಕೆ ಉಪಯೋಗಿಸದೆ ವಾಸ್ತವ ಸ್ಥಿತಿ ಅರಿತುಕೊಂಡು ಜಾಗೃತರಾಗುವುದೊಂದೇ ವಂಚಕರಿಂದ ಪಾರಾಗುವ ದಾರಿ.

ಭಾರತೀಯ ಸಂಸ್ಕೃತಿಯಲ್ಲಿ ಶಿಕ್ಷಕರಿಗೆ ದೇವರ ಸ್ಥಾನ

ಹುಣಸೂರಿನ ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಹರೀಶ್‌ಗೌಡ



ಹುಣಸೂರು, ಸೆ.5– ಭಾರತೀಯ ಸಂಸ್ಕೃತಿಯಲ್ಲಿ ಗುರುಗಳನ್ನು ದೇವರ ಸ್ಥಾನದಲ್ಲಿ ಕಾಣುತ್ತೇವೆ. ಅದೇ ರೀತಿ ನಮ್ಮ ಮನದಲ್ಲಿ ಶಿಕ್ಷಕರು ನೆಲೆಸಿದ್ದಾರೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಗುರು ಭವನದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ, ಶಾಲಾ ಶಿಕ್ಷಣ, ಸಾಕ್ಷರತಾ ಇಲಾಖೆ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನು ಶಾಸಕನಾಗಿ ಆಯ್ಕೆಯಾದ ನಂತರ ಭಾಗವಹಿಸಿದ್ದ ಮೊದಲ ಕಾರ್ಯಕ್ರಮವೇ ಶಿಕ್ಷಕರೊಂದಿಗೆ ನಡೆದಿತ್ತು. ಆನಂತರ ನಾನು ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಮೊದಲು ಶಿಕ್ಷಣ, ಆರೋಗ್ಯ, ಕೃಷಿ ಕ್ಷೇತ್ರಗಳಿಗೆ ಆದ್ಯತೆ ನೀಡುತ್ತಿರುವೆ ಎಂದರು.

ಶಿಕ್ಷಕರು ಒಂದಲ್ಲ ಒಂದು ರೀತಿಯಲ್ಲಿ ವಿಭಿನ್ನ ಪ್ರತಿಭೆಗಳನ್ನು ಹುಟ್ಟು ಹಾಕಬಹುದು. ವಿದ್ಯಾರ್ಥಿಗಳನ್ನು ಗುರುತಿಸಿ ಅವರಲ್ಲಿ ಅಡಗಿರುವ ಸುಪ್ತ ಕಲೆಗಳನ್ನು ಹೆಕ್ಕಿ ಹೊರ ತೆಗೆಯಬೇಕು. ಇದಕ್ಕಾಗಿ ನೀವುಗಳು ಪ್ರತಿ ದಿನ ಒಂದು ಗಂಟೆ ಕಾಲ ಶ್ರಮಿಸಿದರೆ ಈ ದೇಶಕ್ಕೆ ಉತ್ತಮ ಶಿಲ್ಪಿಗಳನ್ನು ನೀಡಿದ ಕೀರ್ತಿ ಬರಲಿದೆ. ಜೊತೆಗೆ ನಿಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತದೆ ಎಂದು ಶಿಕ್ಷಕರಿಗೆ ಕಿವಿಮಾತು ಹೇಳಿದರು.

ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಿದರೆ ದೊಡ್ಡ ಸಾಧನೆಯನ್ನೆ ಕಾಣಬಹುದು. ಈ ನಿಟ್ಟಿನಲ್ಲಿ ಶಿಕ್ಷಕರು ದೃಢ ನಿರ್ಧಾರದಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಟ್ಟಿದ್ದೆ ಆದರೆ ಈ ದೇಶದಲ್ಲಿ ದೊಡ್ಡ ಬದಲಾವಣೆಯನ್ನೆ ಕಾಣಬಹುದು ಎಂದರು.

ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರುವ ಬದಲು ಶಾಲಾ ಪ್ರಾರಂಭ ದಿನದಿಂದ 10 ತಿಂಗಳ ಕಾಲ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಪ್ರೋತ್ಸಾಹಿಸಿದರೆ ವಿದ್ಯಾರ್ಥಿಗಳಲ್ಲಿ ಬದಲಾವಣೆ ಕಾಣಬಹುದು. ಇದರಿಂದ ಪಠ್ಯೇತರ ಚಟುವಟಿಕೆಗಳ ಜೊತೆಗೆ ಜೀವನದ ಮೌಲ್ಯಗಳನ್ನು ಕಲಿಸುವ, ಅರ್ಥೈಸುವ ಕೆಲಸ ಶಿಕ್ಷಕರಿಂದ ಮಾತ್ರ ಸಾಧ್ಯ. ಈ ನಿಟ್ಟಿನಲ್ಲಿ ಶಿಕ್ಷಕರು ಮಕ್ಕಳಲ್ಲಿ ಜೀವನದ ಮೌಲ್ಯಗಳನ್ನು ತುಂಬಿ ಉತ್ತಮ ಪ್ರಜೆಗಳನ್ನಾಗಿ ಮಾಡಿ ಎಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ರೇವಣ್ಣ ಮಾತನಾಡಿ, ಮಕ್ಕಳ ಮನಸ್ಸಿನಲ್ಲಿ ಅಕ್ಷರ ಬೀಜವನ್ನು ಬಿತ್ತುವ ಮೂಲಕ ಮಗುವಿನ ಉಜ್ವಲ ಭವಿಷ್ಯವನ್ನು ರೂಪಿಸಲು ಶ್ರಮಿಸುವ ವ್ಯಕ್ತಿಯೇ ಶಿಕ್ಷಕ. ಈ ಶಿಕ್ಷಕರನ್ನು ಸ್ಮರಿಸುವ ಈ ಒಂದು ಕ್ಷಣವೇ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನರಸಿಂಹ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್. ಗೋವಿಂದೇಗೌಡ ಮಾತನಾಡಿದರು.

ಶಾಲೆಯ ದತ್ತು ಪಡೆದ ಡಾಕ್ಟರ್: ಕಾರ್ಯಕ್ರಮದಲ್ಲಿ ಹುಣಸೂರು ಕಾವೇರಿ ಆಸ್ಪತ್ರೆಯ ಡಾ.ಲೋಹಿತ್ ತಾಲೂಕಿನ ಮಧುಗಿರಿಕೊಪ್ಪಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ದತ್ತು ಪಡೆದು ಮಾತನಾಡಿ, ಈಗ ಒಂದು ಶಾಲೆಯನ್ನು ದತ್ತು ಪಡೆಯುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಶಾಲೆಗಳನ್ನು ದತ್ತು ಪಡೆಯುವ ಮೂಲಕ ಶೈಕ್ಷಣಿಕ ಕ್ಷೇತ್ರಕ್ಕೆ ನಮ್ಮ ಅಳಿಲು ಸೇವೆಯನ್ನು ಮಾಡುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ 45 ಮಂದಿ ಶಿಕ್ಷಕರುಗಳನ್ನು ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಪಡೆದ ಶಾಲೆಗಳ ಮುಖ್ಯಸ್ಥರನ್ನು ಶಾಸಕರು ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ, ಫಲ ತಾಂಬೂಲದೊಂದಿಗೆ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಡಾ. ಅಶೋಕ್, ತಾ.ಪಂ ಕಾರ್ಯ ನಿರ್ವಹಣಾಧಿಕಾರಿ ಬಿ.ಕೆ.ಮನು, ವೃತ್ತ ನಿರೀಕ್ಷಕ ದೇವೇಂದ್ರ, ನಗರಸಭಾ ಸದಸ್ಯರಾದ ರಾಧ ನಾರಾಯಣ್, ವಿವೇಕ್, ಕೆನರಾ ಬ್ಯಾಂಕಿನ ವ್ಯವಸ್ಥಾಪಕಿ ಶೃತಿ ಸುಲೋಚನಾ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಕೆಸಂತೋಷ್ ಕುಮಾರ್, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಕೆ.ಎಲ್.ರಾಜೇಂದ್ರ, ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಕೆ.ಎಸ್.ಮೋಹನ್ ರಾಜ್, ಪದವಿ ಪೂರ್ವ ಕಾಲೇಜುಗಳ ನೋಡಲ್ ಅಧಿಕಾರಿ ನಾಗರಾಜೇ ಅರಸು, ಪ್ರಾ.ಶಾ.ಶಿ.ಸಂಘದ ಅಧ್ಯಕ್ಷ ನರಸಿಂಹ, ಕಸಾಪ ಅಧ್ಯಕ್ಷ ಹೆಚ್.ಕೆ.ಮಹದೇವು, ಪ್ರೌಢ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಜಿ. ಹರೀಶ್, ಶಿಕ್ಷಕರ ಸಹಕಾರ ಸಂಘದ ಅಧ್ಯಕ್ಷ ಕೆ.ಎಂ.ಮಹದೇವು ಅವರುಗಳು ಉಪಸ್ಥಿತರಿದ್ದರು.

ಹುಲಿಗೆ ಬಲಿಯಾದ ಬಾಲಕನ ಅಂತ್ಯಕ್ರಿಯೆ

ಶವ ಸಂಸ್ಕಾರದ ವೇಳೆ ಹೆಗಲು ಕೊಟ್ಟ ಇನ್ಸ್‌ಪೆಕ್ಟರ್






ಹೆಚ್.ಡಿ.ಕೋಟೆ, ಸೆ.5– ಹುಲಿ ದಾಳಿಗೆ ಬಲಿಯಾದ ಬಾಲಕ ಚರಣ್ ನಾಯಕ್‌ನ ಅಂತ್ಯಕ್ರಿಯೆಯನ್ನು ಸ್ವಗ್ರಾಮವಾದ ಕಲ್ಲಟ್ಟಿ ಗ್ರಾಮದಲ್ಲಿ ಮಂಗಳವಾರ ಗ್ರಾಮಸ್ಥರ ಸಮ್ಮುಖದಲ್ಲಿ ನೆರವೇರಿಸಲಾಯಿತು. ಹೆಚ್.ಡಿ.ಕೋಟೆ ತಾಲೂಕು ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಅವರು, ಅಂತ್ಯಕ್ರಿಯೆ ವೇಳೆ ನಡೆದ ಮೃತ ದೇಹದ ಮೆರವಣಿಗೆಯಲ್ಲಿ ಹೆಗಲು ಕೊಟ್ಟು ಸೌಹಾರ್ದತೆ ತೋರಿದ್ದಾರೆ ಆದರೆ ಶವಸಂಸ್ಕಾರದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ಭಾಗವಹಿಸದೇ ಇದ್ದಿದ್ದು ನೋವು ತಂದಿದೆ ಎಂದು ಗ್ರಾಮಸ್ಥರು ಅರಣ್ಯ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಾಲಕನನ್ನು ಬಲಿ ಪಡೆದ ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ಆರಂಭ

ಮೂರು ಸಾಕಾನೆಗಳು, 80ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ಭಾಗಿ

ಹೆಚ್.ಡಿ.ಕೋಟೆ, ಸೆ.5– ಶಾಲಾ ಬಾಲಕನೊಬ್ಬನನ್ನು ಬಲಿ ಪಡೆದ ಹುಲಿ ಸೆರೆಗೆ ಅರಣ್ಯ ಇಲಾಖೆ ಸಾಕಾನೆಗಳ ಸಹಾಯದಿಂದ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದೆ.



ತಾಲೂಕಿನ ಕಲ್ಲಹಟ್ಟಿ ಗ್ರಾಮದ ರೈತ ಕೃಷ್ಣನಾಯಕ ಮತ್ತು ಮಾದೇವಿ ಬಾಯಿ ಪುತ್ರ ಚರಣ್ ನಾಯಕ್ (9) ಸೋಮವಾರ ಶಾಲೆ ಮುಗಿಸಿಕೊಂಡು ತನ್ನ ತಂದೆ ತಾಯಿಯಿದ್ದ ಜಮೀನಿಗೆ ಹೋದಾಗ ಹುಲಿ ದಾಳಿ ನಡೆಸಿ ಬಲಿ ಪಡೆದಿತ್ತು. ಹುಲಿ ದಾಳಿಯಿಂದ ಭಯಭೀತರಾಗಿರುವ ಗ್ರಾಮಸ್ಥರು ಹುಲಿಯನ್ನು ಸೆರೆ ಹಿಡಿಯಬೇಕು ಎಂದು ಒತ್ತಾಯಿಸಿದ್ದು, ಸಾಕಾನೆಗಳ ಸಹಾಯದಿಂದ ಅರಣ್ಯ ಇಲಾಖೆ ಕೂಂಬಿಂಗ್ ಕಾರ್ಯಾಚರಣೆಯನ್ನು ಆರಂಭಿಸಿದೆ.

ಸಾಕಾನೆಗಳಾದ ಅರ್ಜುನ, ಅಶ್ವತ್ಥಾಮ, ಮಹಾರಾಷ್ಟ್ರ ಭೀಮ ಎಂಬ ಮೂರು ಆನೆಗಳ ಸಹಾಯದಿಂದ ಕೂಂಬಿಂಗ್ ಆರಂಭಿಸಿದ್ದು, ವಿವಿಧ ತಂಡಗಳಾಗಿ ಸುಮಾರು 80 ಮಂದಿ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ. ಕೂಂಬಿಂಗ್ ವೇಳೆ ಹುಲಿಯ ಹಜ್ಜೆ ಗುರುತುಗಳು ಪತ್ತೆಯಾಗಿವೆ. ಸದ್ಯ ಹುಲಿ ಸೆರೆಯಾಗುವವರೆಗೂ ಗ್ರಾಮಸ್ಥರು ತಮ್ಮ ತಮ್ಮ ಜಮೀನುಗಳಿಗೆ ಹೋಗದಂತೆ, ಒಬ್ಬಂಟಿಯಾಗಿ ಓಡಾಡದಂತೆ ಅರಣ್ಯ ಇಲಾಖೆ ಎಚ್ಚರಿಕೆ ನೀಡಿದೆ. ವಿವಿಧ ಭಾಗಗಳಲ್ಲಿ ಸುಮಾರು 30 ಬೋನುಗಳನ್ನಿಟ್ಟು ಹುಲಿ ಸೆರೆಗೆ ಬಲೆ ಬೀಸಲಾಗಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಡಿಸಿಎಫ್ ಹರ್ಷಕುಮಾರ್ ಚಿಕ್ಕನರಗುಂದ, ಸಿಸಿಎಫ್ ಕುಮಾರ್, ಪುಷ್ಕರ್ ಇನ್ನು ಹಲವಾರು ಅರಣ್ಯ ಅಧಿಕಾರಿಗಳು ಭಾಗಿಯಾಗಿದ್ದಾರೆ. ಅರಣ್ಯ ಇಲಾಖೆ ಹುಲಿ ಕಾರ್ಯಾಚರಣೆ ಸಂದರ್ಭದಲ್ಲಿ ಕಲ್ಲಟ್ಟಿ ಗ್ರಾಮದ ಸಮೀಪ ಇರುವ ಸಿದ್ದಾಪುರ ಗ್ರಾಮದ ಬಳಿ ಬಾಲಕನನ್ನು ಕೊಂದು ಹಾಕಿದ ಹುಲಿಯೇ ಸಿದ್ದಾಪುರ ಗ್ರಾಮದ ನಿವಾಸಿಯಾದ ಜಯಮ್ಮ ಎಂಬುವರ ಹಸುವನ್ನು ಕೊಂದು ಕಾಡಿನತ್ತ ಎಳೆದುಕೊಂಡು ಹೋಗಿದ್ದನ್ನು ಕಣ್ಣಾರೆ ಕಂಡ ಗ್ರಾಮಸ್ಥರುಗಳು ಮತ್ತೆ ಭಯಭೀತಿಗೊಂಡಿದ್ದಾರೆ ಎಂದು ಕಲ್ಲಟ್ಟಿ ಗ್ರಾಮದ ನಿವಾಸಿ ಕುಮಾರ್ ನಾಯಕ್ ತಿಳಿಸಿದ್ದಾರೆ.

ಅಪ್ರಾಪ್ತೆ ವಿವಾಹವಾಗಿದ್ದ ಯುವಕ ಜೈಲಿಗೆ

ಹುಣಸೂರು, ಸೆ.5– ಅಪ್ರಾಪ್ತ ಬಾಲಕಿಯನ್ನು ಕರೆದೊಯ್ದು ವಿವಾಹ ಮಾಡಿಕೊಂಡಿದ್ದ ಯುವಕನ ವಿರುದ್ಧ ಪೋಕ್ಸೋ ಕಾಯ್ದೆಯಡಿ ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ಕೆಆರ್.ನಗರ ಟೌನಿನ ಯುವಕ ಆನಂದ ಎಂಬಾತನೇ ಬಂಧಿತ ಆರೋಪಿ, ಈತ ಕೆಆರ್.ನಗರ ಟೌನಿನ ಅನ್ಯ ಧರ್ಮೀಯ ಬಾಲಕಿಯನ್ನು ಹುಣಸೂರು ತಾಲೂಕಿನ ಗ್ರಾಮವೊಂದರಿಂದ ಕಳೆದ ನಾಲ್ಕು ತಿಂಗಳ ಹಿಂದೆ ಕರೆದೊಯ್ದಿದ್ದ, ಬಾಲಕಿ ಕಡೆಯವರು ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಬಾಲಕಿ ನಾಪತ್ತೆಯಾಗಿರುವ ಬಗ್ಗೆ ಪ್ರಕರಣ ದಾಖಲಿಸಿದ್ದರು.

ಬೆಂಗಳೂರಿನಲ್ಲಿದ್ದ ಈತ ಬಾಲಕಿಗೆ 18 ವರ್ಷ ತುಂಬಿದ ಹಿನ್ನೆಲೆಯಲ್ಲಿ ತಾನೇ ಠಾಣೆಗೆ ಕರೆದುಕೊಂಡು ಬಂದು ಮದುವೆಯಾಗಿರುವುದಾಗಿ ತಿಳಿಸಿದ್ದ. ಆದರೆ ಆಕೆಯನ್ನು ಕರೆದೊಯ್ಯುವಾಗ ಅಪ್ರಾಪ್ತೆಯಾಗಿದ್ದ ಹಿನ್ನೆಲೆಯಲ್ಲಿ ಪೊಲೀಸರು ಆನಂದನನ್ನು ಬಂಧಿಸಿ, ಮೋಕ್ಸೊ ಕಾಯ್ದೆಯಡಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ. ಆಕೆಯನ್ನು ಸಾಂತ್ವನ ಕೇಂದ್ರಕ್ಕೆ ಕಳುಹಿಸಲಾಗಿದೆ.

ತಮಿಳುನಾಡಿಗೆ ನೀರು ಬಿಡುತ್ತಿರುವುದಕ್ಕೆ ಆಕ್ರೋಶ

ಬನ್ನೂರಿನಲ್ಲಿ ಅರೆಬೆತ್ತಲೆಯಾಗಿ ರಸ್ತೆ ತಡೆದ ರೈತರು



ಬನ್ನೂರು, ಸೆ.5– 'ರಾಜ್ಯದ ಜನರಿಗೆ ಕುಡಿಯಲು ನೀರಿಲ್ಲ. ಬರಗಾಲದ ಛಾಯೆ ಆವರಿಸಿ ರೈತಾಪಿ ವರ್ಗ ಕಣ್ಣೀರಲ್ಲಿ ಮಲಗುವಂತಾಗಿದ್ದರೂ ಸರ್ಕಾರ ತನ್ನ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳಲು ಮುಂದಾಗಿ ಪಕ್ಕದ ರಾಜ್ಯದ ರೈತರ ಹಿತವನ್ನು ಕಾಪಾಡಲು ಮುಂದಾಗಿದೆ' ಎಂದು ತಮಿಳುನಾಡಿಗೆ ನೀರು ಬಿಡುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ (ಮೂಲ ಸಂಘಟನೆ) ಜಿಲ್ಲಾಧ್ಯಕ್ಷ ಬನ್ನೂರು ನಾರಾಯಣ್ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಕಾವೇರಿ ಸೇತುವೆ ಬಳಿಯಲ್ಲಿ ತಮಿಳುನಾಡಿಗೆ ನೀರು ಬಿಡುತ್ತಿರುವ ರಾಜ್ಯದ ಕ್ರಮವನ್ನು ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ(ಮೂಲ ಸಂಘಟನೆ)ದಿಂದ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಮೈಸೂರು ಮಳವಳ್ಳಿ ಮುಖ್ಯರಸ್ತೆಯನ್ನು ಅರೆಬೆತ್ತಲೆಯಾಗಿ ತಡೆದು ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ಜಲಾನಯನ ಪ್ರದೇಶಗಳಾದ ಸಿಡಿಎಸ್ ನಾಲೆ, ವಿಸಿ ನಾಲೆಯ ಸುಮಾರು 6000 ಎಕರೆ ಪ್ರದೇಶದಲ್ಲಿ ಸುಮಾರು 10 ಸಾವಿರ ರೂ. ಖರ್ಚು ಮಾಡಿ ನಾಟಿ ಕಾರ್ಯಕ್ಕೆ ಮುಂದಾಗಿದ್ದು, ಯಶಸ್ವಿಯೂ ಆಗಿದೆ. ಆದರೆ ಇದೀಗ ಪೈರಿಗೆ ನೀರುಣಿಸುವ ಸಮಯದಲ್ಲಿ ನಾಲೆಗಳಿಗೆ ನೀರನ್ನು ಬಿಡದೇ ರೈತರಿಗೆ ಅನ್ಯಾಯ ಎಸಗುವ ಕಾರ್ಯವನ್ನು ಮಾಡುತ್ತಿದ್ದಾರೆ. ಕೂಡಲೇ ನಾಲೆಗಳಿಗೆ ನೀರನ್ನು ಬಿಡುವ ಮೂಲಕ ರೈತರ ಹಿತ ಕಾಯುವ ಕೆಲಸವನ್ನು ಮಾಡಬೇಕೆಂದು ಆಗ್ರಹಿಸಿದರು.

ಅತ್ತಹಳ್ಳಿ ರಾಜು ಮಾತನಾಡಿ, ಹಿಂದೆಲ್ಲ ಕೆಆರ್‌ಎಸ್ ಅಣೆಕಟ್ಟೆಯಲ್ಲಿ 90 ಅಡಿಗಳಿದ್ದರೂ ರಾಜ್ಯದ ಜನರ ಹಿತದೃಷ್ಟಿಯಿಂದ ಮೊದಲು ನೀರು ಒದಗಿಸುವ ಕಾರ್ಯವನ್ನು ಮಾಡುತ್ತಿದ್ದರು. ಆದರೆ ಇದೀಗ ಸನ್ನಿವೇಶವೇ ಬದಲಾಗಿದ್ದು, ತಮ್ಮ ರಾಜಕೀಯ ಉದ್ಧಾರಕ್ಕಾಗಿ ಅನ್ಯ ರಾಜ್ಯಕ್ಕೆ ಮೊದಲು ನೀರು ಕೊಡುವ ಕೆಲಸವನ್ನು ಮಾಡುತ್ತಿದ್ದಾರೆ. ಇದು ಹೀಗೆ ಮುಂದುವರೆದರೆ ಮುಂದಿನ ದಿನಗಳಲ್ಲಿ ತಕ್ಕ ಪ್ರತಿಫಲವನ್ನು ಪಡೆಯಬೇಕಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ರೈತರು, ಅಧಿಕಾರಿಗಳು ಹಾಗೂ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ನಂತರ ಸ್ಥಳಕ್ಕೆ ಆಗಮಿಸಿದ ಕಾರ್ಯಪಾಲಕ ಅಭಿಯಂತರ ವಾಸುದೇವ್ ಇನ್ನೆರಡು ದಿನಗಳಲ್ಲಿ ನೀರು ಬಿಡುವ ಭರವಸೆಯನ್ನು ನೀಡಿದ ನಂತರ ಪ್ರತಿಭಟನೆಯನ್ನು ಹಿಂಪಡೆದು ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಯಿತು.

ಪ್ರತಿಭಟನೆಯಲ್ಲಿ ಬೆಟ್ಟಹಳ್ಳಿ ಶಿವರಾಂ, ಶಿವಸ್ವಾಮಿ, ಸುಬ್ಬೇಗೌಡ, ಗಿರೀಶ, ರಂಗಸ್ವಾಮಿ, ಯಾಚೇನಹಳ್ಳಿ ಚಿನ್ನಸ್ವಾಮಿ, ಅಂದಾನಿಗೌಡ, ರವಿ, ಉಕ್ಕಲಗೆರೆ ಶಿವಶಂಕರಪ್ಪ ಪರದೇಶ್, ಪಾರ್ಥ, ಎಂವಿ. ಕೃಷ್ಣಪ್ಪ, ಕೃಷ್ಣಪ್ಪ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಅನೇಕ ರೈತರು ಭಾಗವಹಿಸಿದ್ದರು.

ಶಿಕ್ಷಕರು ವಿದ್ಯಾರ್ಥಿಗಳ ಬದುಕಿನ ದಾರಿದೀಪ

ನಂ.ಗೂಡು ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ದರ್ಶನ್ ಅಭಿಪ್ರಾಯ



ನಂಜನಗೂಡು, ಸೆ.5– ದೇಶದ ಪ್ರಗತಿಗೆ ಶಿಕ್ಷಣವೇ ಪ್ರಮುಖ ಅಸ್ತ್ರ ಶಿಕ್ಷಕರು ವಿದ್ಯಾರ್ಥಿಗಳ ಬದುಕಿನ ದಾರಿದೀಪ, ವಿದ್ಯಾರ್ಥಿಗಳ ಬದುಕನ್ನು ರೂಪಿಸುವಲ್ಲಿ ಶಿಕ್ಷಕರು ಮಹತ್ವದ ಪಾತ್ರ ವಹಿಸುತ್ತಾರೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ಮಂಗಳವಾರ ನಗರದ ಕಮಲಮ್ಮ ಗುರುಮಲ್ಲಪ್ಪ ಕಲ್ಯಾಣ ಮಂಟಪದಲ್ಲಿ ಶಾಲಾ ಶಿಕ್ಷಣ ಇಲಾಖೆ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ತಾಯಿ, ತಂದೆಯ ನಂತರ ಪ್ರಮುಖವಾಗಿ ಹೆಚ್ಚಿನ ಸಮಯವನ್ನು ಕಳೆಯುವುದು ಶಾಲೆಯಲ್ಲಿ ಶಿಕ್ಷಕರ ಜೊತೆಗೆ ಮಾತ್ರ. ಆದ್ದರಿಂದಲೇ ಮಗುವಿನ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಹೆಚ್ಚಿನದಾಗಿದೆ. ಶಿಕ್ಷಕರು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿದು ಅವರ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಆದ್ದರಿಂದಲೇ ಡಾ. ಎಪಿಜೆ ಅಬ್ದುಲ್ ಕಲಾಂರವರು ಉತ್ತಮ ಸಮಾಜ ನಿರ್ಮಾಣ ಕಾರ್ಯದಲ್ಲಿ ಮತ್ತು ವ್ಯಕ್ತಿಯ ಭವಿಷ್ಯ ನಿರ್ಮಾಣದಲ್ಲಿ ತಂದೆ, ತಾಯಿ, ನಂತರ ಶಿಕ್ಷಕ ಮೂವರು ಪ್ರಮುಖ ವ್ಯಕ್ತಿಗಳು ಪ್ರಾಮುಖ್ಯತೆ ಪಡೆಯುತ್ತಾರೆ ಎಂದಿದ್ದಾರೆ ಎಂದರು.

ನಾನು ಈ ಹಂತಕ್ಕೆ ಬೆಳೆಯಲು ನಾನು ಕಲಿತ ಶಾಲೆಗಳ ಅಷ್ಟು ಮಂದಿ ಶಿಕ್ಷಕರ ಪಾತ್ರ ಹಿರಿದಾದುದು, ನಾನು ಕಲಿತ ಶಾಲೆ, ಕಾಲೇಜುಗಳ ಅಷ್ಟು ಮಂದಿ ಶಿಕ್ಷಕರ ಹೆಸರುಗಳನ್ನು ತಪ್ಪದೆ ಹೇಳಬಲ್ಲೆ, ಅವರುಗಳೊಂದಿಗೆ ನಿರಂತರ ಸಂಪರ್ಕ ಹೊಂದಿದ್ದೇನೆ ಎಂದು ಹೇಳಿದರು.

ನಗರದಲ್ಲಿ ಶಿಕ್ಷಕರ ಭವನ ನಿರ್ಮಿಸಲು 1.15 ಎಕರೆ ವಿಸ್ತೀರ್ಣದ ನಿವೇಶನವನ್ನು ಸರ್ಕಾರ ಮಂಜೂರು ಮಾಡಿದೆ, ಮುಂದಿನ ಬಜೆಟ್‌ನಲ್ಲಿ ಶಿಕ್ಷಕರ ಭವನ ನಿರ್ಮಾಣ ಮಾಡಲು ಹೆಚ್ಚಿನ ಅನುದಾನ ಪಡೆದುಕೊಂಡು ತಾಲೂಕಿನ ಶಿಕ್ಷಕರ ಆಶಯದಂತೆ ಭವ್ಯ ಗುರುಭವನ ನಿರ್ಮಿಸಲಾಗುವುದು ಹಾಗೂ ಶಿಕ್ಷಕರುಗಳ ಬೇಡಿಕೆಯಂತೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಪ್ರಸ್ತುತವಿರುವ ಎನ್‌ಪಿಎಸ್ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಳಿಗೆ, ಶಿಕ್ಷಕರೊಂದಿಗೆ ನಿಯೋಗ ತೆರಳಿ ಮನವಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಮುಖ್ಯ ಭಾಷಣಕಾರರಾಗಿದ್ದ ರಾಜ್ಯಮಟ್ಟದ ಕಾಯಕರತ್ನ ಪ್ರಶಸ್ತಿ ಪುರಸ್ಕೃತರು ಹುಣಸೂರು ತಾಲೂಕಿನ ನೇರಳಕುಪ್ಪೆ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಕುಮಾರಸ್ವಾಮಿ ಮಾತನಾಡಿ, ಶಿಕ್ಷಕ ವೃತ್ತಿ ಪವಿತ್ರವಾದ ವೃತ್ತಿ, ದೇಶ ಮುನ್ನಡೆ ಸಾಧಿಸಲು ಗುರುವಿನ ಪಾತ್ರ ಹಿರಿದಾಗಿದೆ. ರಾಷ್ಟ್ರವನ್ನು ಕಟ್ಟುವ ಯುವಪೀಳಿಗೆಗೆ, ಮುಕ್ತ ಮನಸ್ಸುಗಳಿಗೆ ಒಳ್ಳೆಯ ಆಲೋಚನೆಗಳನ್ನು, ಒಳ್ಳೆಯ ವ್ಯಕ್ತಿತ್ವವನ್ನು ಬಿತ್ತುವಂತವರು ಶಿಕ್ಷಕರು. ಆದ್ದರಿಂದ ಶಿಕ್ಷಕರು ವೃತ್ತಿಯಲ್ಲಿ ನಾವೀನ್ಯತೆಯ ಕೌಶಲ್ಯವನ್ನು ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಶಿಕ್ಷಕ, ಶಿಕ್ಷಕಿಯರನ್ನು ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಹಾಗೂ ತಾಲೂಕಿನಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾದವರನ್ನು ನಗದು ಪುರಸ್ಕಾರ ನೀಡಿ, ಗೌರವಿಸಲಾಯಿತು.

ಸಮಾರಂಭದಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಕ್ಷೇತ್ರ ಶಿಕ್ಷಣಾಧಿಕಾರಿ ಎ.ಟಿ.ಶಿವಲಿಂಗಯ್ಯ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮ ರತ್ನಾಕರ, ಕಾರ್ಯದರ್ಶಿ ಸ್ವಾಮೇಶ್, ರಂಗನಾಥ್, ಗೌರವಾಧ್ಯಕ್ಷ ಮುದ್ದುಮಾದೇಗೌಡ, ರಾಜೇಂದ್ರ, ಸಿ.ಕಾರಯ್ಯ, ನೀಲಿಸಿದ್ದು, ಶ್ರೀಪತಿ, ವೀರಭದ್ರ, ಪುಟ್ಟರಾಜು, ಮಹೇಶ್, ಸಿಆರ್‌ಪಿಗಳಾದ ಕಿರಣ್, ಗಿರೀಶ್, ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ನಟರಾಜ್, ಕಾರ್ಯದರ್ಶಿ ಕುಮಾರಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಮಿಸ್ಟೇಕ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಡ್ರೀಮ್ ಗರ್ಲ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೌಶಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಖುಷಿ (ತೆ)	4 ಪ್ರದರ್ಶನಗಳು
ಸಂಗಂ	
ಟೋಬಿ (ಕ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಕೌಸಲ್ಯ ಸುಪ್ರಜಾ ರಾಮ (ಕ):** ಬೆ.10ಕ್ಕೆ, **ಜೈಲರ್ (ತ):** ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, **ಕಿಂಗ್ ಆಫ್ ಕೋಥಾ (ಮ):** ರಾ.10.25ಕ್ಕೆ.
ಸ್ಕ್ರೀನ್ 2	**ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ):** ಬೆ.9.50ಕ್ಕೆ, **ಜೈಲರ್ (ಕ):** ಮ.1ಕ್ಕೆ, **ಗದರ್ 2 (ಹಿಂ):** ಸಂ.4.10ಕ್ಕೆ, **ಡ್ರೀಂ ಗರ್ಲ್ (ಹಿಂ):** ರಾ.7.25ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 3	**ರಾಮಚಂದ್ರ ಬಾಸ್ & ಕೋ (ಮ):** ಬೆ.10ಕ್ಕೆ, **ಗ್ರ್ಯಾನ್ ಟುರಿಸ್ಮೋ (ಇಂ):** ಮ.1.30ಕ್ಕೆ, ರಾ.7.20ಕ್ಕೆ, **ಗಾಂಢೀವಧಾರಿ ಅರ್ಜುನ (ತೆ):** ಸಂ.4.30ಕ್ಕೆ, **ಅಖೇಲಿ (ಹಿಂ):** ರಾ.10ಕ್ಕೆ.
ಸ್ಕ್ರೀನ್ 4	**ಟೋಬಿ (ಕ):** ಬೆ.10ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	**ಜೈಲರ್ (ಕ):** ಬೆ.11.20ಕ್ಕೆ, ರಾ.9.50ಕ್ಕೆ, **ಜೈಲರ್ (ತ):** ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	**ಗೂಮರ್ (ಹಿಂ):** ಬೆ.9.55ಕ್ಕೆ, **ಓಎಂಜಿ 2 (ಹಿಂ):** ಮ.12.55ಕ್ಕೆ, ರಾ.7.15ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಸಂ.4.10ಕ್ಕೆ, **ಬ್ಲೂ ಬೀಟಲ್ (ಇಂ):** ರಾ.10.30ಕ್ಕೆ.
ಸ್ಕ್ರೀನ್ 3	**ಗದರ್ 2 (ಹಿಂ):** ಬೆ.9.55ಕ್ಕೆ, **ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ):** ಮ.1.25ಕ್ಕೆ, **ಬ್ಲೂ ಬೀಟಲ್ (ಇಂ):** ಸಂ.4.55ಕ್ಕೆ, **ಆಚಾರ್ & ಕೋ (ಕ):** ರಾ.7.45ಕ್ಕೆ, **ಗೂಮರ್ (ಹಿಂ):** ರಾ.10.10ಕ್ಕೆ.
ಸ್ಕ್ರೀನ್ 4	**ಜೈಲರ್ (ತ):** ಬೆ.10.30ಕ್ಕೆ, **ಗದರ್ 2(ಹಿಂ):** ಮ.2ಕ್ಕೆ, ಸಂ.6.10ಕ್ಕೆ, **ಓಎಂಜಿ 2 (ಹಿಂ):** ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಈ ಪಟ್ಟಣಕ್ಕೆ ಏನಾಗಿದೆ (ಕ):** ಬೆ.10.45ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ಮ.1.15ಕ್ಕೆ, **ಶೀಲಾ (ಕ):** ಸಂ.4.15ಕ್ಕೆ, **ಡಿಡಿ ರಿಟರ್ನ್ಸ್ (ತ):** ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	**ಕೌಸಲ್ಯ ಸುಪ್ರಜಾ ರಾಮ (ಕ):** ಬೆ.1.15ಕ್ಕೆ, ರಾ.7ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)** ಸಂ.4.15ಕ್ಕೆ.
ಸ್ಕ್ರೀನ್ 3	**ಕೌಸಲ್ಯ ಸುಪ್ರಜಾ ರಾಮ (ಕ):** ಬೆ.10.30ಕ್ಕೆ, ಸಂ.4ಕ್ಕೆ, **ಮೆಗ್ 2 ದಿ ಟ್ರೆಂಚ್ (3ಡಿ) (ಇಂ):** ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	**ಮೆಗ್ 2 ದಿ ಟ್ರೆಂಚ್ (3ಡಿ)(ಇಂ):** ಬೆ.10.45ಕ್ಕೆ, **ನಮೋ ಭೂತಾತ್ಮ (ಕ):** ಮ.1.10ಕ್ಕೆ, ಮ.3.50ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ಸಂ.6.30ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ರಾ.9.15ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಲಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬೆಳೆಗಿಂತಲೂ ಹಾಲಿಗೆ ನಿಖರವಾದ ಬೆಲೆ ಸಿಗಲಿದೆ



ತಿ.ನರಸೀಪುರ, ಸೆ.5 –ರೈತ ಯಾವುದೇ ಬೆಳೆ ಬೆಳೆದರೂ ಅದಕ್ಕೆ ಸ್ಥಿರವಾದ ಬೆಲೆ ಇರುವುದು ಅಪರೂಪ. ಆದರೆ ಹಾಲಿಗೆ ಯಾವಾಗಲೂ ನಿಖರವಾದ ಮತ್ತು ಸ್ಥಿರವಾದ ಬೆಲೆ ಇರಲಿದ್ದು ರೈತರು ಹೆಚ್ಚು ಹಾಲು ಉತ್ಪಾದನೆಗೆ ಒತ್ತು ನೀಡಬೇಕು ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಕರೆ ನೀಡಿದರು. ತಾಲೂಕಿನ ಬೆನಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ 2022–23 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ರೈತರು ಅನೇಕ ಬೆಳೆಗಳನ್ನು ಬೆಳೆದು ಫಸಲು ತೆಗೆಯುತ್ತಾರೆ. ಆದರೆ ಅದರ ದುಡಿಮೆಯ ಹಣ ಕೈ ಸೇರಬೇಕಾದರೆ ಕನಿಷ್ಠ 5 ರಿಂದ 6 ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಅಲ್ಲದೇ ಯಾವುದೇ ಬೆಳೆಗಳಿಗೆ ಸ್ಥಿರವಾದ ಬೆಲೆ ಇರಲು ಸಾಧ್ಯವಿಲ್ಲ. ಕಾಲಮಾನಕ್ಕೆ ತಕ್ಕಂತೆ ಬೆಲೆ ವ್ಯತ್ಯಾಸವಾಗುತ್ತಿರುತ್ತದೆ. ಕೆಲವೊಮ್ಮೆ ರೈತ ಬೆಳೆದ ಬೆಳೆಯ ಖರ್ಚು ಸಹ ಸಿಗದೇ ನಷ್ಟ ಅನುಭವಿಸಬೇಕಾಗುತ್ತದೆ ಎಂದರು. ಸಂಘದ ಕಾರ್ಯದರ್ಶಿ ಮಾದಪ್ಪ ಸಂಘದ ವಾರ್ಷಿಕ ವರದಿ ಮಂಡಿಸಿದರು. ಸಂಘದ ಅಧ್ಯಕ್ಷ ಬಿ.ಎಂ.ಬಸವಣ್ಣ ಉಪಾಧ್ಯಕ್ಷ ಬಿ.ಜಿ.ರಮೇಶನ್, ನಿರ್ದೇಶಕರಾದ ಬಿ.ಎಂ.ಮಹದೇವಸ್ವಾಮಿ, ಸಿದ್ದಪ್ಪ ಬಿ.ಎಸ್.ಬಸಪ್ಪ ಶಿವಪಾದ, ರಾಜಶೆಟ್ಟಿ ಶಿವಮ್ಮ ಪ್ರೇಮ, ಶಿವಮ್ಮ ಹಾಲು ಪರೀಕ್ಷಕ ಬಿ.ಪಿ.ಮಹೇಶ್, ಸಹಾಯಕಿ ಹೂವಮ್ಮ ವೇತನ ಕಾರ್ಯದರ್ಶಿ ಜಿ.ಮಾದಪ್ಪ ಸೋಸಲೆ ಪಿಎಸಿಸಿಎಸ್ ಮಾಜಿ ಅಧ್ಯಕ್ಷ ಬಿ.ಎನ್ ಪ್ರಭುಸ್ವಾಮಿ ಮತ್ತಿತರರಿದ್ದರು.

ಚಾಮಶೆಟ್ಟಿ ನಿಧನ



ಹೆಚ್.ಡಿ.ಕೋಟೆ, ಸೆ.5– ತಾಲೂಕಿನ ಬಾಚೇಗೌಡನಹಳ್ಳಿ ಗ್ರಾಮದ ನಿವಾಸಿ ಚಾಮಶೆಟ್ಟಿ(48) ಹೃದಯಾಘಾತದಿಂದ ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯನ್ನು ಬುಧವಾರ 11 ಘಂಟೆಗೆ ಸ್ವಗ್ರಾಮವಾದ ಬಾಚೇಗೌಡನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.



ಐಸಿಸಿ ಏಕದಿನ ವಿಶ್ವಕಪ್ ಕ್ರಿಕೆಟ್–2023

ಭಾರತ ತಂಡ ಪ್ರಕಟ

ರಾಹುಲ್, ಸೂರ್ಯಕುಮಾರ್‌ಗೆ ಸ್ಥಾನ



ನವದೆಹಲಿ, ಸೆ.5– ಬಹು ನಿರೀಕ್ಷಿತ ಐಸಿಸಿ ಏಕದಿನ ವಿಶ್ವಕಪ್ 2023 ಟೂರ್ನಿಗೆ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಅ.5ರಿಂದ ಆರಂಭವಾಗಲಿರುವ ವಿಶ್ವಕಪ್ ಮಹಾಸಮರಕ್ಕೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ 15 ಸದಸ್ಯರ ಟೀಮ್ ಇಂಡಿಯಾ ಆಟಗಾರರ ತಂಡ ಪ್ರಕಟಿಸಿದೆ.


ಭಾರತದ ನಾಯಕ ರೋಹಿತ್ ಶರ್ಮಾ ಮತ್ತು ಬಿಸಿಸಿಐ ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರ್ಕರ್ ಕ್ಯಾಂಡಿಯಲ್ಲಿ ಸುದ್ದಿಗೋಷ್ಠಿ ನಡೆಸಿ ತಂಡವನ್ನು ಪ್ರಕಟಿಸಿದ್ದಾರೆ. ಕೆಎಲ್ ರಾಹುಲ್ ಭಾರತ ತಂಡದ ಪ್ರಮುಖ ವಿಕೆಟ್–ಕೀಪರ್ ಮತ್ತು ಬ್ಯಾಟರ್ ಆಗಿ ಆಯ್ಕೆ ಆಗಿದ್ದು, ಸಂಜು ಸ್ಯಾಮ್ಸನ್ ಅವರನ್ನು ಕೈಬಿಡಲಾಗಿದೆ.

ಏಷ್ಯಾ ಕಪ್ ಪಂದ್ಯಕ್ಕಾಗಿ ಶ್ರೀಲಂಕಾದಲ್ಲಿರುವ ಸಂಜು ಸ್ಯಾಮ್ಸನ್, ತಿಲಕ್ ವರ್ಮಾ ಮತ್ತು ಪ್ರಸಿದ್ಧ್ ಕೃಷ್ಣ ಅವರು ಭಾರತ ತಂಡದ ವಿಶ್ವಕಪ್ ಪಟ್ಟಿಯಿಂದ ಹೊರಗುಳಿದಿದ್ದಾರೆ. ಭರ್ಜರಿ ಫಾರ್ಮ್‌ನಲ್ಲಿರುವ ಇಶಾನ್ ಕಿಶನ್ ಬ್ಯಾಕಪ್ ವಿಕೆಟ್ ಕೀಪರ್ ಆಯ್ಕೆಯಾಗಿದ್ದಾರೆ. ಟೀಮ್ ಇಂಡಿಯಾದ ಬ್ಯಾಟಿಂಗ್ ಶಕ್ತಿಯನ್ನು ಹೆಚ್ಚಿಸುವ ದೃಷ್ಟಿಯಿಂದ ವಾಷಿಂಗ್ಟನ್ ಸುಂದರ್ ಮತ್ತು ಅನುಭವಿ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಇಬ್ಬರನ್ನೂ ಕೈಬಿಡಲಾಗಿದೆ. ಆಲ್‌ರೌಂಡರ್‌ಗಳಾದ ಅಕ್ಷರ್ ಪಟೇಲ್ ಮತ್ತು ಶಾರ್ದೂಲ್ ಠಾಕೂರ್ ಸ್ಥಾನ ಪಡೆದುಕೊಂಡಿದ್ದಾರೆ.

ರೋಹಿತ್ ಶರ್ಮಾ (ನಾಯಕ), ಶುಭ್‌ಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ಕೆಎಲ್ ರಾಹುಲ್ (ವಿಕೆಟ್ ಕೀಪರ್), ಇಶಾನ್ ಕಿಶನ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ (ಉಪ ನಾಯಕ), ರವೀಂದ್ರ ಜಡೇಜಾ, ಶಾರ್ದೂಲ್ ಥಾಕೂರ್, ಅಕ್ಷರ್ ಪಟೇಲ್, ಕುಲ್ದೀಪ್ ಯಾದವ್, ಜಸ್‌ಪ್ರಿತ್ ಬುಮ್ರಾ, ಮೊಹಮ್ಮದ್ ಶಮಿ ಮತ್ತು ಮೊಹಮ್ಮದ್ ಸಿರಾಜ್ ತಂಡದಲ್ಲಿದ್ದಾರೆ.

ಗಾಯದ ಸಮಸ್ಯೆಯ ಕಾರಣಕ್ಕೆ ರಾಹುಲ್ ಅವರು ಆಸ್ಟ್ರೇಲಿಯಾ ವಿರುದ್ಧದ ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್ ಫೈನಲ್, ವೆಸ್ಟ್ ಇಂಡೀಸ್ ವಿರುದ್ಧದ ಎಲ್ಲ 3 ಮಾದರಿಯ ಸರಣಿಯಿಂದ ಹೊರಗುಳಿದಿದ್ದರು. ಗಾಯದಿಂದ ಚೇತರಿಸಿಕೊಳ್ಳುತ್ತಿರುವಾಗಲೇ ಅವರನ್ನು ಏಷ್ಯಾ ಕಪ್ ತಂಡಕ್ಕೆ ಆಯ್ಕೆ ಮಾಡಲಾಗಿತ್ತು. ಆದರೆ ಅವರು ಮೊದಲೆರಡು ಪಂದ್ಯಗಳಿಂದ ಹೊರಗುಳಿದಿದ್ದಾರೆ. ಈಗ ನಡೆಯುತ್ತಿರುವ ಏಷ್ಯಾ ಕಪ್ ತಂಡದಲ್ಲಿ ಸ್ಥಾನ ಪಡೆದಿದ್ದ ಹೊಸ ಮುಖ ತಿಲಕ್ ವರ್ಮಾ ಹಾಗೂ ವೇಗದ ಬೌಲರ್ ಪ್ರಸಿದ್ಧ ಕೃಷ್ಣರನ್ನು ವಿಶ್ವಕಪ್ ತಂಡದಿಂದ ಕೈಬಿಡಲಾಗಿದೆ. ರಾಹುಲ್ ಜೊತೆಗೆ ಜಸ್ಪ್ರೀತ್ ಬುಮ್ರಾ, ಶ್ರೇಯಸ್ ಅಯ್ಯರ್ ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಏಷ್ಯಾಕಪ್‌ಗಾಗಿ ತಂಡದಲ್ಲಿ ಮೊದಲ ಬಾರಿ ಸ್ಥಾನ ಪಡೆದಿದ್ದ ತಿಲಕ್ ವರ್ಮಾ, ಸ್ಪಿನ್ನರ್ ಯಜುವೇಂದ್ರ ಚಹಾಲ್, ವಿಶ್ವಕಪ್ ತಂಡದಿಂದಲೂ ಹೊರಗುಳಿದಿದ್ದಾರೆ.

ಜ್ಯೂಸ್ ಎಂದು ಕೀಟನಾಶಕ ಕುಡಿದು 2 ವರ್ಷದ ಮಗು ದಾರುಣ ಸಾವು!



ಬೆಂಗಳೂರು, ಸೆ.5– ಜ್ಯೂಸ್ ಎಂದು ಕೀಟನಾಶಕ ಕುಡಿದು 2 ವರ್ಷದ ಮಗು ಸಾವನ್ನಪ್ಪಿರುವ ಘಟನೆ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಕೃಷ್ಣಾಪುರ ಗ್ರಾಮದಲ್ಲಿ ನಡೆದಿದೆ. ರೈತ ದಂಪತಿ ಹನುಮಂತ್ ಮತ್ತು ಪುಷ್ಪಾ ಅವರ ಏಕೈಕ ಪುತ್ರ ಹೆಚ್.ಯಶ್ವಿಕ್ ಮೃತ ಮಗು. ರೇಷ್ಮೆ ಹುಳುವಿನ ಗೂಡಿಗೆ ಸಿಂಪಡಿಸಿಲು ಮನೆಯಲ್ಲಿ ಇರಿಸಿದ್ದ ದ್ರಾವಕವನ್ನು ಜ್ಯೂಸ್ ಎಂದು ಕುಡಿದಿದೆ. ಕೆಲವೇ ನಿಮಿಷಗಳಲ್ಲಿ ಮಗು ಹೊಟ್ಟೆ ನೋವೆಂದು ಅಳಲು ಆರಂಭಿಸಿದ್ದು, ತೀವ್ರವಾಗಿ ಅಸ್ವಸ್ಥಗೊಂಡಿದೆ. ಕೂಡಲೇ ಪೋಷಕರು ಮಗುವನ್ನು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ, ಅಷ್ಟರಲ್ಲಾಗಲೇ ಮಗು ಸಾವನ್ನಪ್ಪಿದೆ. ಈ ಸಂಬಂಧ ಚನ್ನಪಟ್ಟಣ ಗ್ರಾಮಾಂತರ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಆರಂಭಿಸಿದ್ದಾರೆ.

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ



(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
ದೂರವಾಣಿ: +91-80-22977666/276/433 ಟೆಲಿ-ಫ್ಯಾಕ್ಸ್:080-26534477
ಇ-ಮೇಲ್: director@jayadevacardiology.com / pstodirectorsjicr@gmail.com

ಸಂಖ್ಯೆ: ಎಸ್‌ಜೆಐಸಿಆರ್/ಎಂ.ಆರ್.ಡಿ/2023–24 ದಿನಾಂಕ:02.09.2023

ಸಾರ್ವಜನಿಕ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, **ಮೈಸೂರು ಶಾಖೆಯಲ್ಲಿನ 2010ನೇ ವರ್ಷದಿಂದ 2015ನೇ ವರ್ಷದವರೆಗಿನ ಒಳ ರೋಗಿಗಳ ಕಡತ (In-Patient File)** ಗಳನ್ನು ವಿಲೇವಾರಿ ಮಾಡುತ್ತಿದ್ದು, ಆಸಕ್ತಿಯುಳ್ಳ ರೋಗಿಗಳು/ರೋಗಿಗಳ ಸಂಬಂಧಿಕರುಗಳು ಸದರಿಯವರ ಒಳರೋಗಿ ಕಡತವನ್ನು ಪಡೆದುಕೊಳ್ಳಲು ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ, ಈ ಸಂಸ್ಥೆಯ ವೈದ್ಯಕೀಯ ದಾಖಲೆಗಳ ವಿಭಾಗದಲ್ಲಿ ಸಂಪರ್ಕಿಸಬಹುದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ.

ವಿ.ಸೂ: ಮೆಡಿಕೋ–ಲೀಗಲ್ ಕೇಸ್ ಕಡತಗಳು ಹಾಗೂ ಮರಣ ಹೊಂದಿದ ರೋಗಿಗಳ ವೈದ್ಯಕೀಯ ದಾಖಲೆಗಳನ್ನು ಹೊರತುಪಡಿಸಿ. ಹೆಚ್ಚಿನ ಮಾಹಿತಿಗಾಗಿ: ಶ್ರೀ ಗಣೇಶ್ ಎಂ.ಎಸ್. ವೈದ್ಯಕೀಯ ದಾಖಲೆಗಳ ತಂತ್ರಜ್ಞರು ಎಸ್‌ಜೆಐಸಿಆರ್, ಮೈಸೂರು ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ದೂ. ಸಂ: 0821–2336183 / 2336000 / 9986641444.

ಸಹಿ/–
ನಿರ್ದೇಶಕರು.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಕಡಕೊಳ.
ಮೈಸೂರು ಜಿಲ್ಲೆ.
ದೂ:0821–2970319 ಇಮೇಲ್:itstaff_ulb_kadakola@yahoo.com

ಸಂಖ್ಯೆ:ಪ.ಪಂ.ಕ:ಆ.ಶಾ:ಸಿ.ಆರ್:01:2023–24 ದಿನಾಂಕ:04.09.2023

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ ಕಡಕೊಳ ಪಟ್ಟಣ ಪಂಚಾಯಿತಿಗೆ ಸ್ವಚ್ಛ ಭಾರತ್ ಮಿಷನ್ 2.0 ಅಡಿಯಲ್ಲಿ ಐ.ಇ.ಸಿ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವ–ಸಹಾಯ ಸಂಘಗಳು/ಎನ್.ಜಿ.ಓ ಸದಸ್ಯರ ನೇಮಕಾತಿಗಾಗಿ ಆಸಕ್ತಿಯುಳ್ಳ ಸದಸ್ಯರಿಗೆ ಆಹ್ವಾನ.

2 ವರ್ಷಗಳ ಅವಧಿಗೆ ಕಡಕೊಳ ಪಟ್ಟಣ ಪಂಚಾಯಿತಿ ಜೊತೆಗೆ ಪೂರ್ಣಾವಧಿಗೆ ಐ.ಇ.ಸಿ ಚಟುವಟಿಕೆ ಕೈಗೊಳ್ಳಲು ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಲು NULM-DAY/NRLM/NGO ಅಡಿಯಲ್ಲಿ ನೋಂದಾಯಿತ SHG/NGO ಸದಸ್ಯರಿಂದ ಮೈಸೂರು ಜಿಲ್ಲೆ ಕಡಕೊಳ ಪಟ್ಟಣ ಪಂಚಾಯಿತಿಗೆ ಆಸಕ್ತಿಯ ಅಭಿವ್ಯಕ್ತಿಯನ್ನು ಆಹ್ವಾನಿಸುತ್ತಿದೆ. ಇದರ TOR ಆಯ್ಕೆ ಪ್ರಕ್ರಿಯೆ ಮತ್ತು ಗೌರವಧನಕ್ಕೆ ಸಂಬಂಧಿಸಿದ ವಿವರಗಳನ್ನು ಕೆಳಗೆ ತಿಳಿಸಲಾದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ **www.kadakolatown.mrc.gov.in**. NULM-DAY/NRLM/NGO ಯೊಂದಿಗೆ ನೊಂದಾಯಿಸಿಕೊಂಡ ಆಸಕ್ತ SHG/NGO ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು NULM-DAY/NRLM ಹಿಂಬರಹದೊಂದಿಗೆ ಮೇಲೆ ತಿಳಿಸಲಾದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗಧಿತ ನಮೂನೆಯಲ್ಲಿ **ದಿನಾಂಕ:04.09.2023 ರಿಂದ ದಿನಾಂಕ:08.09.2023 ರ ಸಂಜೆ 5.00 ಗಂಟೆಯ ಒಳಗಾಗಿ** ಇ–ಮೇಲ್ ಐಡಿ **ka.kadakola.tp@gmail.com**ಗೆ ಕಳುಹಿಸಬಹುದು. ಆಸಕ್ತಿಯುಳ್ಳ SHG/NGO ಸದಸ್ಯರು ಲಗತ್ತಿಸಬೇಕಾದ ದಾಖಲೆಗಳು **1.** ಗುರುತಿನ ಪುರಾವೆ **2.** ವಿಳಾಸದ ಪುರಾವೆ. **3.** ಅರ್ಹತಾ ಪಟ್ಟಿಯಲ್ಲಿ ನೊಂದಾಯಿಸಿಕೊಂಡಿರುವುದಕ್ಕೆ (ಎಂಪಾನೆಲ್) ದಾಖಲೆಗಳು. **4.** ಶೈಕ್ಷಣಿಕ ಅರ್ಹತೆ. **5.** NULM-DAY/NRLM ಹಿಂಬರಹದ ನಮೂನೆ **6.** NGO ಸದಸ್ಯರು ಚಾಲ್ತಿಯಲ್ಲಿರುವ ತಮ್ಮ ಸಂಸ್ಥೆಯ ನೊಂದಣಿ ಪತ್ರದ ಪ್ರತಿ.

ಆಯ್ಕೆಯಾದ ಅಭ್ಯರ್ಥಿಗಳನ್ನು ಈ ವಿಷಯದ ಕುರಿತು ತಿಳುವಳಿಕೆಯನ್ನು ನಿರ್ಣಯಿಸಲು **ದಿನಾಂಕ:13.09.2023 ರಂದು** ಸಂದರ್ಶನಕ್ಕೆ ಕರೆಯಲಾಗುವುದು. ಅಥವಾ ಮುಂದಿನ ದಿನಾಂಕ ತಿಳಿಸಲಾಗುವುದು.

ಸಹಿ/–
ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ಕಡಕೊಳ

DIPR/MYS/KAW/TA/300/2023-24

ತಂಬಾಕು ಬೋರ್ಡ್ / TOBACCO BOARD
(भारत सरकार, वाणिज्य एवं उद्योग मंत्रालय, वाणिज्य विभाग)
(GOVT. OF INDIA, MIN. OF COMMERCE)
नीलामी निदेशालय / DIRECTORATE OF AUCTIONS
1/9 III Cross, CSI Compound, 4th Floor,
Unity Building Annexe, Mission Road, बेंगलूरु / BENGALURU- 560 027
(आईएसओ से प्रमाणित संस्थान / An ISO Certified Organisation)
Phone: 080-22236599/22233304 Fax: 080-22225075
email: bangaloreoffice@tobaccoboard.co.in

Ref.No.TB/DOA/Pre-Auc-KK/Pub/GAD/2023-24 Date: 05.09.2023

TENDER NOTIFICATION

Sealed Tenders are invited from interested tenderers for the following contracts at Tobacco Board Offices in Karnataka during 2023-24 Auctions.

Sl No	Name of the Contract/Work	Last Date & time for closing the tenders	Date & time of opening the tender	EMD amount (In Rs.)	Cost of tender form inclusive of GST @ 18% (in Rs.)
1	Outsource Manpower Contract to be undertaken at Tobacco Board Office's in Karnataka (Two Bid System)	22.09.2023 11.30 AM	22.09.2023 12.00 Noon	4,00,000.00	1000.00 + GST @18%
2	Hiring of Vehicle to Tobacco Board Office's in Karnataka	22.09.2023 2.30 PM	22.09.2023 3.00 PM	20,000.00	500.00 + GST @18%

The bid documents for the above contracts are available on Tobacco Board's website i.e. **https://tobaccoboard.com/tenders.php** under Tender Section. These can also be obtained at DOA, Tobacco Board, Bangalore, Regional Manager's Offices, Mysuru and Periyapatna and all Auction superintendents in Karnataka by Paying the requisite fee. All the above tenders have to be dropped in the respective Tender Boxes kept **at the office of the Regional Manager, Tobacco Board, Mysuru only**. Tenders received by post or in person at the Office of the Directorate of Auctions, Tobacco Board, Bengaluru, Regional office, Tobacco Board, Mysuru and Periyapatna or at any of the Auction Platforms in Karnataka **will not be accepted.**

Sd/- Regional Manager
DOA, Bengaluru

ಸಾರ್ವಜನಿಕ ತಿಳುವಳಿಕೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಮಹದೇವಪುರ, 4ನೇ ಕ್ರಾಸ್. ಗಣಪತಿ ದೇವಸ್ಥಾನದ ಹತ್ತಿರ. ಮನೆ ನಂ.560ಬಿ ರಲ್ಲಿ ವಾಸವಾಗಿರುವ ಲೇಟ್ ಲಿಂಗಯ್ಯರವರ ಮಗನಾದ ಶ್ರೀ ರಮೇಶ ಎಲ್ ರವರ ಪರ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ನಮ್ಮ ಕಕ್ಷಿದಾರರು ಈ ನೋಟಿಸಿನ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಇದರ ಮಾಲೀಕರಾದ ಶ್ರೀ ಪೀಟರ್ ಡಿಸೋಜ ರವರಿಂದ ಕ್ರಯಕ್ಕೆ ಕೊಳ್ಳಲು ವ್ಯವಹಾರ ನಡೆಸುತಿದ್ದು, ಈ ಸ್ವತ್ತಿನ ಮೇಲೆ ಬೇರೆಯಾರಿಗಾದರೂ ಹಕ್ಕು ವಗೈರೆ ಮತ್ತು ಹಿತಾಸಕ್ತಿ ಇದ್ದಲ್ಲಿ ಈ ಕೆಳಗೆ ನಮೂದಿಸಿರುವ ನಮ್ಮ ಕಛೇರಿಯ ವಿಳಾಸಕ್ಕೆ ಈ ದಿನದಿಂದ 15 ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ಈ ಅವಧಿಯ ಒಳಗಾಗಿ ಯಾರು ಹಕ್ಕು ವಗೈರೆ ಬಗ್ಗೆ ತಿಳಿಸದಿದ್ದಲ್ಲಿ ಈ ಸ್ವತ್ತಿನ ಕ್ರಯದ ನೋಂದಾವಣೆಯ ನಂತರ ಬರುವ ತಕರಾರುಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಾಗಿರುವುದಿಲ್ಲವೆಂದು ತಿಳಿಯಪಡಿಸಿದೆ.

ಷೆಡ್ಯೂಲ್

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾಟೂರು ಗ್ರಾಮದಲ್ಲಿರುವ ಸರ್ವೆ ನಂ. 278ರಲ್ಲಿ 1 ಎಕರೆ 0.25 ಗುಂಟೆಯ ವಿಸ್ತೀರ್ಣದ ಜಮೀನಿಗೆ ಚಕ್ಕುಬಂಧಿ.

ಪೂರ್ವಕ್ಕೆ : ರಹಮಾನ್ ಷರೀಫ್ ರವರ ಜಮೀನು, ಪಶ್ಚಿಮಕ್ಕೆ: ಶ್ರೀಕಂಠಪ್ಪರವರ ಜಮೀನು, ಉತ್ತರಕ್ಕೆ: ಕಾವೇರಪ್ಪ ಮತ್ತು ಅಬ್ದುಲ್ ರಹೀಮ್ ರವರ ಜಮೀನು, ದಕ್ಷಿಣಕ್ಕೆ : ರಸ್ತೆ.

ಬಡಗಲಪುರ ಲಾ ಅಸೋಸಿಯೇಟ್ಸ್
ಸಹಿ/– ಬಿ.ಎಸ್.ನಾಗೇಂದ್ರ ಮತ್ತು ಸಹೋದ್ಯೋಗಿ ವಕೀಲರು # 2779 ರೈಲ್ವೆ ಗೇಟ್ ರಸ್ತೆ, ಕೆ.ಜಿ.ಕೊಪ್ಪಲ್, ಮೈಸೂರು.
ಮೊ: 9036446838, 9449264917

13ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಆರ್.ಸಿದ್ದಮ್ಮ ಎನ್.ನಂಜಪ್ಪ

ನೀವು ನಮ್ಮನ್ನಗಲಿ ಇಂದಿಗೆ 13 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಮಗ, ಸೊಸೆ, ಹೆಣ್ಣುಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಎಂ.ವಿನೋದ್

ಶ್ರಾವಣ ಮಾಸ ನಿಮಿತ್ತ ಶಿವಮೊಗ್ಗಾದಲ್ಲಿ ಮೆಗಾ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ

ಸೆಪ್ಟೆಂಬರ್ 6 ರಿಂದ 13 ರವರೆಗೆ | ಶ್ರಾವಣ ಮಾಸದಲ್ಲಿ ಧರಿಸುವುದು ಶುಭ



ಮೈಸೂರು: ಹೋಟೆಲ್ ಸಿಪಾಯಿ ಗ್ರಾಂಡೆ, ಎಂ.ಜಿ ರಸ್ತೆ, ಜೆಎಸ್‌ಎಸ್ ಆಸ್ಪತ್ರೆ ಎದುರು, ಅಗ್ರಹಾರ, ಮೈಸೂರು ದಿನಾಂಕ ಸೆಪ್ಟಂಬರ್ 6 ರಿಂದ 13 ರವರೆಗೆ ಹೈದ್ರಾಬಾದ್ ಮೂಲದ ಇಂಡಸ್–ನೇಪಾಳ ರುದ್ರಾಕ್ಷ ಸಂಸ್ಥೆ ಆಯೋಜಿಸಿರುವ ನೇಪಾಳದ ರುದ್ರಾಕ್ಷಿಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸಲಾಗಿದೆ. ಗ್ರಾಹಕರಿಗೆ ಭೂಮಿ ಮೇಲೆ ವಿರಳವಾಗಿ ದೊರಕುವ ಹಾಗೂ ರತ್ನದ ಹರಳುಗಳು ಸಹ ಲಭ್ಯ ಇವೆ. ವಿಶೇಷವಾಗಿರುವ ದುಂಡುಮುಖದ ಒಂದು ಮುಖ ಹೊಂದಿರುವ ರುದ್ರಾಕ್ಷಿಯೂ ಲಭ್ಯವಿದ್ದು, ಶ್ರಾವಣ ಮಾಸದಂದು ರುದ್ರಾಕ್ಷ ಧರಿಸುವುದರಿಂದ ಶುಭ ದಾಯಕವಾಗಲಿದೆ



ಈ ಕುರಿತು ಇಂಡಸ್–ನೇಪಾಳ ಸಂಸ್ಥೆಯ ನಿರ್ದೇಶಕ ನರೇಂದ್ರ ಕಾಶಿರೆಡ್ಡಿ ಮಾತನಾಡಿ, ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆದಾರದ ಮೇಲೆ ತಿಳಿಸಲಾಗುವುದು. ಅಸಲಿ ಹಾಗೂ ನಕಲಿ ರುದ್ರಾಕ್ಷಿಗಳ ಭಿನ್ನತೆ ತಿಳಿಸಲಾಗುವುದು. ಮೈಸೂರು ಜನತೆಗೆ ರುದ್ರಾಕ್ಷಿಗಳು ಸಿಗಲಿವೆ ಎಂದರು.

ಗುಣಮಟ್ಟದ ರುದ್ರಾಕ್ಷಿಗಳನ್ನು ಗ್ರಾಹಕರಿಗೆ ಮಾರಾಟ ಮಾಡುವುದರಲ್ಲಿ ಇಂಡಸ್–ನೇಪಾಳ ರುದ್ರಾಕ್ಷ ಸಂಸ್ಥೆ ವಿಶ್ವಾಸಾರ್ಹತೆ ಹೊಂದಿದೆ. ಆಸಕ್ತರಿಗೆ ಇತರ ಮುಖಗಳ ರುದ್ರಾಕ್ಷಿಗಳನ್ನು ತರಿಸಿ ಕೊಡಲಾಗುವುದು. ವ್ಯಕ್ತಿಯ ಜನ್ಮದಿನಾಂಕ ಆಧರಿಸಿ ಯಾವ ರಾಶಿಗೆ ಯಾವ ಮುಖದ ರುದ್ರಾಕ್ಷಿ ಸೂಕ್ತ ಎಂದು ನಿರ್ಧರಿಸಿ ಆ ಪ್ರಕಾರದ ರುದ್ರಾಕ್ಷಿ ಕೊಡಲಾಗುವುದು. ಎಂದು ತಿಳಿಸಿದ್ದಾರೆ. ಮಾಹಿತಿಗಾಗಿ ಸಂಪರ್ಕಿಸಿ: ನರೇಂದ್ರ ಕಾಸಿರೆಡ್ಡಿ 9885211449/7799211449